ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 16 ಸೋಮವಾರ 2024

ಸಂಪುಟ: 45 | ಸಂಚಿಕೆ: 151 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬಿಜೆಪಿ ಶಾಸಕ ಮುನಿರತ್ನ 2 ದಿನ ಪೊಲೀಸ್ ಕಸ್ಟಡಿಗೆ

ಬೆಂಗಳೂರು, ಸೆ.15– ಜೀವ ಬೆದರಿಕೆ, ಜಾತಿ ನಿಂದನೆ ಪ್ರಕರಣದಲ್ಲಿ ವೈಯಾಲಿಕಾವಲ್ ಠಾಣೆ ಪೊಲೀಸರು



ಬಂಧಿಸಿರುವ ಆರ್‌ಆರ್ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ನ್ಯಾಯಾಧೀಶರು ಎರಡು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿದ್ದಾರೆ.

ಮಾಜಿ ಕಾರ್ಪೋರೇಟರ್ ವೇಲು ನಾಯ್ಕರ್ ಅವರು ನೀಡಿರುವ ಪ್ರಕರಣದಲ್ಲಿ ಇವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು. ವೈಯಾಲಿಕಾವಲ್ ಠಾಣೆಯಲ್ಲಿ ಅವರ ವಿರುದ್ಧ ಎರಡು ಪ್ರಕರಣಗಳು ದಾಖಲಾಗುತ್ತಿದ್ದಂತೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದರು. ಅವರ ಬೆನ್ನು ಹತ್ತಿದ ಪೊಲೀಸರು ಅವರ ಮೊಬೈಲ್ ಲೊಕೇಶನ್ ಆಧರಿಸಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ನಂಗಲಿ ಗ್ರಾಮದ ಬಳಿ ಅವರನ್ನು ಬಂಧಿಸಿದರು.

ನಂತರ ಅವರನ್ನು ಬೆಂಗಳೂರಿಗೆ ಕರೆತಂದು, ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ತಪಾಸಣೆಗೊಳಪಡಿಸಿ ಬಳಿಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ಒಂದು ವಾರ ಕಾಲ ಪೊಲೀಸ್ ಕಸ್ಟಡಿಗೆ ■5ನೇ ಪುಟಕ್ಕೆ

ವಿಶ್ವ ದಾಖಲೆ ಬರೆದ —

ಪ್ರಜಾಪ್ರಭುತ್ವ ದಿನಾಚರಣೆ



ವಿಧಾನಸೌಧದ ಮುಂಭಾಗ ವಿವಿಧ ವೇಷಧಾರಿಗಳಾಗಿ ಕಲಾವಿದರು ಮಾನವ ಸರಪಳಿಯಲ್ಲಿ ಭಾಗವಹಿಸಿದ್ದರು.

2500 ಕಿ.ಮೀ. ಉದ್ದದಲ್ಲಿ 25 ಲಕ್ಷಕ್ಕೂ ಹೆಚ್ಚಿನ ಮಂದಿಯಿಂದ ಮಾನವ ಸರಪಳಿ ರಚನೆ

ಎಲ್ಲ ಜಿಲ್ಲೆಗಳಲ್ಲೂ ವಿಭಿನ್ನ ರೀತಿಯಲ್ಲಿ ಪ್ರಜಾಪ್ರಭುತ್ವದ ಸಂದೇಶ ರವಾನೆ

ಬೆಂಗಳೂರು, ಸೆ.15– ದೇಶದ ಪ್ರಮುಖ ಹಬ್ಬವೆಂದೇ ಭಾವಿಸಲಾಗಿರುವ ವಿಶ್ವ ಪ್ರಜಾಪ್ರಭುತ್ವ ದಿನವನ್ನು ಭಾನುವಾರ ರಾಜ್ಯಾದ್ಯಂತ ಅರ್ಥಪೂರ್ಣ ಹಾಗೂ ಯಶಸ್ವಿಯಾಗಿ ಆಚರಿಸಲಾಯಿತು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ವಿಶೇಷ ವಿನ್ಯಾಸದ ಹಾಗೂ ವಿಭಿನ್ನ ಸಂದೇಶಗಳನ್ನು ಸಾರುವ ಉಡುಗೆ–ತೊಡುಗೆ, ವೇಷಭೂಷಣ ಹಾಗೂ ಕಲಾ ಪ್ರಾಕಾರಗಳ ಬಳಕೆ ಮಾಡಿ ಪ್ರಜಾಪ್ರಭುತ್ವದ ಮಹತ್ವ ಸಾರಿದರು.

ಪ್ರಥಮ ಬಾರಿಗೆ ರಾಜ್ಯದ ಉತ್ತರ ತುದಿ ಬೀದರ್‌ನಿಂದ ಚಾಮರಾಜನಗರ ಜಿಲ್ಲೆವರೆಗೂ ಸುಮಾರು 2500 ಕಿ.ಮೀ. ಉದ್ದದಲ್ಲಿ 25 ಲಕ್ಷಕ್ಕೂ ಹೆಚ್ಚಿನ ಮಂದಿ ಮಾನವ ಸರಪಳಿ ರಚಿಸಿರುವುದು ದೇಶವೇ ಹೆಮ್ಮೆ ಪಡುವಂತಾಗಿದೆ. ಇಂಥ ಯಶಸ್ವೀ ಪ್ರಯೋಗ ವಿಶ್ವದಲ್ಲೇ ಪ್ರಥಮ ಬಾರಿಗೆ ನಡೆದಿದ್ದು, ಇದಕ್ಕೆ ವಿಶ್ವ ದಾಖಲೆ ಆರಂಭಿಕ ಪುರಸ್ಕಾರ ಲಭಿಸಿದೆ. ಲಂಡನ್‌ನಲ್ಲಿರುವ ವಿಶ್ವ ದಾಖಲೆ ಸಂಸ್ಥೆಯ ಕರ್ನಾಟಕ ಪ್ರತಿನಿಧಿ ಶೈಲಜಾ ಅವರು ಬೆಂಗಳೂರಿನಲ್ಲಿ ನಡೆದ ಬೃಹತ್ ಹಾಗೂ ವರ್ಣರಂಜಿತ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಅವರ ಹೆಸರಿನಲ್ಲಿ ಪುರಸ್ಕಾರ ನೀಡಿ ಗೌರವಿಸಿದರು.



ಬೆಂಗಳೂರಿನ ವಿಧಾನಸೌಧದಲ್ಲಿ ಗ್ರೌಂಡ್ ಸ್ಟೆಪ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಗಾರಿ ಬಾರಿಸುವ ಮೂಲಕ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಕ್ಕೆ ಚಾಲನೆ ನೀಡಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ದಿನೇಶ್ ಗುಂಡೂರಾವ್ ಸೇರಿದಂತೆ ಇನ್ನಿತರರಿದ್ದರು.

ಜಿಲ್ಲಾಡಳಿತದ ನೇತೃತ್ವದಲ್ಲಿ ಎಲ್ಲಾ ಇಲಾಖೆಗಳ ನೌಕರರು ಹಾಗೂ ಸಾವಿರಾರು ಸೇವಾ ಸಂಸ್ಥೆಗಳು, ಸ್ವಯಂ ಸೇವಕರು ಹಾಗೂ ಎಲ್ಲಾ ಶಾಲಾ, ಕಾಲೇಜುಗಳ ಮಕ್ಕಳು ಕೈ ಹಿಡಿದು ಮಾನವ ಸರಪಳಿ ರಚಿಸಿ ಗಮನ ಸೆಳೆದರು. ಐಟಿ, ಬಿಟಿ ಖಾಸಗಿ ಸಂಸ್ಥೆಗಳು ಮತ್ತು ವಾಣಿಜ್ಯ ಮತ್ತು ವ್ಯಾಪಾರಿ ಸಂಸ್ಥೆಗಳ ಸಾವಿರಾರು, ಕಲಾವಿದರು, ವೈದ್ಯರು, ವಕೀಲರು ಸೇರಿದಂತೆ ವಿವಿಧ ಕ್ಷೇತ್ರಗಳ ವೃತ್ತಿಪರರು ಹಾಗೂ ಸಮಾಜದ ಎಲ್ಲಾ ವರ್ಗದ ಜನರು ಮಾನವ ಸರಪಳಿಯಲ್ಲಿ ಭಾಗವಹಿಸಿ ಪ್ರಜಾಪ್ರಭುತ್ವ ಮಹತ್ವದ ಜಾಗೃತಿ ಮೂಡಿಸಿದರು.

ಸಮಾಜ ಕಲ್ಯಾಣ ಇಲಾಖೆ ನೇತೃತ್ವದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಶಿಕ್ಷಣ ಸೇರಿದಂತೆ 8 ಇಲಾಖೆಗಳು ಈ ಕಾರ್ಯಕ್ರಮದ ಉಸ್ತುವಾರಿ ಹೊತ್ತುಕೊಂಡು ನಡೆಸಿದ್ದು, ಉಳಿದ ಎಲ್ಲಾ 25ಕ್ಕೂ ಹೆಚ್ಚು ಇಲಾಖೆಗಳು ವಿವಿಧ ರೀತಿಯಲ್ಲಿ ತಮ್ಮದೇ ಸಹಭಾಗಿತ್ವ ಮೆರೆದು ದಿನಾಚರಣೆಯನ್ನು ಯಶಸ್ವಿಗೊಳಿಸಿವೆ. ಹಾಗೆಯೇ ಸುಮಾರು 25 ಲಕ್ಷಕ್ಕೂ ಹೆಚ್ಚು ■5ನೇ ಪುಟಕ್ಕೆ

ನಮ್ಮ ಸಂವಿಧಾನ ಎತ್ತಿ ಹಿಡಿದಿರುವ ಬಹುತ್ವವನ್ನು ನಾವು ಬದುಕಿನಲ್ಲಿ ಆಚರಿಸೋಣ

ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ

ಬೆಂಗಳೂರು, ಸೆ.15– ನಮ್ಮ ಸಂವಿಧಾನ ಎತ್ತಿ ಹಿಡಿದಿರುವ ಬಹುತ್ವವನ್ನು ನಾವು ಬದುಕಿನಲ್ಲಿ ಆಚರಿಸೋಣ. ಆ ಮೂಲಕ ಸಮಾಜ ಒಡೆಯುವ ದುಷ್ಟರ ಷಡ್ಯಂತ್ರ ಸೋಲಿಸೋಣ, ಪ್ರಜಾಪ್ರಭುತ್ವ ಗಟ್ಟಿಗೊಳಿಸೋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾರಿತ್ರಿಕ ಮಾನವ ಸರಪಳಿ ಚಳವಳಿಯನ್ನು ವಿಧಾನಸೌಧದ ಗ್ರೌಂಡ್ ಸ್ಟೆಪ್ಸ್‌ನಲ್ಲಿ ಉದ್ಘಾಟಿಸಿ ಮಾತನಾಡಿದರು. ನಮ್ಮ ಬುದ್ಧ, ಬಸವಣ್ಣನ ಕಾಲದಲ್ಲೇ ನಮ್ಮಲ್ಲಿ ಪ್ರಜಾಪ್ರಭುತ್ವ, ಸಂಸದೀಯ ವ್ಯವಸ್ಥೆ ಇತ್ತು. ಅನುಭವ ಮಂಟಪ ಮೊದಲ ಪ್ರಜಾಪ್ರಭುತ್ವದ ಸಾಂಸ್ಥಿಕ ಸಂಕೇತ ಎಂದರು.

1949ರ ನವೆಂಬರ್ 25ರಂದು ಬಾಬಾ ಸಾಹೇಬರು ಮಾಡಿದ ಭಾಷಣವನ್ನು ಪ್ರಸ್ತಾಪಿಸಿದ ಸಿಎಂ, ಆರ್ಥಿಕ–ಸಾಮಾಜಿಕ ಪ್ರಜಾಪ್ರಭುತ್ವ ಎಲ್ಲರಿಗೂ ಸಿಕ್ಕಾಗ ಮಾತ್ರ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ. ತಾರತಮ್ಯ ಭಾರತ ದಲ್ಲಿ ಆಚರಣೆಯಲ್ಲಿ ಇರುವವರೆಗೂ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಇಲ್ಲ ಎಂದರು. ಸಂವಿಧಾನದ ಪೀಠಿಕೆಯಲ್ಲಿ ಅತ್ಯಂತ ದೊಡ್ಡ ಮೌಲ್ಯಗಳಿವೆ. ಹೀಗಾಗಿಯೇ ಪ್ರತಿ ಶಾಲಾ ಕಾಲೇಜುಗಳಲ್ಲಿ ಇದನ್ನು ಓದಿಸುವ, ಅರ್ಥೈಸುವ, ಪಾಲಿಸುವ ಪ್ರಯತ್ನ ಮುನ್ನಡೆಸಿದ್ದೇವೆ ಎಂದರು.

ನಮ್ಮ ರಾಷ್ಟ್ರಗೀತೆ ಮತ್ತು ನಮ್ಮ ನಾಡಗೀತೆಯಲ್ಲಿರುವ ಭಾರತ ಮತ್ತು ಕರ್ನಾಟಕ ನಮ್ಮದಾಗಬೇಕು. ಯಾವುದೇ ತಾರತಮ್ಯ ಇಲ್ಲದ ಶಾಂತಿಯ ತೋಟ ನಮ್ಮದಾಗಬೇಕು ಎಂದು ಕರೆ ನೀಡಿದರು. ಸಮಾಜದಲ್ಲಿರುವ ಅಸಮಾನತೆ ತೊಡೆದು ಹಾಕುವವರೆಗೂ ದೇಶಕ್ಕೆ ಸಿಕ್ಕ ಸ್ವಾತಂತ್ರ್ಯಕ್ಕೆ ಅರ್ಥ ಇರುವುದಿಲ್ಲ. ■5ನೇ ಪುಟಕ್ಕೆ

ಜಗತ್ತಿನ ನಾನಾ ಮುಖದಿಂದ ಸಾಹಿತ್ಯ ಸಮೃದ್ಧಿ, ಸಂಭ್ರಮಗೊಳ್ಳಲಿದೆ

ಖ್ಯಾತ ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಅಭಿಪ್ರಾಯ



ಮೈಸೂರಿನ ಶಾರದಾವಿಲಾಸ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ಡಿವಿಜಿ ಬಳಗ ಪ್ರತಿಷ್ಠಾನ ವತಿಯಿಂದ ನಾಟಕಕಾರ ಸತ್ಯೇಶ್ ಎನ್.ಬೆಳ್ಳೂರ್ ಅವರಿಗೆ ಡಿವಿಜಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಸೆ.15(ಬಿಎಲ್‌ಯು)– ವ್ಯಕ್ತಿ ಜಗತ್ತಿನ ನಾನಾ ಮುಖ ಕಂಡಾಗ ಸಾಹಿತ್ಯ ಸಮೃದ್ಧಿ ಹಾಗೂ ಸಂಭ್ರಮಗೊಳ್ಳಲಿದೆ ಎಂದು ಖ್ಯಾತ ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಅಭಿಪ್ರಾಯಪಟ್ಟರು.

ಮೈಸೂರಿನ ಶಾರದಾವಿಲಾಸ ಕಾಲೇಜು ಶತಮಾನೋತ್ಸವ ಭವನದಲ್ಲಿ ಇಂದು ನಾಟಕಕಾರ ಸತ್ಯೇಶ್ ಎನ್. ಬೆಳ್ಳೂರ್ ಅವರಿಗೆ ಡಿವಿಜಿ ಬಳಗ ಪ್ರತಿಷ್ಠಾನ ಕೊಡ ಮಾಡಿದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಜಗತ್ತಿನ ಒಂದೊಂದು ಮುಖದ ಪರಿಚಯದಿಂದ ಸಾಹಿತ್ಯವನ್ನು ಸಮೃದ್ಧಿಗೊಳಿಸಲಿದೆ ಎಂದು ಹೇಳಿದರು.

ಜಗತ್ತಿನಲ್ಲಿ ಬರೆಯುವುದು ಬಹಳ ದೊಡ್ಡದಿದೆ. ಈ ಮೂಲಕ ಸಾಹಿತ್ಯ ಕೃಷಿ ಮುಂದುವರೆಸಬೇಕು. ವೇದ, ಉಪನಿಷತ್ತು, ವಚನ ಹಾಗೂ ಕಗ್ಗಗಳನ್ನು ಹೆಚ್ಚು ಹೆಚ್ಚು ಅರ್ಥೈಸಿಕೊಳ್ಳಬೇಕು. ಈ ಮೂಲಕ ಹೊಸ ಅರ್ಥಗಳು ಹುಟ್ಟಿಕೊಳ್ಳುತ್ತವೆ ಎಂದು ಡಾ.ಗುರುರಾಜ ಕರಜಗಿ ಹೇಳಿದರು. ಸತ್ಯೇಶ್ ಎನ್. ಬೆಳ್ಳೂರ್ ಅವರು ವಿಜ್ಞಾನಿಯಾಗಿ, ತಂತ್ರಜ್ಞಾನಿಯಾಗಿ, ಪ್ರವಾಸಿಯಾಗಿ, ಆಡಳಿತಾಧಿಕಾರಿಯಾಗಿ, ಆಧ್ಯಾತ್ಮಿಕತೆಯಲ್ಲಿ ಹೊಕ್ಕು ಜಗತ್ತಿನ ಹಲವು ಮುಖಗಳನ್ನು ಕಂಡಿದ್ದಾರೆ. ಇದರಿಂದ ಹಲವು ಆಯಾಮಗಳಲ್ಲಿ ಸಾಹಿತ್ಯ ಕೃಷಿ ಮಾಡುತ್ತಿದ್ದಾರೆ ಎಂದರು. 20 ನೇ ಶತಮಾನದಲ್ಲಿ ಕನ್ನಡ ಸಾಹಿತ್ಯ ಸುವರ್ಣಯುಗವನ್ನು ಕಂಡಿತು. ಮಹಾಕಾವ್ಯ, ಶೃಂಗಾರ ಕಾವ್ಯ, ದೀರ್ಘ ಕಥನ, ಗದ್ಯ, ಕವನ ಸೇರಿದಂತೆ ಹಲವು ಪ್ರಕಾರಗಳಲ್ಲಿ ಮೂಡಿ ಬಂದ ಕನ್ನಡ ಸಾಹಿತ್ಯ ಮತ್ತಷ್ಟು ವೈಭವ ಕಂಡಿತು ಎಂದು ಅಭಿಪ್ರಾಯಪಟ್ಟರು.

ಮನುಷ್ಯ ಅನಾದಿ ಕಾಲದಿಂದ ಹಲವು ರೀತಿಯ ಮಜಲುಗಳನ್ನು ದಾಟಿ ಬಂದಿದ್ದಾನೆ. ಬೆಂಕಿಯಿಂದ ಬೆಳಕು ಕಂಡ, ಗಾಡಿಯಿಂದ ಹಾದಿ ಕಂಡ, ವಿದ್ಯುತ್‌ನಿಂದ ವರ್ಣರಂಜಿತ ಬೆಳಕು ಕಂಡ, ವಿಜ್ಞಾನ, ತಂತ್ರಜ್ಞಾನದಲ್ಲಿ ಆವಿಷ್ಕಾರ ಮಾಡಿದ, ಟೆಲಿಫೋನ್ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ. ಇದರ ಜೊತೆಗೆ ಬಹುಮುಖ್ಯವಾಗಿ ಅಕ್ಷರ ಮತ್ತು ಸಂಖ್ಯೆಯಿಂದ ಬದುಕು ಕಂಡ ಎಂದು ಡಾ.ಗುರುರಾಜ ಕರಜಗಿ ಹೇಳಿದರು.

ನಾಟಕಕಾರ ಸತ್ಯೇಶ್ ಎನ್. ಬೆಳ್ಳೂರ್ ಅವರಿಗೆ ಈ ವೇಳೆ ಡಿವಿಜಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಖ್ಯಾತ ಕವಿ ಕೆ.ಸಿ.ಶಿವಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಜಕಾರಣಿಗಳ ಸಮ್ಮೇಳನದ ಕಾರ್ಯಕ್ರಮ



ಮೈಸೂರು ಮೌಂಟ್ ಅಬು ರಾಜಸ್ಥಾನದ ಆನಂದ ಸರೋವರದಲ್ಲಿ ರಾಜಕಾರಣಿಗಳ ಒತ್ತಡ ಮುಕ್ತ ಆಡಳಿತಕ್ಕಾಗಿ ಆಧ್ಯಾತ್ಮಿಕ ಸಶಕ್ತೀಕರಣದ ರಾಜಕಾರಣಿಗಳ ಸಮ್ಮೇಳನದ ಕಾರ್ಯಕ್ರಮಕ್ಕೆ ಮೈಸೂರು ಉಪವಿಭಾಗದ ಈಶ್ವರೀಯ ವಿಶ್ವವಿದ್ಯಾಲಯಗಳ ಮುಖ್ಯ ಸಂಚಾಲಕಿ ರಾಜಾಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿಯವರು ಸ್ವಾಗತ ಕಾರ್ಯಕ್ರಮವನ್ನು ಶುಕ್ರವಾರ ನಡೆಸಿಕೊಟ್ಟರು.

ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದ 848 ನಿವೇಶನ ಖಾತೆ ಕಾನೂನುಬದ್ಧವಾಗಿಯೇ ಮಾಡಲಾಗಿದೆ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ಪಷ್ಟನೆ

● 9 ದಿನದ ಅವಧಿಯಲ್ಲಿ ಖಾತೆ ಮಾಡಲಾಗಿದೆ ● ತಾಂತ್ರಿಕ ಸಮಿತಿ ವರದಿಯಲ್ಲಿ ಇದರ ಉಲ್ಲೇಖವಿದೆ ● ಹಿಂದಿನ ಆಯುಕ್ತ ನಟೇಶ್ ಅಕ್ರಮ ಸರ್ಕಾರಕ್ಕೆ ತಿಳಿಸಿದ್ದರಿಂದ ನನ್ನ ವಿರುದ್ಧ ಆರೋಪ



ಮೈಸೂರಿನ ಪ್ರಮತಿ ಹಿಲ್ ವ್ಯೂ ಅಕಾಡೆಮಿಯಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿದರು.

ಮೈಸೂರು, ಸೆ.15(ಬಿಎಲ್‌ಯು)– ಮೈಸೂರಿನ ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದ 848 ನಿವೇಶನಗಳ ಖಾತೆಯನ್ನು ಒಂದೇ ದಿನದಲ್ಲಿ ಮಾಡಲಾಗಿದೆ ಎಂಬ ಆರೋಪ ಶುದ್ಧ ಸುಳ್ಳು ಎಂದು ಸಂಘದ ಅಧ್ಯಕ್ಷರೂ ಆದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ಪಷ್ಟಪಡಿಸಿದ್ದಾರೆ.

ನಗರದ ಪ್ರಮತಿ ಹಿಲ್ ವ್ಯೂ ಅಕಾಡೆಮಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ನಿಯಮಾವಳಿಗಳ ಪ್ರಕಾರ 9 ದಿನದ ಅವಧಿಯಲ್ಲಿ ಖಾತೆ ಮಾಡಲಾಗಿದೆ ಎಂದು ತಿಳಿಸಿದರು.

ನಗರ್ತಹಳ್ಳಿ ಮತ್ತು ಬಲ್ಲಹಳ್ಳಿಯ 200 ನಿವೇಶನಗಳನ್ನು 9 ದಿನದಲ್ಲಿ, ಬಲ್ಲಹಳ್ಳಿಯ 288 ನಿವೇಶನಗಳನ್ನು 7 ದಿನದಲ್ಲಿ, ಬಲ್ಲಹಳ್ಳಿಯ 181 ನಿವೇಶನಗಳನ್ನು 6 ದಿನದಲ್ಲಿ ಹಾಗೂ ಕೇರ್ಗಳ್ಳಿಯ 179 ದಿನದಲ್ಲಿ 3 ದಿನದಲ್ಲಿ ಖಾತೆ ಮಾಡಲಾಗಿದೆ. ಈ ಎಲ್ಲಾ ವಿವರವನ್ನು ತಾಂತ್ರಿಕ ಸಮಿತಿ ನೀಡಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ರಾಜೀವ್ ಮಾಹಿತಿ ನೀಡಿದರು.

ದಾಖಲಾತಿ ಪರಿಶೀಲನೆ ನಡೆಸಿರುವ ತಾಂತ್ರಿಕ ಸಮಿತಿಯೇ ಈ ವಿಚಾರ ಸ್ಪಷ್ಟಪಡಿಸಿರುವಾಗ 848 ನಿವೇಶನಗಳನ್ನು ಒಂದೇ ದಿನದಲ್ಲಿ ಖಾತೆ ಮಾಡಲಾಗಿದೆ ಎಂಬ ಆಪಾದನೆ ಮಾಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಹಿಂದಿನ ಆಯುಕ್ತ ನಟೇಶ್ ಮುಡಾದಲ್ಲಿ ಹಲವು ಅಕ್ರಮ ಎಸಗಿದ್ದರು. ಅಂದಿನ ಮುಡಾ ಅಧ್ಯಕ್ಷನಾಗಿದ್ದ ನಾನು ಅವರ ಅಕ್ರಮ ವ್ಯವಹಾರಗಳ ಬಗ್ಗೆ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೆ. ಈ ಕಾರಣದಿಂದ ನಟೇಶ್ ನನ್ನ ವಿರುದ್ಧ ಆಧಾರರಹಿತ ಆರೋಪ ಮಾಡಿದ್ದಾರೆ ಎಂದು ದೂರಿದರು. ನಟೇಶ್ ಅಕ್ರಮ ಎಸಗಿರುವುದನ್ನು ಬೊಟ್ಟು ಮಾಡಿ ತೋರಿಸಲು ಆರಂಭಿಸಿದ ತರುವಾಯ ನನ್ನ ಹಾಗೂ ಅವರ ನಡುವಿನ ಬಾಂಧವ್ಯ ಹದಗೆಟ್ಟಿತ್ತು. ಇದೇ ವೇಳೆ ನಟೇಶ್ ಕೈಗೊಳ್ಳುತ್ತಿದ್ದ ಕಾನೂನು ವಿರೋಧಿ ಕ್ರಮಗಳ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೆ. ಆದರೆ ಅಂದು ಸರ್ಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ರಾಜೀವ್ ತಿಳಿಸಿದರು. ಈ ಕಾರಣದಿಂದ ನಟೇಶ್ ನನ್ನ ವಿರುದ್ಧ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಸರ್ಕಾರಕ್ಕೆ ಈ ಪತ್ರ ಬರೆದಿರುವ ವಿಚಾರ ಕೂಡ ನನ್ನ ಗಮನಕ್ಕೆ ಬಂದಿರಲಿಲ್ಲ ಎಂದು ಹೇಳಿದರು.

ಕಳೆದ 27 ವರ್ಷಗಳಿಂದ ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷನಾಗಿರುವ ನಾನು ಯಾವುದೇ ಕಾನೂನು ವಿರೋಧಿಯಾದ ಹಾದಿಯಲ್ಲಿ ಸಾಗಿಲ್ಲ. ಸರ್ಕಾರಿ ಜಾಗ, ಪಿಟಿಸಿಎಲ್ ಜಾಗ, ರೆವಿನ್ಯೂ ಬಡಾವಣೆಯಲ್ಲಿ ಬಡಾವಣೆ ನಿರ್ಮಾಣ ಮಾಡಿಲ್ಲ. ಕೃಷಿ ಜಮೀನನ್ನು ಮಾರುಕಟ್ಟೆ ದರದಲ್ಲಿ ನ್ಯಾಯಯುತವಾಗಿ ಖರೀದಿ ಮಾಡಿ ಅಲ್ಲಿ ಬಡಾವಣೆ ನಿರ್ಮಾಣ ಮಾಡಿದ್ದೇವೆ. ಈ ಮೂಲಕ ನಾವು ನಿರ್ಮಿಸಿರುವುದು ಕಾನೂನು ನಿಯಮ ಪಾಲಿಸಿರುವ ಸಕ್ರಮ ಬಡಾವಣೆ ಎಂದು ರಾಜೀವ್ ಸ್ಪಷ್ಟನೆ ನೀಡಿದರು.

ಕೃಷಿ ಭೂಮಿಯನ್ನು ವಸತಿಗಾಗಿ ಪರಿವರ್ತನೆ, ಅನ್ಯಕ್ರಾಂತ, ನಕ್ಷೆ ಮಂಜೂರಾತಿ, ಸಿಎ ನಿವೇಶನಕ್ಕೆ ಜಾಗ ಮೀಸಲು ಸೇರಿದಂತೆ ಎಲ್ಲಾ ಪ್ರಕಾರಗಳಲ್ಲಿ ಕಾನೂನು ನಿಯಮ ಪಾಲಿಸಲಾಗಿದೆ. ಮುಡಾ ಸಭೆಯಲ್ಲಿ ನಮ್ಮ ಸಂಘಕ್ಕೆ ಸಂಬಂಧಿಸಿದಂತೆ ನಿರ್ಣಯಗಳು ಒಂದೇ ದಿನ ಆಗಿರಬಹುದು. ಆದರೆ ಒಂದೇ ದಿನ ಖಾತೆ ಆಗಿಲ್ಲ. ನಾನು ಮುಡಾ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ನಮ್ಮ ಗೃಹ ನಿರ್ಮಾಣ ಸಂಘದ ವಿಚಾರ ಬಗ್ಗೆ ಅನುಮೋದನೆ ಪಡೆಯುವಾಗ ಅಧ್ಯಕ್ಷ ಸ್ಥಾನದಲ್ಲಿ ಅಂದಿನ ಶಾಸಕ ಎಸ್.ಎ. ರಾಮದಾಸ್ ಕುಳಿತಿದ್ದರೆ ಹೊರತು ನಾನಲ್ಲ ಎಂದು ಸ್ಪಷ್ಟಪಡಿಸಿದರು.

ನಾನು ಮುಡಾ ಅಧ್ಯಕ್ಷನಾಗಿದ್ದ ಮಾತ್ರಕ್ಕೆ ನಮ್ಮ ಗೃಹ ನಿರ್ಮಾಣ ಸಂಘದ ಕಾರ್ಯಚಟುವಟಿಕೆಗಳನ್ನು ಮಾಡಬಾರದೆಂಬ ಕಾನೂನು ನಿಯಮವಿಲ್ಲವಲ್ಲ ಎಂದು ತಿಳಿಸಿದ ರಾಜೀವ್, ಯಾವುದೇ ಕಾನೂನು ನಿಯಮ ಉಲ್ಲಂಘನೆ ಮಾಡದೆ ನಮ್ಮ ಬಡಾವಣೆ ನಿರ್ಮಾಣವಾಗಿದೆ ಎಂದು ತಿಳಿಸಿದರು.

ನಗರದ ಪೆರಿಫೆರಲ್ ರಿಂಗ್ ರಸ್ತೆಗಾಗಿ ನಮ್ಮ ಬಡಾವಣೆಯಲ್ಲಿ ಜಾಗ ಕೂಡ ಬಿಡಲಾಗಿದೆ. ಜೊತೆಗೆ ಸಿಎ ನಿವೇಶನಕ್ಕೆ ಕೂಡ ಜಾಗ ಮೀಸಲಿಡಲಾಗಿದೆ. ನಮ್ಮ ಸಂಘದ ಎಲ್ಲಾ ವ್ಯವಹಾರಗಳು ಬಿಳಿ ಹಾಳೆಯಂತೆ ಪಾರದರ್ಶಕವಾಗಿದ್ದು, ಯಾರು ಬೇಕಾದರೂ ದಾಖಲಾತಿ ಪರಿಶೀಲನೆ ನಡೆಸಬಹುದು ಎಂದು ರಾಜೀವ್ ಸಲಹೆ ನೀಡಿದರು. ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಮೇಯರ್ ಭೈರಪ್ಪ, ಮಾಜಿ ಕಾರ್ಪೋರೇಟರ್ ಕೆ.ವಿ.ಮಲ್ಲೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಾರ್ಮಿಕರು, ಅವಲಂಬಿತರಿಗೆ ಸಾಮಾಜಿಕ ಭದ್ರತೆ, ಸೂಕ್ತ ಸೌಲಭ್ಯ

ಮೈಸೂರು, ಸೆ.15(ಎಸ್‌ಪಿಎನ್)– ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆಯಡಿ ಅಪಘಾತದಿಂದ ಮರಣ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿರುವ ನೋಂದಾಯಿತ 20 ವರ್ಗಗಳ ಅಸಂಘಟಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಸಾಮಾಜಿಕ ಭದ್ರತೆ ಹಾಗೂ ಸೂಕ್ತ ಪರಿಹಾರ ಸವಲತ್ತುಗಳನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ತೀರ್ಮಾನಿಸಿದೆ.

ಅಸಂಘಟಿತ ವರ್ಗಗಳಾದ ಹಮಾಲರು, ಚಿಂದಿ ಆಯುವವರು, ಮನೆಗೆಲಸದವರು, ಟೈಲರ್, ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಭಟ್ಟಿ ಕಾರ್ಮಿಕರು, ಸಿನಿ ಕಾರ್ಮಿಕರು, ನೇಕಾರರು, ಬೀದಿಬದಿ ವ್ಯಾಪಾರಿಗಳು, ಹೋಟೆಲ್ ಕಾರ್ಮಿಕರು, ಫೋಟೋಗ್ರಾಫರ್‌ಗಳು, ಸ್ವತಂತ್ರ ಲೇಖನ ಬರಹಗಾರರು, ಕಲ್ಯಾಣ ಮಂಟಪ/ಸಭಾ ಭವನ/ಟೆಂಟ್/ಪೆಂಡಾಲ್ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರು, ಬೀಡಿ ಕಾರ್ಮಿಕರು, ಅಸಂಘಟಿತ ವಿಕಲಚೇತನ ಕಾರ್ಮಿಕರು ಹಾಗೂ ಅಲೆಮಾರಿ ಪಂಗಡದ ಕಾರ್ಮಿಕರು, ಗಿಗ್ ವೃತ್ತಿ ನಿರ್ವಹಿಸುತ್ತಿರುವ ಡೆಲಿವರಿ ಕಾರ್ಮಿಕರು, ದಿನಪತ್ರಿಕೆ ವಿತರಿಸುವ ಕಾರ್ಮಿಕರು, ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರು (ಮೆಕ್ಯಾನಿಕ್ ಸೇರಿದಂತೆ) ಅಸಂಘಟಿತ ಕಾರ್ಮಿಕರು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿದಾರರು ಕರ್ನಾಟಕ ರಾಜ್ಯ ನಿವಾಸಿಯಾಗಿದ್ದು, 18 ರಿಂದ 60 ವರ್ಷದವರಾಗಿರಬೇಕು. ಇಎಸ್‌ಐ ಮತ್ತು ಇಪಿಎಫ್ ಸೌಲಭ್ಯವನ್ನು ಹೊಂದಿರಬಾರದು. ಸೂಕ್ತ ದಾಖಲೆಯೊಂದಿಗೆ ಕುವೆಂಪುನಗರದ ಕಾರ್ಮಿಕ ಅಧಿಕಾರಿಗಳು, ಮೈಸೂರು ಉಪವಿಭಾಗದ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದು.

ಕೇರ್ಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 8.95 ಕೋಟಿ ಸಾಲ ವಿತರಣೆ




ಮೈಸೂರು ತಾಲೂಕು ಕೇರ್ಗಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಕಾಳೇಗೌಡ ಉದ್ಘಾಟಿಸಿದರು.

ಮೈಸೂರು, ಸೆ.15(ಎಂಟಿವೈ)– ಮೈಸೂರು ತಾಲೂಕಿನ ಕೇರ್ಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 2023–24ನೇ ಸಾಲಿನಲ್ಲಿ 631 ಜನ ಸದಸ್ಯರಿಗೆ 8,95,43,620 ರೂ. ಸಾಲ ವಿತರಿಸಲಾಗಿದ್ದು, ಸದಸ್ಯರ ಹಿತಕಾಯಲು ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕಾಳೇಗೌಡ ತಿಳಿಸಿದ್ದಾರೆ. ಮೈಸೂರು ತಾಲೂಕು ಕೇರ್ಗಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಶ್ರೀ ಹೊಂಬಾಳಮ್ಮ ಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಂಘಕ್ಕೆ ಕೇರ್ಗಳ್ಳಿ, ಬಡಗಲಹುಂಡಿ, ನಂಜರಾಜಯ್ಯನ ಹುಂಡಿ, ರಾಮನಹುಂಡಿ, ಕೆ. ಸಾಲುಂಡಿ, ಮೂಗನಹುಂಡಿ, ನಗರ್ತಹಳ್ಳಿ, ಯಡಹಳ್ಳಿ, ಕೆಂಚಲಗೂಡಿನ 1050 ಸದಸ್ಯರಿದ್ದು ರೈತರಿಗೆ ಕೊಟ್ಟ ಸಾಲದಲ್ಲಿ ಶೇ.97 ಸಾಲ ವಸೂಲಾಗಿದೆ. ಬ್ಯಾಂಕಿಗೆ ಶೇ.100 ಸಾಲವನ್ನು ಸಂಘದಿಂದ ಕಟ್ಟಿದ್ದೇವೆ. ಯಡಹಳ್ಳಿಯ ಮಹಿಳಾ ಸಂಘಕ್ಕೆ ಶೇ.12ರಷ್ಟು ಬಡ್ಡಿದರದಲ್ಲಿ 10 ಲಕ್ಷ ರೂ. ಸಾಲ ನೀಡಿದ್ದೇವೆ. ಇನ್ನೂ ಹೆಚ್ಚಿನ ಮಹಿಳಾ ಸಂಘಗಳು ಸಾಲ ಕೇಳಿದರೆ ನಾವು ಕೊಡಲು ಸಿದ್ಧರಿದ್ದೇವೆ. ನಮ್ಮ ಸಹಕಾರ ಸಂಘಕ್ಕೆ 2023–24ನೇ ಸಾಲಿನಲ್ಲಿ 11,02,695 ರೂ. ಆದಾಯ ಬಂದಿದೆ. 400 ಜನ ಸದಸ್ಯರಿಗೆ ಯಶಸ್ವಿನಿ ಯೋಜನೆ ನೋಂದಾವಣಿಯಾಗಿದೆ. ಉಳಿದ ಸದಸ್ಯರು ಸಹ ಯಶಸ್ವಿನಿ ನೋಂದಾವಣಿ ಮಾಡಿಸಿ, ಸರ್ಕಾರದ ಸವಲತ್ತುಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರತಿ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಸದಸ್ಯರ 18 ವಿದ್ಯಾರ್ಥಿಗಳಿಗೆ ನಗದು ಪ್ರೋತ್ಸಾಹಧನ ನೀಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಸಂಘದ ಆವರಣದಲ್ಲಿ ಕ್ರೋಢೀಕೃತ ಬಂಡವಾಳದಿಂದ ನೂತನ ಕಟ್ಟಡ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಸದಸ್ಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಸಭೆಯಲ್ಲಿ ಸಂಘದ ಮಾಜಿ ಅಧ್ಯಕ್ಷ ಹಾಗೂ ತಾಪಂ ಮಾಜಿ ಸದಸ್ಯ ಎಂ.ಕೆಂಚಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಪ್ರಭುಸ್ವಾಮಿ, ಸಂಘದ ಉಪಾಧ್ಯಕ್ಷ ಚಿಕ್ಕತಿಮ್ಮಯ್ಯ, ನಿರ್ದೇಶಕರಾದ ಸಿದ್ದೇಗೌಡ, ಚಿಕ್ಕೇಣಮ್ಮ, ಪಚ್ಚೇಗೌಡ, ಎಂ.ಮಹಾದೇವು, ಚಿಕ್ಕಣ್ಣೇಗೌಡ, ಹುಚ್ಚಮ್ಮ, ಬಿಳಿಗಿರಿರಂಗೇಗೌಡ, ಮಹಾ ಲಿಂಗೇಗೌಡ, ರೇಣುಕಮ್ಮ, ಮೇಲ್ವಿಚಾರಕ ವಿ.ಕೃಷ್ಣ, ಮುಖ್ಯಕಾರ್ಯನಿರ್ವಾಹಕ ಮೂಗಶಾಂತೇಗೌಡ, ಎಂ. ಮಹಾದೇವು, ಮಲ್ಲಯ್ಯ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.09.2024 ಸೋಮವಾರ, ಮಳೆ ನಕ್ಷತ್ರ: ಉತ್ತರಾ, 13.09.2024 ರಿಂದ 26.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಶನಿಷ್ಠ ರಾಹುಕಾಲ : ಬೆಳಗ್ಗೆ 7.30ರಿಂದ 9ರವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು, ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು, ಉಸಿರಾಟದ ಸಮಸ್ಯೆಗಳು ಮತ್ತು ಹಲ್ಲು ನೋವು, ಹುಳುಕು ಹಲ್ಲು, ಬಾಯಿಂದ ದುರ್ವಾಸನೆ, ವಸಡಿನಿಂದ ರಕ್ತಸ್ರಾವ ಮುಂತಾದ ದಂತ ಮತ್ತು ಬಾಯಿ ರೋಗಗಳಿಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕತ್ತು ಮತ್ತು ಭುಜದ ನೋವಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಗಣಪತಿ ಹೋಮ ಮತ್ತು ಅನ್ನಸಂತರ್ಪಣೆ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

■ **ವಿಶ್ವಮಾನವ ಪತ್ತಿನ ಸಹಕಾರ ಸಂಘ ನಿಯಮಿತ:** 2023–2024ನೇ ಸಾಲಿನ 7ನೇ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ನರಸೇಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣ, ಜಿಲ್ಲಾ ಕನ್ನಡ ಸಾಹಿತ್ಯ ಭವನ ರಸ್ತೆ, ವಿಜಯನಗರ, ಬೆಳಗ್ಗೆ 11 ಗಂಟೆಗೆ.

■ **ಅಖಿಲ ಕರ್ನಾಟಕ ಒಕ್ಕಲಿಗರ ಸಂಘ:** ರಾಜ್ಯಾಧ್ಯಕ್ಷರು ಮತ್ತು ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರುಗಳ ಪದಗ್ರಹಣ, 515ನೇ ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತ್ಯುತ್ಸವ ಕಾರ್ಯಕ್ರಮ, ವಿವಿಧ ಕ್ಷೇತ್ರಗಳ ಸಾಧಕರಿಗೆ ಶ್ರೀ ಡಾ.ಬಾಲಗಂಗಾಧರನಾಥಸ್ವಾಮಿ ಸೇವಾರತ್ನ ಪ್ರಶಸ್ತಿ ಪ್ರದಾನ ಹಾಗೂ ಆದರ್ಶ ಒಕ್ಕಲಿಗ ದಂಪತಿ ಪ್ರಶಸ್ತಿ ಪ್ರದಾನ ಸಮಾರಂಭ, ಸಮುದಾಯದ ರೈತರಿಗೆ 1001 ತೆಂಗಿನ ಸಸಿ ವಿತರಣೆ, ಬೆಳಗ್ಗೆ 10 ಗಂಟೆಗೆ ಹಳೆ ಜಿಲ್ಲಾಧಿಕಾರಿ ಕಚೇರಿ ಹಿಂಭಾಗವಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಿಂದ ಕಲಾತಂಡಗಳೊಂದಿಗೆ, ಬೆಳ್ಳಿ ರಥೋತ್ಸವದೊಂದಿಗೆ ನಾಡಪ್ರಭು ಶ್ರೀ ಕೆಂಪೇಗೌಡರ ಭವ್ಯ ಮೆರವಣಿಗೆ, ಬೆಳಗ್ಗೆ 10.30ಕ್ಕೆ ವೇದಿಕೆ ಕಾರ್ಯಕ್ರಮ, ಶ್ರೀ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಕೃಪಾಶೀರ್ವಾದಗಳೊಂದಿಗೆ ದಿವ್ಯಸಾನ್ನಿಧ್ಯ ಹಾಗೂ ಆಶೀರ್ವಚನ: ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ, ಸಾನ್ನಿಧ್ಯ: ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರ ಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನ, ರಾಮನಗರ ಶಾಖೆಯ ಕಾರ್ಯದರ್ಶಿ ಶ್ರೀ ಅನ್ನದಾನೇಶ್ವರ ಸ್ವಾಮೀಜಿ, ಉದ್ಘಾಟನೆ: ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಶ್ರೀಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಡಾ.ಬಾಲಗಂಗಾಧರನಾಥಸ್ವಾಮಿ ಸೇವಾರತ್ನ ಪ್ರಶಸ್ತಿ ಪ್ರದಾನ: ಮಾಜಿ ಸಚಿವ ಡಾ.ಅಶ್ವಥ್ ನಾರಾಯಣ, ಆದರ್ಶ ಒಕ್ಕಲಿಗ ದಂಪತಿ ಪ್ರಶಸ್ತಿ ಪ್ರದಾನ: ಶಾಸಕ ಜಿ.ಟಿ.ದೇವೇಗೌಡ, ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಸ್ಥಳ: ಕಲಾಮಂದಿರ, ಹುಣಸೂರು ರಸ್ತೆ.

■ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಹಾಗೂ ಕರ್ನಾಟಕ ನಾಟಕ ಅಕಾಡೆಮಿ:** ಶೈಕ್ಷಣಿಕ ರಂಗಭೂಮಿ ರಾಷ್ಟ್ರೀಯ ಕಾರ್ಯಾಗಾರದ ಸಮಾರೋಪ ಸಮಾರಂಭ, ಸ್ಥಳ: ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ ಬೆಳಗ್ಗೆ 11ಕ್ಕೆ.

■ **ಕೌಸ್ತುಭ ವಿವಿಧೋದ್ದೇಶ ಸೌಹಾರ್ದ ಸಹಕಾರ ಸಂಘ:** 11ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಹಕಾರಿ ಸಂಘದ ಅಧ್ಯಕ್ಷ ಜಿ.ವಿ.ಕೃಷ್ಣ, ಸ್ಥಳ: ದೇವೇಗೌಡ ಹಾಲ್, ನೆಲಮಹಡಿ, ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11 ಗಂಟೆಗೆ.

■ **ಡಿ.ಸಿ. ಹಾಸ್ಟೆಲ್ ಹಳೆಯ ವಿದ್ಯಾರ್ಥಿಗಳ ಗೆಳೆಯರ ಒಕ್ಕೂಟ:** ಒಕ್ಕೂಟದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಡಿ.ರಂಗೇಗೌಡ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಮಾಜಿ ಮೇಯರ್ ಪುರುಷೋತ್ತಮ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನಜರ್‌ಬಾದ್, ಬೆಳಗ್ಗೆ 11 ಗಂಟೆಗೆ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್:** ಗೌರಿ–ಗಣೇಶ ಹಬ್ಬ ಹಾಗೂ 44ನೇ ವಾರ್ಷಿಕೋತ್ಸವ ಪೂಜಾ ಮಹೋತ್ಸವ, ಸಂಜೆ 4 ಗಂಟೆಗೆ ಗಣಪತಿ ಉತ್ಸವಮೂರ್ತಿಯ ರಥೋತ್ಸವ, ಸ್ಥಳ: ವಿನಾಯಕನಗರ.

■ **ನೃತ್ಯ ಈಶಾ ಪ್ರದರ್ಶನ ಕಲೆಗಳ ಕೇಂದ್ರ:** ಈಶಾ ನೃತ್ಯೋತ್ಸವ, ಎರಡನೇ ವಾರ್ಷಿಕೋತ್ಸವ, ಉದ್ಘಾಟನೆ: ನಾಟ್ಯಚಾರ್ಯ ಪ್ರೊ.ಕೆ.ರಾಮ್‌ಮೂರ್ತಿರಾವ್, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಸಂಜೆ 5.30ರಿಂದ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 63ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ 6.45ರವರೆಗೆ ಗಮಕ, ಕಾವ್ಯ ಶಿವತತ್ವ ಚಿಂತಾಮಣಿ, ವಾಚನ: ವಿದುಷಿ ಭಾಗ್ಯಲಕ್ಷ್ಮಿ ಕೆ.ಎಸ್., ವ್ಯಾಖ್ಯಾನ: ಮೊರಬದ ಮಲ್ಲಿಕಾರ್ಜುನ, ಸಂಜೆ 5.45ರಿಂದ ವಿದ್ವಾನ್ ಕುನ್ನಕ್ಕುಡಿ ಬಾಲಮುರಳಿಕೃಷ್ಣ ಅವರಿಂದ ಗಾಯನ, ವಿದುಷಿ ಅಕ್ಕರೈ ಶುಭಲಕ್ಷ್ಮಿ–ವಯೋಲಿನ್, ವಿದ್ವಾನ್ ಗುರುಪ್ರಸನ್ನ–ಖಂಜಿರಾ, ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಟ್ರಸ್ಟ್, ವಿವಿ ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಅವಧೂತ ದತ್ತಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ದತ್ತಪೀಠ ಉತ್ತರಾಧಿಕಾರಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರ 2ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರೀ ಸಂತಾನ ಗೋಪಾಲ ಯಾಗ, ಸ್ಥಳ: ಆಶ್ರಮದ ಆವರಣ, ನಂಜನಗೂಡು ರಸ್ತೆ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ: ಇಲಿಯಾಸ್ ಅಹ್ಮದ್ ಖಾನ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10: "ಅಂಚೆ–ಅಂಕನ": ಆಕಾಶವಾಣಿ ಅಂಕಣ, ಪ್ರಸ್ತುತಿ–ಡಾ. ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು– ಭಾರತೀಯ ಅಂಚೆ, ಮೈಸೂರು ವಿಭಾಗ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಎಂ.ಆರ್. ಸುಧಾ, ವ್ಯಾಖ್ಯಾನ– ಪ್ರೊ. ಮ. ವರದರಾಜು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಸಿ. ಅಶ್ವತ್ಥ್, 8.30 ಕನ್ನಡ ಚಿತ್ರಗೀತೆಗಳು, 9.05 ಮಕ್ಕಳ ಕ್ಯಾನ್ಸರ್ ಜಾಗೃತಿ ಕುರಿತು ಪ್ರಾಯೋಜಿತ ಕಾರ್ಯಕ್ರಮ ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.10 ನೆನಪಿನಂಗಳ: ಧ್ವನಿ ಭಂಡಾರದಿಂದ 1. ಮಾಸ್ತಿಯವರನ್ನು ಡಾ. ಹಾ. ಮಾ. ನಾಯಕ್ ಅವರು ಮಾಡಿದ್ದ ಸಂಸ್ಮರಣಾ ಭಾಷಣ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಸುರಭಿ. ಪಿ– ವೀಣಾ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ– ಗೇಮ್ ಶೋ, ಪ್ರಸ್ತುತಿ– ದಿಗ್ವಿಜಯ್ .ಬಿ.

ಮಧ್ಯಾಹ್ನ: 12.05 ವನಿತಾ ವಿಹಾರ: ಶಿಕ್ಷಕಿ, ಲೇಖಕಿ ಅಂಕೋಲಾದ ರೇಣುಕಾ ರಮಾನಂದ್ ಅವರೊಂದಿಗೆ ಮಾತುಕತೆ, 12.30 ದೇವರನಾಮ– ಶರ್ವಾಣಿ. ಎಸ್, 12.45 ನಮ್ಮ ಆರೋಗ್ಯ: 'ಅಲರ್ಜಿಗಳು ಮತ್ತು ಚಿಕಿತ್ಸೆ' ಕುರಿತು ಮೈಸೂರಿನ ರುಮಟಾಲಜಿಸ್ಟ್ ಮತ್ತು ಇಮ್ಯುನಾಲಜಿಸ್ಟ್ ತಜ್ಞರಾದ ಡಾ. ಚೆಂಗಪ್ಪ. ಕೆ.ಬಿ. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ಬೇಂದ್ರೆ ಮಂಜುನಾಥ್, 1.00 ಚಿತ್ರಗೀತೆಗಳು, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಪಿ. ಸುಬ್ರಹ್ಮಣ್ಯಂ– ಕ್ಲಾರಿಯೋನೆಟ್.

ಸಂಜೆ: 4.00 ಮಹಿಳಾರಂಗ: "ನಾನು ನನ್ನ ಕಂಪನಿ" ನ್ಯೂಟ್ರಾಸ್ಯೂಟಿಕಲ್ ಉತ್ಪನ್ನಗಳ ತಯಾರಿಕಾ ಘಟಕದ ಉದ್ಯಮಿ ಡಾ. ಶ್ರೀಲಕ್ಷ್ಮೀ ದೇಸೀರಾಜು ಅವರೊಂದಿಗೆ ಮಾತುಕತೆ, ಪ್ರಸ್ತುತಿ– ಸಹನ, 4.45 ಹಿಂದಿ ಪಾಠ: ಡಾ. ಜಯಂತಿ ಪ್ರಸಾದ್ ನೌಟಿಯಾಲ್, 6.50 ಕೃಷಿರಂಗ: ಸುಸ್ಥಿರ ಹೈನುಗಾರಿಕೆ. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ. ಮಹದೇವಯ್ಯ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್. ಕೇಶವಮೂರ್ತಿ.

ರಾತ್ರಿ: 7.45 ಕನ್ನಡದಲ್ಲಿ ಭಾಷಣ: ಗೊರೂರು ರಾಮಸ್ವಾಮಿ ಅಯ್ಯಂಗಾರ್ ಒಂದು ನೆನಪು, ಮಾತನಾಡುತ್ತಾರೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪುತ್ರಿ ವಸಂತಿ ಮೂರ್ತಿ, ಪ್ರಸ್ತುತಿ– ವಿಜಯ್ ಅಂಗಡಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಸಿಕ್ಕಿಲ್ ಮಾಲಾ ಚಂದ್ರಶೇಖರ್–ಕೊಳಲು ವಾದನ, 10.00 ನಾಟಕ, 10.30 ಸವಿನೆನಪು.

ಕರ್ನಾಟಕ ಸಂಗೀತದಲ್ಲಿ ಮಿಂದೆದ್ದ ಪ್ರೇಕ್ಷಕರು



63ನೇ 'ಪಾರಂಪರಿಕ ಸಂಗೀತೋತ್ಸವ'ದ ಏಳನೇ ದಿನದ ಕಾರ್ಯಕ್ರಮದಲ್ಲಿ ವಿದುಷಿ ಸ್ಫೂರ್ತಿರಾವ್ ಸಂಗೀತ ಕಛೇರಿ ನಡೆಸಿಕೊಟ್ಟರು.


ಮೈಸೂರು, ಸೆ.15(ಎಸ್‌ಪಿಎನ್)– ವಿದುಷಿ ಸ್ಫೂರ್ತಿರಾವ್ ಅವರ ಕರ್ನಾಟಕ ಸಂಗೀತ ಗಾಯನದ ಸುಧೆಯಲ್ಲಿ ಸಹೃದಯರು ಮಿಂದೆದ್ದರು.

ನಗರದ ವಾಣಿವಿಲಾಸ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ 'ಶ್ರೀಪ್ರಸನ್ನ ವಿದ್ಯಾ ಗಣಪತಿ ಮಹೋತ್ಸವ ಚಾರಿಟೆಬಲ್ ಟ್ರಸ್ಟ್'(ಎಸ್‌ಪಿವಿಜಿಎಂಸಿ) ಏರ್ಪಡಿಸಿರುವ 63ನೇ 'ಪಾರಂಪರಿಕ ಸಂಗೀತೋತ್ಸವ'ದ ಏಳನೇ ದಿನದ ಕಾರ್ಯಕ್ರಮದಲ್ಲಿ ವಿದುಷಿ ಸ್ಫೂರ್ತಿರಾವ್ ಅವರ ಗಾಯನ ಮೆರುಗು ತಂದಿತು. 'ಭೈರವಿ' ರಾಗದ 'ವೀರಿ ಬೋಣಿ ವರ್ಣ'ದೊಂದಿಗೆ ಕಛೇರಿ ಆರಂಭಿಸಿದ ಸ್ಫೂರ್ತಿ ರಾವ್, ಮುತ್ತುಸ್ವಾಮಿ ದೀಕ್ಷಿತರ 'ನಾಟ' ರಾಗದ ಕೃತಿ 'ಮಹಾ ಗಣಪತಿಂ ಮನಸಾ ಸ್ಮರಾಮಿ' ಹಾಡಿ ಗಣೇಶನನ್ನು ಸ್ತುತಿಸಿದರು.

ತ್ಯಾಗರಾಜರ ಕೃತಿಗಳಾದ 'ಆಹಿರಿ' ರಾಗದ 'ಸೊಂಪೈನ', 'ತೋಡಿ' ರಾಗದ 'ರಾಜು ವೆಡಲೆ' ಹಾಡಿದ ಸ್ಫೂರ್ತಿ ರಾವ್, 'ಶುಭಪಂತು ವರಾಳಿ'ಯಲ್ಲಿ ರಾಗತಾನ ಪಲ್ಲವಿ ಪ್ರಸ್ತುತ ಪಡಿಸಿದರು. ಕನಕದಾಸರ 'ಮಾಂಡ್' ರಾಗದ 'ಬಾರೋ ಕೃಷ್ಣಯ್ಯ' ರಾಗಮಾಲಿಕೆ ಹಾಡಿದ ನಂತರ ಲಾಲ್ಗುಡಿ ಜಯರಾಮನ್‌ರ ತಿಲ್ಲಾನದೊಂದಿಗೆ ಕಛೇರಿ ಅಂತ್ಯಗೊಳಿಸಿದರು.

ವಿದುಷಿ ಸ್ಫೂರ್ತಿರಾವ್ ಸಂಗೀತ ಕಛೇರಿಗೆ ವಿದ್ವಾನ್ ಎಚ್.ಎನ್.ಭಾಸ್ಕರ್ ಅವರು 'ವಯಲಿನ್', ವಿದ್ವಾನ್ ಅದಮ್ಯ ರಮಾನಂದ್ ಅವರ 'ಮೃದಂಗ' ಹಾಗೂ ವಿದ್ವಾನ್ ಶಮಿತ್ ಗೌಡ ಅವರ 'ಘಟಂ'ನ ಲಯ ಲಹರಿಯು ಮೆರಗು ತಂದಿತು. ಇದಕ್ಕೂ ಮೊದಲು ವಿದುಷಿ ಮಹಿಮಾ ಕಶ್ಯಪ್ ಅವರಿಂದ ಕಾಳಿದಾಸನ 'ರಘುವಂಶ' ಕುರಿತು ಕಾವ್ಯ ವಾಚನ ಮಾಡಿದರೆ, ಎಚ್.ವಿ. ನಾಗರಾಜರಾವ್ ವ್ಯಾಖ್ಯಾನಿಸಿದರು.

ದಸರಾ ಗಜಪಡೆಯ ಹೊಸ ಆನೆ ಏಕಲವ್ಯನಿಗೆ ಭಾರ ಹೊರಿಸಿ ತಾಲೀಮು



ದಸರಾ ಗಜಪಡೆ ಹೊಸ ಆನೆ ಏಕಲವ್ಯ ಆನೆಗೆ ಭಾನುವಾರ ಸಂಜೆ 300 ಕೆಜಿ ಭಾರ ಹೊರಿಸಿ ತಾಲೀಮು ನಡೆಸಲಾಯಿತು.

ಮೈಸೂರು, ಸೆ.15(ಎಂಟಿವೈ)– ದಸರಾ ಗಜಪಡೆಯ ಹೊಸ ಆನೆ ಏಕಲವ್ಯನಿಗೆ ಮೊದಲ ಬಾರಿಗೆ ಬಾರ ಹೊರಿಸುವ ತಾಲೀಮು ನೀಡಲಾಗಿದ್ದು, ಅರಮನೆಯಿಂದ ಬನ್ನಿ ಮಂಟಪದ ಪಂಜಿನ ಕವಾಯತ್ ಮೈದಾನಕ್ಕೆ 1.10 ಗಂಟೆ ಅವಧಿಯಲ್ಲೇ ತಲುಪುವ ಮೂಲಕ ಭರವಸೆ ಮೂಡಿಸಿದೆ.

ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಪಾಲ್ಗೊಳ್ಳುತ್ತಿರುವ 39 ವರ್ಷದ ಏಕಲವ್ಯ ಮೃದು ಸ್ವಭಾವದ ಆನೆಯಾಗಿದ್ದು, ಎರಡು ವರ್ಷದ ಹಿಂದಷ್ಟೇ ಸೆರೆ ಹಿಡಿದಿರುವ ಆನೆಯಾಗಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮತ್ತಿಗೋಡು ಕ್ಯಾಂಪ್‌ನಲ್ಲಿರುವ ಏಕಲವ್ಯ ಭವಿಷ್ಯದಲ್ಲಿ ದಸರಾ ಮಹೋತ್ಸವದಲ್ಲಿ ಮಹತ್ತರ ಜವಾಬ್ದಾರಿ ನಿಭಾಯಿಸುವ ಎಲ್ಲಾ ಭರವಸೆ ಮೂಡಿಸಿದ್ದು, ಅರಣ್ಯಾಧಿಕಾರಿಗಳಲ್ಲಿ ಸಮಾಧಾನವುಂಟಾಗುವಂತೆ ಮಾಡಿದೆ.

ದಸರಾ ಗಜಪಡೆಯ ಮೊದಲ ತಂಡದಲ್ಲಿಯೇ ಆ.21ರಂದು ಮೈಸೂರಿಗೆ ಆಗಮಿಸಿದ್ದ ಏಕಲವ್ಯ ಭರವಸೆಯ ಆನೆ ಎಂದೇ ಬಿಂಬಿತವಾಗಿದೆ. ಗಜಪಡೆಯ ನಾಯಕ ಅಭಿಮನ್ಯು ನಿವೃತ್ತಿ ನಂತರ ಧನಂಜಯ, ಸುಗ್ರೀವ, ಪ್ರಶಾಂತ, ಗೋಪಿ, ಮಹೇಂದ್ರ, ಭೀಮನ ಸಾಲಿಗೆ ಇದೀಗ ಏಕಲವ್ಯನ ಹೆಸರು ಸೇರ್ಪಡೆಗೊಂಡಿದೆ.

ಸರಾಗವಾಗಿ ಸಾಗಿದ ಏಕಲವ್ಯ: ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಯ ಗಂಡಾನೆಗಳಿಗೆ ಕಳೆದ ಕೆಲವು ದಿನಗಳಿಂದ ಭಾರ ಹೊರಿಸುವ ತಾಲೀಮು ನಡೆಸಲಾಗುತ್ತಿದ್ದು, ಅಂಬಾರಿ ಆನೆ ಕ್ಯಾಪ್ಟನ್ ಅಭಿಮನ್ಯುವಿಗೆ ತರಬೇತಿ ನೀಡಲು ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಈಗಾಗಲೇ ಅಭಿಮನ್ಯು ಅನುಭವಿಯೂ ಹಾಗೂ ಬಲಶಾಲಿಯೂ ಆಗಿರುವುದರಿಂದ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯನ್ನು ಸರಾಗವಾಗಿ ಹೊತ್ತು ಸಾಗಬಲ್ಲ ಸಾಮರ್ಥ್ಯ ಹೊಂದಿದ್ದಾನೆ. ಆದರೂ ಪರ್ಯಾಯ ಆನೆಗಳನ್ನು ಸಜ್ಜುಗೊಳಿಸಬೇಕಾಗಿರುವುದರಿಂದ ಇಂದು ಏಕಲವ್ಯ ಆನೆಗೆ ಭಾರ ಹೊರಿಸುವ ತರಬೇತಿ ನೀಡಲಾಯಿತು.

ಅರಮನೆ ಆವರಣದಲ್ಲಿ ಏಕಲವ್ಯನ ಮೇಲೆ ಗಾದಿ, ನಮ್ದಾ ಕಟ್ಟಿ, ಮರದ ತೊಟ್ಟಿಲು ಕಟ್ಟಿ ಮರಳಿನ ಮೂಟೆ ಇಡಲಾಯಿತು. ಮೊದಲ ದಿನದ ಭಾರ ಹೊರಿಸುವ ತಾಲೀಮು ಆಗಿದ್ದರಿಂದ ಏಕಲವ್ಯನ ಮೇಲೆ 300 ಕೆಜಿ ಭಾರವನ್ನಷ್ಟೇ ಇಡಲಾಗಿತ್ತು. ವಾಹನಗಳ ದಟ್ಟಣೆಯ ನಡುವೆ ಭಾರ ಹೊತ್ತು ಸರಾಗವಾಗಿ ಸಾಗಿತು. 5 ಕಿ.ಮಿ ಅಂತರವನ್ನು 1.10 ಗಂಟೆ ಅವಧಿಯಲ್ಲೇ ತಲುಪಿ ವಿಶ್ವಾಸ ಮೂಡಿಸಿತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್, ಸಹಾಯಕರಾದ ಅಕ್ರಂ, ರಂಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಭಾರ ಹೊತ್ತು ಏಕಲವ್ಯ ಸರಾಗವಾಗಿ ಸಾಗಿದ್ದಾನೆ




ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಪಾಲ್ಗೊಳ್ಳುತ್ತಿರುವ 39 ವರ್ಷದ ಏಕಲವ್ಯ ಆನೆಗೆ ಇಂದು ಮೊದಲ ಬಾರಿಗೆ ಭಾರ ಹೊರಿಸುವ ತಾಲೀಮು ನಡೆಸಲಾಯಿತು. ಮೊದಲ ದಿನವಾಗಿದ್ದರಿಂದ 300 ಕೆಜಿ ಭಾರ ಹೊರಿಸಿ ತರಬೇತಿ ನೀಡಲಾಯಿತು. ಅರಮನೆಯಿಂದ ಹೊರಟ ಏಕಲವ್ಯ ಎಲ್ಲಿಯೂ ನಿಲ್ಲದೆ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನವನ್ನು 1.10ಗಂಟೆ ಅವಧಿಯಲ್ಲಿಯೇ ತಲುಪಿದೆ.

- ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ವನ್ಯಜೀವಿ ವಿಭಾಗ

ದಸರಾ ಗಜಪಡೆಗೆ ಹೆಡ್ ಮೇಡಮ್ ಆದ 'ವರಲಕ್ಷ್ಮಿ'

•ಅರಮನೆ ಆವರಣದಲ್ಲೇ ಗಜಪಡೆಯ ಮೇಲುಸ್ತುವಾರಿಗೆ ಸೀಮಿತವಾದ ಹಿರಿಯಜ್ಜಿ •ತಾಲೀಮಿನಿಂದ ಪೂರ್ಣ ವಿನಾಯಿತಿ



ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಸೆ.15– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಗೆ ಮುಖ್ಯ ಶಿಕ್ಷಕರಂತೆ ಮಾರ್ಗದರ್ಶನ ಮಾಡಲು ಗಜಪಡೆಯ ಹಿರಿಯ ಸದಸ್ಯೆ ವರಲಕ್ಷ್ಮಿ ಆನೆಯನ್ನು ಬಳಸಿಕೊಳ್ಳಲಾಗುತ್ತಿದೆ.

ದಸರಾ ಗಜಪಡೆಯ 14 ಆನೆಗಳಲ್ಲಿ ಅತಿ ಕಿರಿಯ ಆನೆ ಎಂಬ ಕೀರ್ತಿಗೆ 22 ವರ್ಷದ ರೋಹಿತ ಆನೆ ಪಾತ್ರವಾಗಿದ್ದರೆ, ಅತಿ ಹಿರಿಯ ಆನೆಯಾಗಿ 68 ವರ್ಷದ ವರಲಕ್ಷ್ಮಿ ಆನೆ ಗಮನ ಸೆಳೆಯುತ್ತಿದೆ. ಸೇವಾ ನಿವೃತ್ತಿ ಹಿನ್ನೆಲೆಯಲ್ಲಿ ವರಲಕ್ಷ್ಮಿ ಆನೆಗೆ ಯಾವುದೇ ಭಾರ ಹೊರಿಸದೇ ಗಜಪಡೆಗೆ ಮಾರ್ಗದರ್ಶನ ನೀಡಲು ಹಿರಿಯ ಆನೆಯೊಂದರ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ವರಲಕ್ಷ್ಮಿ ಆನೆಯನ್ನು ಕ್ಯಾಂಪ್‌ನಿಂದ ಗಜಪಡೆಯೊಂದಿಗೆ ಕರೆತರಲಾಗಿದೆ.

ಮೊದಲ ತಂಡದಲ್ಲಿಯೇ ಆ.21ರಂದು ಭೀಮನಕಟ್ಟೆ ಕ್ಯಾಂಪ್‌ನಿಂದ ಮೈಸೂರು ಅರಮನೆಗೆ ಕರೆತರಲಾಗಿರುವ ವರಲಕ್ಷ್ಮಿ ಆನೆಗೆ ಕೇವಲ ತೂಕ ಹಾಕಿಸಲಷ್ಟೇ ಹೊರಗೆ ಕರೆದುಕೊಂಡು ಬರಲಾಗಿದ್ದು, ಉಳಿದಂತೆ ತಾಲೀಮಿನಿಂದ ಹಿರಿಯ ಆನೆಗೆ ವಿನಾಯಿತಿ ನೀಡಲಾಗಿದೆ. ಅರಮನೆ ಆವರಣದಲ್ಲಿಯೇ ಉಳಿದ ಆನೆಗಳಿಗೆ ನೀಡುವಂತೆ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದ್ದು, ಮಾವುತ ಜೆ.ಕೆ.ರವಿ, ಕಾವಾಡಿ ಕೆ.ಎಸ್.ಲವ ವರಲಕ್ಷ್ಮಿ ಆನೆಯನ್ನು ಆರೈಕೆ ಮಾಡುತ್ತಿದ್ದಾರೆ. ಬಿಡಾರದಲ್ಲಿ ಹಿರಿಯ ಆನೆಯೊಂದು ಇದ್ದರೆ, ಉಳಿದ ಆನೆಗಳ ವರ್ತನೆಯಲ್ಲಿ ನಿಯಂತ್ರಣವಿರುತ್ತದೆ ಎಂಬ ನಂಬಿಕೆಯೊಂದಿಗೆ ಪ್ರತಿವರ್ಷ ಹಿರಿಯ ಹೆಣ್ಣಾನೆಯೊಂದನ್ನು ಕರೆತರಲಾಗುತ್ತದೆ.

ಈ ಹಿಂದೆಯೂ: ಕಳೆದ ಕೆಲವು ವರ್ಷಗಳ ದಸರಾ ಗಜಪಡೆಯ ಇತಿಹಾಸ ಅವಲೋಕಿಸಿದರೆ ಗಜಪಡೆಯಲ್ಲಿ ಸರಳ, ವಿಜಯ, ಕಾವೇರಿ, ದುರ್ಗಾಪರಮೇಶ್ವರಿ ಹಾಗೂ ವರಲಕ್ಷ್ಮಿ ಹಿರಿತನದ ಆಧಾರದಲ್ಲಿ ಗಜಪಡೆಯೊಂದಿಗೆ ಆಗಮಿಸುತ್ತಿದ್ದವು. ಅವುಗಳಲ್ಲಿ ಒಂದು ಹಿರಿಯ ಹೆಣ್ಣಾನೆ ಅಂಬಾರಿ ಹೊತ್ತ ಆನೆಯೊಂದಿಗೆ ಕುಮ್ಕಿ ಆನೆಯಾಗಿ ಸಾಗಿದರೆ, ಮತ್ತೊಂದು ಕುಮ್ಕಿ ಆನೆ ಸ್ಥಾನವನ್ನು ಚೈತ್ರ ಅಥವಾ ಇನ್ನಿತರ ಆನೆಗಳು ತುಂಬುತ್ತಿದ್ದವು. ಇದೀಗ ಸರಳ, ವಿಜಯ, ಕಾವೇರಿ ಆನೆಗೆ 60 ವರ್ಷ ಮೇಲ್ಪಟ್ಟಿದ್ದು, ಅವುಗಳನ್ನು ಕ್ಯಾಂಪ್‌ನಲ್ಲಿಯೇ ಇರಿಸಿ ಆರೈಕೆ ಮಾಡಲಾಗುತ್ತಿದೆ. ದುರ್ಗಾಪರಮೇಶ್ವರಿ ಕಳೆದ ವರ್ಷ ಅನಾರೋಗ್ಯಕ್ಕೀಡಾಗಿ ಮೃತಪಟ್ಟಿದೆ. ಉಳಿದ ಆನೆಗಳಲ್ಲಿ ವರಲಕ್ಷ್ಮಿ ಆನೆ ಆರೋಗ್ಯದಿಂದ ಕೂಡಿರುವುದರಿಂದ ಈ ಬಾರಿ ದಸರಾ ಮಹೋತ್ಸವಕ್ಕೆ ಕರೆತರಲಾಗಿದೆ. ಹಿರಿತನದ ಆಧಾರದಲ್ಲಿ ಸಹಜವಾಗಿಯೇ ವರಲಕ್ಷ್ಮಿ ಆನೆಯ ವರ್ತನೆಯೂ ತೂಕದಿಂದ ಕೂಡಿರುತ್ತದೆ. ಈ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿಯೇ ಬೀಡು ಬಿಟ್ಟಿರುವ ವರಲಕ್ಷ್ಮಿ ಆನೆ ಸಹಜವಾಗಿಯೇ ಎಲ್ಲಾ ಆನೆಗಳ ವರ್ತನೆಯನ್ನು ನಿಯಂತ್ರಿಸುತ್ತಿದೆ. ಈ ಹಿನ್ನೆಲೆಯಲ್ಲಿ ವರಲಕ್ಷ್ಮಿ ಆನೆಯೂ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳದಿದ್ದರೂ ಮಹತ್ತರ ಪಾತ್ರ ನಿಭಾಯಿಸುತ್ತಿದೆ. ಜಂಬೂಸವಾರಿ ದಿನ ಮತ್ತೊಂದು ಆನೆಯನ್ನು ಅರಮನೆಯಲ್ಲಿಯೇ ಬೀಡು ಬಿಡಲಿದ್ದು, ಅದಕ್ಕೆ ಜೊತೆ ಕಾವಲಿರಲು ಮಲ್ಲಿ ಕಾರ್ಯ ನಿರ್ವಹಿಸಲಿದೆ

ಹಿರಿತನದ ಮೇಲೆ ವರಲಕ್ಷ್ಮಿಗೆ ತಾಲೀಮಿನಿಂದ ಪೂರ್ಣ ವಿರಾಮ ನೀಡಲಾಗಿದೆ

ದಸರಾ ಗಜಪಡೆಯಲ್ಲಿಯೇ ಹಿರಿಯ ಆನೆಯಾಗಿರುವ 68 ವರ್ಷದ ವರಲಕ್ಷ್ಮಿ ಆನೆಗೆ ತಾಲೀಮಿನಿಂದ ವಿನಾಯಿತಿ ನೀಡಲಾಗಿದೆ. ಗಜಪಡೆಯಲ್ಲಿ ಹಿರಿಯ ಆನೆಯೊಂದು ಇರಬೇಕೆಂಬ ಉದ್ದೇಶದಿಂದ ವರಲಕ್ಷ್ಮಿ ಆನೆಯನ್ನು ಕರೆತರಲಾಗಿದೆ. ಬಿಡಾರದಲ್ಲಿಯೇ ಎಲ್ಲಾ ಆನೆಗಳಂತೆ ಪೌಷ್ಟಿಕ ಆಹಾರ ನೀಡಿ ಆರೈಕೆ ಮಾಡಲಾಗುತ್ತಿದೆ. ಹಿರಿಯ ಆನೆ ಇದ್ದರೆ, ಇತರೆ ಆನೆಗಳ ವರ್ತನೆಯೂ ಸುಧಾರಿಸುತ್ತದೆ. - ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ವನ್ಯಜೀವಿ ವಿಭಾಗ

ಇಂದು ನಾಗಮಂಗಲಕ್ಕೆ ಬಿಜೆಪಿ ಸತ್ಯಶೋಧನಾ ಸಮಿತಿ ಭೇಟಿ

ಬೆಂಗಳೂರು, ಸೆ.15– ಬಿಜೆಪಿ ಸತ್ಯಶೋಧನಾ ಸಮಿತಿಯು ನಾಳೆ (ಸೋಮವಾರ) ನಾಗಮಂಗಲಕ್ಕೆ ಭೇಟಿ ಕೊಟ್ಟು ಅಲ್ಲಿನ ಮಾಹಿತಿಯನ್ನು ಪಡೆಯಲಿದೆ ಎಂದು ಮಾಜಿ ಡಿಸಿಎಂ ಡಾ.ಸಿ.ಎನ್ ಅಶ್ವಥ್ ನಾರಾಯಣ್ ತಿಳಿಸಿದರು.

ಈ ಕುರಿತು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ನನ್ನ ನೇತೃತ್ವದಲ್ಲಿ ಬಿಜೆಪಿ ಸತ್ಯಶೋಧನಾ ಸಮಿತಿಯನ್ನು ರಚಿಸಿದ್ದು, ಮಾಜಿ ಸಚಿವರು ಮತ್ತು ಬಿಜೆಪಿ ರಾಜ್ಯ ಉಪಾಧ್ಯಕ್ಷ ಭೈರತಿ ಬಸವರಾಜ್, ಮಾಜಿ ಸಚಿವ ಕೆ.ಸಿ. ನಾರಾಯಣಗೌಡ, ಬಿಜೆಪಿ ರಾಜ್ಯ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಅಶ್ವಿನ್ ಗೌಡ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಅವರನ್ನು ಸಮಿತಿ ಒಳಗೊಂಡಿದೆ ಎಂದರು.

ನಾಗಮಂಗಲದಲ್ಲಿ ಗಣೇಶೋತ್ಸವ ಸಂದರ್ಭದಲ್ಲಿ ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದೆ. ಪ್ರಾರಂಭದಲ್ಲಿ ಅದೇನೂ ಇಲ್ಲ ಎಂಬಂತೆ ಹೇಳಿಕೆ ಕೊಟ್ಟರು. ನಂತರ ಇಂಟೆಲಿಜೆನ್ಸ್ ಮುಖ್ಯಸ್ಥರನ್ನು ವರ್ಗಾಯಿಸಿದರು. ಇನ್‌ಸ್ಪೆಕ್ಟರ್ ಅನ್ನು ಅಮಾನತು ಮಾಡಿದ್ದು, ಕಾನೂನು– ಸುವ್ಯವಸ್ಥೆ ನಿರ್ವಹಿಸುವಲ್ಲಿನ ವೈಫಲ್ಯವು ನಾಗಮಂಗಲ ಘಟನೆ ಮೂಲಕ ವ್ಯಕ್ತವಾಗಿದೆ ಎಂದು ಕಿಡಿಕಾರಿದರು.

ಕೇರಳದವರು ಇದರ ಹಿಂದಿದ್ದು, ಎಸ್‌ಡಿಪಿಐನವರು ಇದ್ದಾರೆ ಎಂಬ ಅನುಮಾನಗಳಿವೆ. ನಾಗಮಂಗಲದಲ್ಲಿ ಒಂದು ಕೋಮಿನವರು ಪ್ರಚೋದನೆ ಮಾಡಿದ್ದಾರೆ. ನಮ್ಮ ಸಂಸ್ಕೃತಿ ಎನಿಸಿದ ವಿನಾಯಕನ ಚತುರ್ಥಿ ಕಾರ್ಯಕ್ರಮವು ದೇಶದ ಸದೃಢತೆಗೆ ಶಕ್ತಿ ತುಂಬುತ್ತದೆ. ಅಂಥ ಸಂದರ್ಭದಲ್ಲಿ ಅಡಚಣೆ, ಅನವಶ್ಯಕವಾಗಿ ತೊಂದರೆ ಕೊಡುತ್ತಿದ್ದು, ಇದಕ್ಕೆ ಗೃಹ ಇಲಾಖೆ ಬೆಂಬಲ ಕೊಡುತ್ತಿದೆ ಎಂದು ಟೀಕಿಸಿದರು.

ಈ ಸರ್ಕಾರ ಒಂದು ವರ್ಗ, ಒಂದು ಧರ್ಮಕ್ಕೆ ಸೀಮಿತವಾಗಿ ವರ್ತಿಸುತ್ತಿದೆ. ಎಷ್ಟೋ ಕಡೆ ಗಣೇಶ ಮೂರ್ತಿ ಇಡಲು ಬಿಟ್ಟಿಲ್ಲ. ಮೆರವಣಿಗೆಗೆ ಕಡಿವಾಣ ಹಾಕಿದ್ದಾರೆ. ಫ್ರೀಡಂ ಪಾರ್ಕಿನಲ್ಲಿ ಗಣೇಶ ಮೂರ್ತಿಯನ್ನೇ ಅರೆಸ್ಟ್ ಮಾಡಿದ್ದಾರೆ ಎಂದು ಆಕ್ಷೇಪಿಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ದಿನದಿಂದ ರಾಜ್ಯದಲ್ಲಿ ಕಾನೂನು, ಸುವ್ಯವಸ್ಥೆ ಕಾಪಾಡಲು ಸಂಪೂರ್ಣವಾಗಿ ವಿಫಲವಾಗಿದೆ. ನೂರಾರು ಘಟನೆಗಳು ಕಣ್ಣೆದುರು ಇವೆ. ತುಷ್ಟೀಕರಣದ ಪರಿಣಾಮ, ಆಡಳಿತದ ಮೇಲೆ ಹಿಡಿತ, ಸ್ಪಷ್ಟತೆ ಇಲ್ಲದ ಕಾರಣ ಸಮಾಜದಲ್ಲಿ ತುಂಬ ಗೊಂದಲ, ಭಯ, ಅತೃಪ್ತಿಯ ವಾತಾವರಣ ನಿರ್ಮಾಣ ಮಾಡಿದ್ದಾರೆ ಎಂದು ಆರೋಪಿಸಿದರು.

ಅ.2, ಗಾಂಧಿ ಜಯಂತಿಯಂದೇ ಪಿತೃಪಕ್ಷ: ಮಾಂಸ ಮಾರಾಟ ನಿಷೇಧ ತೆರವಿಗೆ ಸಿಎಂಗೆ ಮನವಿ

ಮೈಸೂರು, ಸೆ.15(ಎಸ್‌ಬಿಡಿ)– ಮಹಾಲಯ ಅಮಾವಾಸ್ಯೆಯಂದು ಪಿತೃಪಕ್ಷ ಹಬ್ಬ ಆಚರಿಸುವ ಹಿನ್ನೆಲೆಯಲ್ಲಿ ಅಕ್ಟೋಬರ್ 2 ಗಾಂಧಿ ಜಯಂತಿ ದಿನದಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ಮಾಂಸ ಮಾರಾಟಕ್ಕೆ ಅವಕಾಶ ನೀಡುವಂತೆ ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ, ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ.

ಪ್ರತಿ ವರ್ಷ ಗಾಂಧಿ ಜಯಂತಿಯಂದು ಮಾಂಸ ಮಾರಾಟ ನಿಷೇಧಿಸಲಾಗುತ್ತದೆ. ಆದರೆ ಈ ಬಾರಿ ಕಾಕತಾಳೀಯವಾಗಿ ಅದೇ ದಿನ ಮಹಾಲಯ ಅಮಾವಾಸ್ಯೆ ಬಂದಿರುವ ಹಿನ್ನೆಲೆಯಲ್ಲಿ ಪಿತೃಪಕ್ಷ ಆಚರಿಸುವವರಲ್ಲಿ ಗೊಂದಲ ಸೃಷ್ಟಿಯಾಗಿದೆ ಸಂಪ್ರದಾಯಕ್ಕೆ ಅಡಚಣೆಯಾಗಬಹುದೇ ಎಂಬ ಆತಂಕ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ವೇದಿಕೆ ಪದಾಧಿಕಾರಿಗಳು, ಪತ್ರದ ಮೂಲಕ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಮಹಾಲಯ ಅಮಾವಾಸ್ಯೆಯಂದು ಕೋಟ್ಯಾಂತರ ಜನ ಪಿತೃಪಕ್ಷ ಹಬ್ಬ ಆಚರಿಸುತ್ತಾರೆ. ಮಾಂಸಾಹಾರ ಸಿದ್ಧಪಡಿಸಿ, ಕಾಲವಾದ ಹಿರಿಯರಿಗೆ ಎಡೆ ಹಾಕಿ, ಪೂಜಿಸುತ್ತಾರೆ. ಬಂಧು–ಬಳಗದವರು, ಸ್ನೇಹಿತರನ್ನು ಹಬ್ಬಕ್ಕೆ ಆಹ್ವಾನಿಸಿ, ಒಟ್ಟಾಗಿ ಊಟ ಮಾಡುವ ಆಚರಣೆ ಹಲವು ಶತಮಾನಗಳಿಂದ ರೂಢಿಯಲ್ಲಿದೆ ಆದರೆ ಈ ಬಾರಿ ಕಾಕತಾಳೀಯವೆಂಬಂತೆ ಪಿತೃಪಕ್ಷದ ಮಹಾಲಯ ಅಮಾವಾಸ್ಯೆ ಹಬ್ಬವು ಗಾಂಧಿ ಜಯಂತಿ ದಿನವೇ ಬಂದಿದೆ ಆ ದಿನ ಮಾಂಸ ಮಾರಾಟ ನಿಷೇಧ ಇರುವುದರಿಂದ ಪಿತೃಪಕ್ಷಕ್ಕೆ ಅಡಚಣೆಯಾಗುವ ಆತಂಕ ಜನರಲ್ಲಿದೆ.

ಎಲ್ಲರಿಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಬಗ್ಗೆ ಅಪಾರವಾದ ಗೌರವವಿದೆ. ಹಾಗೆಯೇ ಪಿತೃಪಕ್ಷದ ಮಹಾಲಯ ಅಮಾವಾಸ್ಯೆ ದಿನದಂದು ಮಾಂಸಾಹಾರವನ್ನು ಎಡೆ ಹಾಕಿ, ಪೂಜಿಸಿಕೊಂಡು ಬಂದಿರುವ ಶತಮಾನಗಳ ಆಚರಣೆಯನ್ನೂ ತಪ್ಪದಂತೆ ಮುಂದುವರೆಸಿಕೊಂಡು ಹೋಗುವುದು ಅನಿವಾರ್ಯವಾಗಿದೆ ಪಿತೃಪಕ್ಷ ಆಚರಿಸುವ ಕೋಟ್ಯಾಂತರ ಜನರ ಭಾವನೆ ಹಾಗೂ ಧಾರ್ಮಿಕ ಹಕ್ಕುಗಳಿಗೆ ಯಾವುದೇ ಕಾರಣಕ್ಕೂ ಧಕ್ಕೆಯಾಗಬಾರದು. ಈ ನಿಟ್ಟಿನಲ್ಲಿ ವಿಶೇಷ ಸಂದರ್ಭವೆಂದು ಪರಿಗಣಿಸಿ, ಒಂದು ಬಾರಿ ಅನ್ವಯವಾಗುವಂತೆ ಅಕ್ಟೋಬರ್ 2ರಂದು ಮಾಂಸ ಮಾರಾಟ ನಿಷೇಧ ಹಿಂಪಡೆದು, ರಾಜ್ಯಾದ್ಯಂತ ಮಾಂಸ ಮಾರಾಟಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಈ ಮೂಲಕ ರಾಜ್ಯದ ಕೋಟ್ಯಾಂತರ ಜನ, ಪಿತೃಪಕ್ಷ ಹಬ್ಬವನ್ನು ಎಂದಿನಂತೆ ಆಚರಣೆ ಮಾಡಲು ಅನುವು ಮಾಡಿಕೊಡಬೇಕು ಎಂದು ವೇದಿಕೆ ಅಧ್ಯಕ್ಷ ಬಿ.ಎಂ. ಶಿವಕುಮಾರ್ ಹಾಗೂ ಪದಾಧಿಕಾರಿಗಳು, ಸಿಎಂಗೆ ನೀಡಿರುವ ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಬ್ಯಾಂಕ್ ಖಾತೆಯಲ್ಲಿ ಕೋಟ್ಯಾಂತರ ರೂ. ಇರುವುದಾಗಿ ನಂಬಿಸಿ, ವೈದ್ಯಗೆ 45 ಲಕ್ಷ ರೂ. ವಂಚನೆ

ಮೈಸೂರು, ಸೆ.15– ನಿಮ್ಮ ಖಾತೆಯಲ್ಲಿ ಕೋಟ್ಯಾಂತರ ರೂ. ಹಣ ಇಟ್ಟಿರುವ ಬಗ್ಗೆ ಸಿಬಿಐ ತನಿಖೆ ನಡೆಯುತ್ತಿದೆ ಎಂದು ವೈದ್ಯರೊಬ್ಬರನ್ನು ಬೆದರಿಸಿ, 45 ಲಕ್ಷ ರೂ. ಪಡೆದು ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಜೆ.ಪಿ.ನಗರದಲ್ಲಿ ನೆಲೆಸಿರುವ ವೈದ್ಯರೊಬ್ಬರಿಗೆ ಸೆ.12ರಂದು ಕರೆ ಮಾಡಿದ ಅಪರಿಚಿತ, ತಾನು ಟೆಲಿಕಾಂ ಇಲಾಖೆಯಿಂದ ಮಾತನಾಡುತ್ತಿರುವುದಾಗಿ ತಿಳಿಸಿದ್ದಾನೆ. ಕರೆ ಮಾಡಿದ ವಿಷಯವೇನೆಂದು ಕೇಳಿದಾಗ, ನಿಮ್ಮ ಆಧಾರ್ ಸಂಖ್ಯೆ ನೀಡಿ ಖರೀದಿಸಿರುವ ಸಿಮ್ ಬಳಸಿಕೊಂಡು ಕೆನರಾ ಬ್ಯಾಂಕ್‌ನಲ್ಲಿ ಖಾತೆ ತೆರೆಯಲಾಗಿದೆ. ಆ ಖಾತೆಯಲ್ಲಿ ಕೋಟ್ಯಾಂತರ ರೂ. ಇರುವುದಾಗಿ ಎಫ್‌ಐಆರ್ ದಾಖಲಾಗಿದ್ದು, ಈ ಸಂಬಂಧ ಸಿಬಿಐ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾನೆ.



ಇದರಿಂದ ತಮ್ಮ ಆಧಾರ್ ಸಂಖ್ಯೆಯನ್ನು ಯಾರೋ ದುರುಪಯೋಗಪಡಿಸಿಕೊಂಡಿರಬಹುದು ಎಂದು ಆತಂಕಗೊಂಡ ಡಾಕ್ಟರ್, ಆ ವ್ಯಕ್ತಿಯೊಂದಿಗೆ ಮಾತು ಮುಂದುವರೆಸಿದ್ದಾರೆ. ಆಗ ಆ ವಂಚಕ ಪರಿಶೀಲನೆ ನೆಪದಲ್ಲಿ ಆಧಾರ್ ನಂಬರ್ ಪಡೆದು, ನಂತರ 42 ಲಕ್ಷ ರೂ. ಹಣ ಸಂದಾಯ ಮಾಡಿಸಿಕೊಂಡಿದ್ದಾನೆ. ಬಳಿಕ ಆತ ಸಂಪರ್ಕಕ್ಕೆ ಸಿಗದಿದ್ದಾಗ ಮೋಸ ಹೋಗಿರುವುದು ಗೊತ್ತಾಗಿದೆ.

ಈ ಸಂಬಂಧಡಾಕ್ಟರ್ ನೀಡಿದ ದೂರಿನ್ವಯ ಸೆನ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸ್ವಾರ್ಥರಹಿತ ಜನರಿಂದ ಮಾತ್ರ ಯಾವುದೇ ಸಮಾಜ, ಸಂಸ್ಥೆ ಉಳಿಯಲು ಸಾಧ್ಯ

ಎಂ.ವೆಂಕಟಕೃಷ್ಣಯ್ಯನವರ 180ನೇ ಜಯಂತ್ಯುತ್ಸವದಲ್ಲಿ ಹಿರಿಯ ಪತ್ರಕರ್ತ ಹೆಚ್.ಆರ್.ರಂಗನಾಥ್ ಅಭಿಮತ

ಮೈಸೂರು,ಸೆ.15(ಪಿಎಂ)– ಸ್ವಾರ್ಥ ರಹಿತ ಜನರಿಂದ ಮಾತ್ರ ಯಾವುದೇ ಸಮಾಜ, ಸಂಸ್ಥೆಯಾದರೂ ಉಳಿದು ಬೆಳೆಯಲು ಸಾಧ್ಯ. ಆದರೆ ಇಂದು ಸ್ವಾರ್ಥ ವಿಪರೀತವಾದ ಪರಿಣಾಮವೇ ಸಮಾಜದಲ್ಲಿ ಹಲವು ಸಮಸ್ಯೆಗಳು ಹುಟ್ಟಿಕೊಂಡಿವೆ ಎಂದು ಹಿರಿಯ ಪತ್ರಕರ್ತರೂ ಆದ ಪಬ್ಲಿಕ್ ಸುದ್ದಿ ವಾಹಿನಿ ಅಧ್ಯಕ್ಷ ಹೆಚ್.ಆರ್.ರಂಗನಾಥ್ ಹೇಳಿದರು.

ಮೈಸೂರಿನ ಕೆಆರ್ ಮೊಹಲ್ಲಾದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ತಾತಯ್ಯನವರ ಅನಾಥಾಲಯದ ಆವರಣದಲ್ಲಿ ಅನಾಥಾಲಯದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ವೃದ್ಧ ಪಿತಾಮಹ ದಯಾಸಾಗರ ಎಂ.ವೆಂಕಟಕೃಷ್ಣಯ್ಯನವರ 180ನೇ ಜಯಂತ್ಯುತ್ಸವ ಹಾಗೂ ಶ್ರೀ ಎಂ.ವೆಂಕಟಕೃಷ್ಣಯ್ಯ (ತಾತಯ್ಯ) ಪ್ರಶಸ್ತಿ ಮತ್ತು 'ತಾತಯ್ಯ ಶ್ರೀ' ಫಲಾನುಭವಿ ಸಾಧಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಾಮಾಜಿಕ ಜವಾಬ್ದಾರಿ ಮತ್ತು ನಿಸ್ವಾರ್ಥ ಸೇವೆಯ ಮನೋಭಾವ ಇದ್ದಲ್ಲಿ ಸಂಸ್ಥೆಗಳು ಉಳಿದು ಬೆಳೆಯುತ್ತವೆ ಎಂಬುದಕ್ಕೆ ಅನಾಥಾಲಯ ನಿದರ್ಶನವಾಗುತ್ತದೆ. ಬಲಿಷ್ಠ ಸಾಮ್ರಾಜ್ಯ ಕಟ್ಟಿದ್ದೇವೆಂದು ಪರಿಭಾವಿಸುವ ಚಕ್ರವರ್ತಿಗಳು ಕಣ್ಮರೆಯಾಗುತ್ತಾರೆ. ಸಾಮ್ರಾಜ್ಯಗಳು ನಶಿಸಿ ಹೋಗುತ್ತವೆ. ಆದರೆ ಕೆಲ ಸಂಸ್ಥೆಗಳು ಮಾತ್ರ ಉಳಿದು ಬೆಳೆಯುತ್ತವೆ. ಸಾಮ್ರಾಜ್ಯಗಳು ಈಗ ಇಲ್ಲದ ಕಾರಣ ಅವುಗಳನ್ನು ಬಿಟ್ಟು ನೋಡುವುದಾದರೆ ಸಂಸ್ಥೆಗಳು ಉಳಿಯುವುದು ಅದರ ಆಸ್ತಿ ಹಣಕಾಸಿನ ಶಕ್ತಿಯಿಂದಲ್ಲ. ಪೂರ್ವಕಾಲದಲ್ಲಿ ಮಾಡಿರುವ ಸಾಧನೆಗಳಿಂದಲೂ ಅಲ್ಲ. ಬದಲಿಗೆ ಸ್ವಾರ್ಥರಹಿತ ಜನರು ಇರುವ ಸಂಸ್ಥೆಗಳು ಮಾತ್ರ ಉಳಿದು ಬೆಳೆಯುತ್ತವೆ. ಖಾಸಗಿ ಇಲ್ಲವೇ ಸರ್ಕಾರಿ ಸಂಸ್ಥೆಯಾಗಲಿ ಸೇವಾ ಮನೋಭಾವದ ಜೊತೆಗೆ ಸ್ವಾರ್ಥರಹಿತ ಮನಸ್ಸು ಹೊಂದಿರುವ ವ್ಯಕ್ತಿಗಳು ಇದ್ದರೆ ಮಾತ್ರ ಯಾವುದೇ ಸಮಾಜ ಅಥವಾ ಸಂಸ್ಥೆಯಾದರೂ ಉದ್ಧಾರವಾಗಲು ಸಾಧ್ಯ. ಆದರೆ ಇಂದು ಸೇವೆಯ ಮತ್ತೊಂದು ಪದವೇ ಸ್ವಾರ್ಥವಾಗಿ ಪರಿಣಮಿಸಿರುವುದು ಹೆಚ್ಚಾಗಿದೆ ಎಂದು ವಿಷಾದಿಸಿದರು.

ಅಕ್ಕಿ, ಬೇಳೆ ಜನರ ತೆರಿಗೆಯಲ್ಲಿ ಕೊಟ್ಟಿದ್ದು: ರಾಜ್ಯ ಸರ್ಕಾರಗಳಲ್ಲಿ ಮುಖ್ಯಮಂತ್ರಿಗಳು, ಮಂತ್ರಿಗಳು ನಾವು ಏನೆಲ್ಲಾ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುತ್ತಿರುತ್ತಾರೆ. ಅಕ್ಕಿ, ಬೇಳೆ, ಕರೆಂಟ್ ಮತ್ತು ಬಸ್ ಕೊಟ್ಟಿದ್ದೇವೆ (ಉಚಿತ ಪ್ರಯಾಣ) ಎಂದು ಹೇಳಿಕೊಳ್ಳುತ್ತಲೇ ಇರುತ್ತಾರೆ. ಅಧಿಕಾರದಲ್ಲಿರುವ ರಾಜಕಾರಣಿಗಳಿಗೆ ಈ ಬಗ್ಗೆ ವೈಯಕ್ತಿಕವಾಗಿ ಸಿಕ್ಕಾಗ ನಾನು ಪ್ರಶ್ನೆ ಮಾಡಿದ್ದೇನೆ. ನಿಮ್ಮದೆಂಬುದು ಅದರೊಳಗೆ ಏನಿದೆ? ಜನತೆಯ ತೆರಿಗೆ ಹಣವನ್ನು ನೀವು ಹಂಚಿ ನಾವು ಕೊಟ್ಟಿದ್ದೇವೆ ಎಂದು ಏಕೆ ಹೇಳಬೇಕೆಂದು ಪ್ರಶ್ನೆ ಮಾಡಿದ್ದೇನೆ. ಅಧಿಕಾರಕ್ಕಾಗಿ ನಾನು ಕೊಟ್ಟಿದ್ದೇನೆ ಎಂದು ಹೇಳುವುದು ತಪ್ಪು. ಫಲಾನುಭವಿ ಎಂಬ ಸರ್ಕಾರಿ ಪದ ಬಳಸಬೇಡಿ. ಫಲಾನುಭವಿ ಎನ್ನುವ ಪದದ ಅರ್ಥ ಎಲ್ಲೆಲ್ಲೋ ಹೋಗುತ್ತದೆ ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ರಾಷ್ಟ್ರದ ಹಿರಿಯ ಸಂಶೋಧಕ ವಿಜ್ಞಾನಿ ಡಾ.ಹೆಚ್.ಸಿ.ಮೃತ್ಯುಂಜಯ (ಪತ್ನಿ ಸೀತಾ ಅವರೊಂದಿಗೆ ಪ್ರಶಸ್ತಿ ಪ್ರದಾನ) ಅವರಿಗೆ ಶ್ರೀ ಎಂ.ವೆಂಕಟಕೃಷ್ಣಯ್ಯ (ತಾತಯ್ಯ) ಪ್ರಶಸ್ತಿ ಹಾಗೂ ಮರಳು ಕಲೆ ಕಲಾವಿದರೂ ಆದ ಸಕಲ ಕಲಾಗಾರ ಮಾಲೀಕ ರಾಘವೇಂದ್ರ ಹೆಗ್ಡೆ ಅವರಿಗೆ 'ತಾತಯ್ಯಶ್ರೀ' ಫಲಾನುಭವಿ ಸಾಧಕ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಅಲ್ಲದೆ, 2023–24ನೇ ಸಾಲಿನಲ್ಲಿ 10ನೇ ತರಗತಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಎರಡನೇ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವ ಎಂ.ಡಿ.ಸುದೀಕ್ಷ (ಅನಾಥಾಲಯದ ಉಪಾಧ್ಯಕ್ಷ ಎನ್.ವಿ.ದಿನೇಶ್ ಅವರ ಪುತ್ರಿ) ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಇದೇ ವೇಳೆ ಡಾ.ಹೆಚ್.ಸಿ. ಮೃತ್ಯುಂಜಯ ಅವರ 'ಪರಿಸರ ಪ್ರಜ್ಞೆ' ಪುಸ್ತಕ ಬಿಡುಗಡೆ ಮಾಡಲಾಯಿತು. ಸಮಾರಂಭದ ಆರಂಭದಲ್ಲಿ ತಾತಯ್ಯನವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಗದಗದ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತಿ ದಿಕ್ಸೂಚಿ ಭಾಷಣ ಮಾಡಿದರು. ಅನಾಥಾಲಯದ ಅಧ್ಯಕ್ಷರೂ ಆದ ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅನಾಥಾಲಯದ ಉಪಾಧ್ಯಕ್ಷ ಎನ್.ವಿ.ದಿನೇಶ್, ಕಾರ್ಯದರ್ಶಿ ಅಶ್ವಥ್ ನಾರಾಯಣ ಮತ್ತಿತರರು ಹಾಜರಿದ್ದರು.



ಮೈಸೂರಿನ ತಾತಯ್ಯನವರ ಅನಾಥಾಲಯ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಎಂ.ವೆಂಕಟಕೃಷ್ಣಯ್ಯನವರ ಜಯಂತ್ಯುತ್ಸವದಲ್ಲಿ ವಿಜ್ಞಾನಿ ಡಾ.ಹೆಚ್.ಸಿ.ಮೃತ್ಯುಂಜಯ ಅವರಿಗೆ ಶ್ರೀ ಎಂ.ವೆಂಕಟಕೃಷ್ಣಯ್ಯ (ತಾತಯ್ಯ) ಪ್ರಶಸ್ತಿ ಮತ್ತು ಕಲಾವಿದ ರಾಘವೇಂದ್ರ ಹೆಗ್ಡೆ ಅವರಿಗೆ 'ತಾತಯ್ಯ ಶ್ರೀ' ಫಲಾನುಭವಿ ಸಾಧಕ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಜೊತೆಗೆ 10ನೇ ತರಗತಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದಿರುವ ಎಂ.ಡಿ.ಸುದೀಕ್ಷ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಒಳ್ಳೆಯ ಚಿಂತನೆ ಇಲ್ಲದ ಅನರ್ಹರಿಂದ ಭ್ರಷ್ಟಾಚಾರ ವ್ಯಾಪಕ

ಸ್ವಾಮಿ ನಿರ್ಭಯಾನಂದ ಸರಸ್ವತಿ ಬೇಸರ

ಮೈಸೂರು,ಸೆ.15(ಪಿಎಂ)–ಅನೇಕ ಅನರ್ಹರು ದೊಡ್ಡ ದೊಡ್ಡ ಜವಾಬ್ದಾರಿ ಸ್ಥಾನಗಳಲ್ಲಿ ಕುಳಿತು ಅವರಲ್ಲಿ ಒಳ್ಳೆಯ ಚಿಂತನೆಗಳು ಇಲ್ಲದೇ ಭ್ರಷ್ಟಾಚಾರ ಹೆಚ್ಚಾಗುತ್ತಿದೆ ಎಂದು ಗದಗದ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತಿ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ತಾತಯ್ಯನವರ ಅನಾಥಾಲಯ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಮೂರ್ಖರು ನಮ್ಮಲ್ಲಿ ಅಧಿಕಾರಿಗಳು ಆಗುತ್ತಿದ್ದಾರೆ ಒಳ್ಳೆಯ ಚಿಂತನೆಗಳು ಇಲ್ಲದೆ ಇಂತಹವರಿಂದ ವ್ಯವಸ್ಥೆ ಭ್ರಷ್ಟವಾಗುತ್ತಿದೆ. ದೊಡ್ಡ ದೊಡ್ಡ ಅನರ್ಹರು ದೊಡ್ಡ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿ ಕೂರುತ್ತಿದ್ದಾರೆ ಎಂದು ಹೇಳಿದರು.

ಸುಮಾರು 15 ವರ್ಷಗಳ ಹಿಂದೆ ರಾಯಚೂರಿನಲ್ಲಿ ನಮ್ಮ ಆಶ್ರಮಕ್ಕೆ ಭೂಮಿ ನೀಡುವ ಸಂದರ್ಭದಲ್ಲಿ ಒಬ್ಬರು ಡಿಸಿ ಅವರನ್ನು ಭೇಟಿ ಮಾಡಬೇಕಾಯಿತು. ನನ್ನ ಮತ್ತು ಅವರ ನಡುವಿನ ಸಂವಾದ ಕೇಳಿದರೆ ನಿಮಗೆ ಶಾಕ್ ಆಗುತ್ತದೆ. ಅವರು, ಸ್ವಾಮೀಜಿ ಇಷ್ಟು ದೊಡ್ಡ ಜಾಗ ತೆಗೆದುಕೊಂಡು ಏನು ಮಾಡುತ್ತೀರಿ ಎಂದರು. ಅದಕ್ಕೆ ನಾನು, ರಾಯಚೂರು ಬಹಳ ಹಿಂದುಳಿದ ಪ್ರದೇಶ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ಆಲೋಚನೆಗಳು ಇವೆ. ದೊಡ್ಡ ಶಾಲೆ ಇಲ್ಲಿ ಮಾಡಿ ಬೆಟ್ಟದ ಮೇಲೆ ದೊಡ್ಡ ವಿವೇಕಾನಂದರ ಮೂರ್ತಿ ಪ್ರತಿಷ್ಠಾಪಿಸುತ್ತೇವೆ ಎಂದೆ.

ಅದಕ್ಕವರು, ನೀವು ಇಷ್ಟೆಲ್ಲಾ ಮಾಡಿದರೆ ಪಕ್ಕದಲ್ಲಿ ಇರುವವರಿಗೆ ನಾವೇನು ಮಾಡುತ್ತಿಲ್ಲವೆಂದು ಬೇಜಾರು ಆಗಬಹುದು. ಅದನ್ನು ನೋಡಿಕೊಂಡು ಸ್ವಲ್ಪ ಸ್ವಲ್ಪ ಮಾಡಿ ಎಂದರು. ಡಿಸಿಯಿಂದ ಯಾರಾದರೂ ಈ ಮಾತು ನಿರೀಕ್ಷೆ ಮಾಡಲು ಸಾಧ್ಯವೇ? ಒಬ್ಬ ಐಎಎಸ್ ಅಧಿಕಾರಿ ಬಾಯಿಯಲ್ಲ ಬರುವ ಮಾತೇ ಇದು ಎಂದು ಅಸಮಾಧಾನ ವ್ಯಕ್ತಪಡಿಸಿದರು. ರಾಮಕೃಷ್ಣ ಪರಮಹಂಸರು, ವಿವೇಕಾನಂದರು ಆದರ್ಶದ ದಾರಿಯಲ್ಲಿ ನಡೆದರು. ಅವರ ಮಾರ್ಗದಲ್ಲಿ ನಾವೂ ಸಾಗಬೇಕು. ಸ್ವಾಸ್ಥ್ಯ ಸಮಾಜ ನಿರ್ಮಿಸಲು ಶ್ರಮಿಸಬೇಕು. ಶಿಕ್ಷಣ ಎಲ್ಲರಿಗೂ ಸಿಗಬೇಕು ಎಂದು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಮಿಕ್ಸಿ ಕೊಳ್ಳಲೆಂದು ಗಂಡ–ಹೆಂಡತಿ ಅಂಗಡಿಗೆ ಹೋಗಿದ್ದರು.
ಬಹಳ ಸಮಯದಿಂದ ಗಂಡ ಸೇಲ್ಸ್ ಗರ್ಲ್‌ನ್ನೇ ನೋಡುತ್ತಿದ್ದ.
ಹೆಂಡತಿ: (ಗಂಡನ ಭುಜ ತಟ್ಟಿ)
ರೀ 'ಎಕ್ಸ್‌ಚೇಂಜ್ ಆಫರ್ ಇರುವುದು ಮಿಕ್ಸಿ ಮೇಲೆ ಮಾತ್ರ'!

ಮೈಸೂರು ಮಿತ್ರ

ಸೋಮವಾರ, 16 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

'ಬದುಕಲ್ಲಿ ಕಷ್ಟಗಳು ಎದುರಾದಾಗಲೇ
ನಮಗೆ ತಿಳಿಯುವುದು ಯಾರು ನಮ್ಮವರೆಂದು'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಸಾವಿರ ಕುದುರೆ ಸರದಾರ
ಮನೆ ಹೆಂಡ್ತಿಗೆ ಪಿಂಜಾರ'

ನಿಮ್ಮ ಪತ್ರಗಳು

ಒಬ್ಬರಿಗೆ ಎಷ್ಟು ನಿವೇಶನಗಳನ್ನಾದರೂ ಮಂಜೂರು ಮಾಡಬಹುದೇ?

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಕೋರಿದ್ದು 13 ನಿವೇಶನಗಳಾದರೆ ಮುಡಾದವರಿಗೆ ಈ ಕುಟುಂಬದ ಬಗ್ಗೆ ಏನೋ ಕಕ್ಕುಲಾತಿ ಹಾಗೂ ಧಾರಾಳತನ ತೋರಿ ಇನ್ನೂ ಒಂದು ನಿವೇಶನ ಹೆಚ್ಚಿಗೆ ಮಂಜೂರು ಮಾಡಿದ್ದಾರೆ. ಮನೆ ಕಟ್ಟಿಕೊಳ್ಳಲು (ಬಂಗ್ಲೆ) 100x1100 ಅಡಿಗಳ ನಿವೇಶನ ಬೇಕಾಗಬಹುದು ಎಂದಿಟ್ಟುಕೊಳ್ಳೋಣ. ಹಾಗಾಗಿ ಈ ದಂಪತಿಗಳಿಗೆ ಒಂದು ನಿವೇಶನ ಸಾಕು. ಮಹಡಿಯ ಮೇಲೆ ಮಹಡಿ ಬೇಕಾದರೆ ಕಟ್ಟಡವನ್ನು ಕಟ್ಟಿಕೊಳ್ಳಬಹುದು ಅಲ್ಲವೇ? ಇಲ್ಲಿ ಒಂದು ಸಾಮಾನ್ಯ ಪ್ರಶ್ನೆ ಏಳುತ್ತದೆ. ಅದೇನೆಂದರೆ ಬೇರೆ ಯಾರಾದರೂ (ಶ್ರೀಸಾಮಾನ್ಯನೊಬ್ಬ) ಒಂದಕ್ಕಿಂತ ಹೆಚ್ಚು ನಿವೇಶನಕ್ಕಾಗಿ ಅರ್ಜಿ ಹಾಕಿದ್ದರೆ ಮಂಜೂರು ಮಾಡುವರೇ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು? ಈ ಎಲ್ಲಾ ಪ್ರಶ್ನೆಗಳಿಗೂ ಖಂಡಿತಾ ಯಾರೂ ಉತ್ತರಗಳನ್ನು ನೀಡುವುದಿಲ್ಲ. ಇಲ್ಲಿ ಎಷ್ಟು ಹಣದ ಕೈ ಬದಲಾವಣೆ ಆಗಿರಬಹುದು?

ಕೃಷಿ ಭೂಮಿಯನ್ನು ಅದರ ಮಾಲೀಕರಿಂದ ನೇರವಾಗಿ ಹಸ್ತಾಂತರಿಸಿ ಕೊಳ್ಳಬಾರದು ಎಂಬ ಕಾನೂನು ಇದೆಯೆಂದು ಅವರಿಗೆ ಗೊತ್ತಿಲ್ಲವೇ? ಈ ನಿವೇಶನಗಳನ್ನು ಒಬ್ಬರೇ ಮುಡಾದಿಂದ ಖರೀದಿಸಿದ್ದು ಕಾನೂನುಬಾಹಿರವಲ್ಲವೇ? ಜನರಿಗೆ ನೀತಿ ಹೇಳುವ ಇವರು ಈಗ ಜನರಿಂದಲೇ ನೀತಿ ಪಾಠವನ್ನು ಕಲಿಯುವಂತಾದ್ದುದು ನಗೆಪಾಟಲಿಗೀಡಾಗಿದೆ. ಹೇಳುವುದು ನೀತಿ, ತಿನ್ನುವುದು ಬದನೆಕಾಯಿ ಎಂಬ ಗಾದೆಯಂತೆ ಈ ಕೃತ್ಯವಿದೆಯಲ್ಲವೇ?

ಇದೂ ಅಲ್ಲದೆ ಈ ಪ್ರಕರಣದಲ್ಲಿ ಮುಡಾ ಸಿಬ್ಬಂದಿಗಳೂ, ಅಧಿಕಾರಿಗಳೂ ಭಾಗಿಯಾಗಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಮುಖ್ಯಮಂತ್ರಿಗಳ ಆಪ್ತ ಸಹಾಯಕನ ಅರ್ಜಿ ಆಧರಿಸಿ ಒಂದೇ ದಿನದಲ್ಲಿ ಕಂದಾಯ ಪತ್ರವನ್ನು ರೆಡಿ ಮಾಡಲಾಗಿದೆಯಂತೆ! ಅದೂ ಸಹಿತ ಅರ್ಜಿಗಳಿಗೆ ಸಿದ್ದರಾಮಯ್ಯನವರಾಗಲೀ ಅವರ ಶ್ರೀಮತಿಯವರಾಗಲೀ ಸಹಿ ಮಾಡದೆ, ಮುಖ್ಯಮಂತ್ರಿ ಅವರ ಆಪ್ತ ಸಹಾಯಯಕರೇ ಅರ್ಜಿಗೆ ರುಜು ಮಾಡಿದ್ದಾರಂತೆ. ಭೇಷ್! ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳಲು ಬಹಳ ಒಳ್ಳೆಯ ಉಪಾಯ. ಏನಾದರೂ ಕಾನೂನು ಕ್ರಮಗಳು ಬಿಗಿಯಾದರೆ ಆಗ ಸಿಕ್ಕಿ ಬೀಳುವುದು ಆ ಆಪ್ತ ಸಹಾಯಕ ತಾನೇ? ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ ಎಂಬ ಈ ಗಾದೆ ಸರಿಯಾಗಿ ಈ ಪ್ರಕರಣಕ್ಕೆ ಅನ್ವಯ ಆಗುತ್ತದೆ ಅಲ್ಲವೇ? ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸ್ವಲ್ಪವಾದರೂ ಧರ್ಮ, ನೀತಿಗಳು ಇದ್ದರೆ ತಕ್ಷಣ ಈ ನಿವೇಶನಗಳನ್ನು ಮುಡಾಕ್ಕೆ ಹಿಂತಿರುಗಿಸಲಿ.

–ಬೇಲೂರು ದ.ಶಂ, ಪ್ರಕಾಶ್, ಮೈಸೂರು.

ಧಾರ್ಮಿಕ ಸಂಘರ್ಷವನ್ನುಂಟು ಮಾಡುವ ದುರುಳರನ್ನು ಮಟ್ಟ ಹಾಕಬೇಕಿದೆ!

ಮಾನ್ಯರೆ,

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಸರ್ಜನೆಯ ವೇಳೆ ನಡೆದಿರುವ ಕಲ್ಲು ತೂರಾಟವು ಸಮಾಜದ ಶಾಂತಿ, ನೆಮ್ಮದಿಗೆ ಧಕ್ಕೆ ತರುವ ಕಿಡಿಗೇಡಿಗಳ ದುಷ್ಕೃತ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಕೋಮು ಸೌಹಾರ್ದಕ್ಕೆ ಹೆಸರಾಗಿದ್ದ ಮಂಡ್ಯ ಜಿಲ್ಲೆಯಲ್ಲಿ ಇಂತಹ ಘಟನೆಗಳು ಆಗಿಂದಾಗ್ಗೆ ನಡೆಯುತ್ತಿರುವುದು ದುರದೃಷ್ಟಕರ. ಗಣೇಶ ವಿಸರ್ಜನೆ ಸಮಯದಲ್ಲಿ ನಡೆದ ಈ ರೀತಿಯ ಗಲಭೆಯು ಖಂಡನೀಯವಾಗಿದೆ. ಈ ರೀತಿಯ ಧರ್ಮ ಸಂಘರ್ಷದ ಪ್ರಕರಣಗಳು ಮತ್ತೊಮ್ಮೆ ಮರುಕಳಿಸದಂತೆ ಸರ್ಕಾರ ಎಚ್ಚರವಹಿಸಿ ಕಡಿವಾಣ ಹಾಕಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕಿದೆ. ಅಲ್ಲದೇ ಇದನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಬೇಕಿದೆ. ಧಾರ್ಮಿಕ ಹೆಸರಿನಲ್ಲಿ ಸಮಾಜವನ್ನು ವಿಭಜಿಸಲು ಯತ್ನಿಸುವ ಧರ್ಮಾಂಧರು ಯಾವುದೇ ಜಾತಿ, ಧರ್ಮದವರಾಗಿರಲಿ ಅಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದು ಅಗತ್ಯ. ಇದರ ಜೊತೆಗೆ ಅಲ್ಲಿಯ ಸ್ಥಳೀಯ ಜನತೆ ಸಹ ದುರುಳರ ಪ್ರಚೋದನೆಗಳಿಗೆ ಒಳಗಾಗದೆ ಶಾಂತಿ, ಸಂಯಮ ಕಾಪಾಡಿಕೊಳ್ಳುವುದು ಕೂಡ ಅವಶ್ಯಕವಾಗಿದೆ.

ಪ್ರತಿಯೊಂದು ಧರ್ಮವೂ ಮನುಷ್ಯನ ಉದ್ಧಾರಕ್ಕಾಗಿಯೇ ಹುಟ್ಟಿಕೊಂಡಿದೆ. ಹೀಗಿರುವಾಗ ಮನುಷ್ಯ ಮನುಷ್ಯರ ನಡುವೆ ಸಂಘರ್ಷ ಸೃಷ್ಟಿಸುವ ಧರ್ಮವು ಧರ್ಮವೇ ಅಲ್ಲ ಅನಿಸುತ್ತದೆ. ಶಾಂತಿ, ಅಹಿಂಸೆಯು ಎಲ್ಲಾ ಧರ್ಮಗಳ ಮೂಲ ಮಂತ್ರ. ಆದರೆ ಇದನ್ನು ಆಯಾ ಧರ್ಮದ ಕೆಲ ಅನುಯಾಯಿಗಳು ತಪ್ಪಾಗಿ ಅರ್ಥೈಸಿಕೊಳ್ಳುತ್ತಿರುವುದರಿಂದ ಗೊಂದಲ, ಗಲಭೆ ಹಾಗೂ ಈ ರೀತಿಯ ಧರ್ಮ ಸಂಘರ್ಷಗಳು ಅಲ್ಲಲ್ಲಿ ಸೃಷ್ಟಿಯಾಗುತ್ತಿದೆ. ಇದು ತಪ್ಪಬೇಕು. ಏಕೆಂದರೆ ಮನುಷ್ಯ ಮನುಷ್ಯರ ನಡುವಿನ ಸಂಬಂಧ ಹದಗೆಡುತ್ತಿರುವ ಈ ಹೊತ್ತಿನಲ್ಲಿ ಯಾವುದೇ ಧರ್ಮಗಳು ಮಾನವೀಯತೆ ಬೆಳೆಸಬೇಕು. ಸಮಾಜದಲ್ಲಿ ಶಾಂತಿ ನೆಮ್ಮದಿಗೆ ಆದ್ಯತೆ ನೀಡಬೇಕೇ ವಿನಃ ಈ ರೀತಿಯ ಧರ್ಮ ದಳ್ಳುರಿಗೆ ಅವಕಾಶ ನೀಡಬಾರದು. ಇದರಿಂದ ಸಾರ್ವಜನಿಕ ಆಸ್ತಿಪಾಸ್ತಿಗೂ ಧಕ್ಕೆ ಹಾಗೂ ಜನರ ಪ್ರಾಣಹಾನಿಗೂ ಕುತ್ತು ಎಂಬುದನ್ನು ಎಲ್ಲರೂ ಅರಿಯಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಇಂತಹ ಸೂಕ್ಷ್ಮ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳು ತುಪ್ಪ ಸುರಿಯುವಂತೆ ಪರಸ್ಪರ ದೋಷಾರೋಪ ಮಾಡಿಕೊಂಡು ಹೊತ್ತಿ ಉರಿಯುತ್ತಿರುವ ಮನೆಯಲ್ಲಿ ಚಳಿ ಕಾಯಿಸಿಕೊಳ್ಳುವ ಪ್ರವೃತ್ತಿಯನ್ನು ಮೊದಲು ಬಿಡಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಗ್ರಾಹಕರಿಗೆ ಪಂಗನಾಮ ಹಾಕೋದು ಎಷ್ಟು ಸರಿ?

ಮಾನ್ಯರೆ,

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಗಣನೀಯವಾಗಿ ಇಳಿಮುಖ ಕಂಡರೂ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಮಾತ್ರ ಇಳಿಕೆಯಾಗದಿರುವುದು ದುರದೃಷ್ಟಕರ. ಇತ್ತೀಚಿನ ವರ್ಷಗಳಲ್ಲೇ ಅತ್ಯಂತ ಕನಿಷ್ಠ ಪ್ರಮಾಣದಲ್ಲಿ ಕಚ್ಚಾ ತೈಲದ ಬೆಲೆ (ಬ್ಯಾರಲ್‌ಗೆ 70 ಡಾಲರ್) ಇಳಿಕೆಯಾಗಿದ್ದರೂ ಗ್ರಾಹಕರಿಗೆ ಮಾತ್ರ ಯಾವುದೇ ಪ್ರಯೋಜನವಾಗಿಲ್ಲ. ಕೇವಲ ತೈಲ ಕಂಪನಿಗಳು ಲಾಭ ಮಾಡಿಕೊಳ್ಳುವ ಮೂಲಕ ಗ್ರಾಹಕರಿಗೆ ಪಂಗನಾಮ ಹಾಕುತ್ತಿವೆ. ಮಾರುಕಟ್ಟೆಯಲ್ಲಿ ಪೆಟ್ರೋಲ್ ಉತ್ಪನ್ನಗಳ ಬೆಲೆ ಏರಿಕೆ ಸಂದರ್ಭದಲ್ಲಿ ಯಾವುದೇ ಮುನ್ಸೂಚನೆ ನೀಡದೆ ರಾತ್ರೋರಾತ್ರಿ ದರ ಹೆಚ್ಚಳ ಮಾಡುವ ಸರ್ಕಾರ ಇಳಿಕೆ ಸಂದರ್ಭದಲ್ಲಿ ಮಾತ್ರ ಇಂತಹ ಬದ್ಧತೆಯನ್ನು ಪ್ರದರ್ಶಿಸದಿರುವುದು ಖಂಡನೀಯ. ಈಗಾಗಲೇ ರಾಜ್ಯ ಸರ್ಕಾರ ಪೆಟ್ರೋಲ್ ಮೇಲಿನ ತೆರಿಗೆಯನ್ನು ಏಕಾಏಕಿ ಹೆಚ್ಚಿಸಿ ಗಾಯದ ಮೇಲೆ ಬರೆ ಎಳೆದಿದೆ. ಪ್ರಸ್ತುತ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ತೀವ್ರ ಇಳಿಮುಖ ಕಂಡಿದ್ದರೂ ಬಳಕೆದಾರರಿಗೆ ಕಿಂಚಿತ್ತೂ ಪ್ರಯೋಜನವಾಗಿಲ್ಲ. ಒಂದೊಮ್ಮೆ ಈಗ ದರ ಇಳಿಕೆಯಾದರೂ ಕೇವಲ ಒಂದೆರಡು ರೂಪಾಯಿಗಷ್ಟೇ ಸೀಮಿತವಾಗಲಿದ್ದು ಇದು ಗ್ರಾಹಕರ ಮೂಗಿಗೆ ತುಪ್ಪ ಸವರುವ ಯತ್ನವೆಂದೇ ಹೇಳಬಹುದು.

–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು,

ಮೈಸೂರು ಮೈನವಿರೇರಿಸುವ ಸುಂದರ ತಾಣ



> "ಮೈಸೂರೆಂದರೆ ಮೈಯೆಲ್ಲಾ ಝುಮ್ ಝುಮ್, ಮೈಸೂರೆಂದರೆ ಮನಸ್ಸೆಲ್ಲ ಹಗುರ, ಮೈಸೂರೆಂದರೆ ಮನಸೂರೆಗೊಳ್ಳುವ ಅರಮನೆಗಳು ಮತ್ತು ಪಾರಂಪರಿಕ ಕಟ್ಟಡಗಳು. ಬಣ್ಣಿಸುತ್ತಾ ಹೋದರೆ ಇದು ಮಹಾಕವಿ ಬನವಾಸಿಯನ್ನು ಬಣ್ಣಿಸಿದ್ದಕ್ಕಿಂತಲೂ ಹೆಚ್ಚು ಬಣ್ಣಿಸಲು ಸಾಧ್ಯವಿರುವ ಎಲ್ಲಾ ಲಕ್ಷಣಗಳನ್ನು ಹೊಂದಿರುವ ನಗರ. ಆದ್ದರಿಂದ ಅವನಂತೆ ನಮಗೂ ಮತ್ತೆ ಮತ್ತೆ ಇಲ್ಲೇ ಹುಟ್ಟಬೇಕೆನಿಸುವುದು.



ಮಿರ್ಲೆ ಚಂದ್ರಶೇಖರ
ಮೊ: 9916129654

ನಾನು ತಿಂಗಳಲ್ಲಿ ಒಮ್ಮೆಯಾದರೂ ಕಾರ್ಯನಿಮಿತ್ತ ನಮ್ಮ ರಾಜ್ಯದ ರಾಜಧಾನಿ ಬೆಂಗಳೂರಿಗೆ ಹೋಗುವುದುಂಟು. ನನ್ನಂತೆ ಮೈಸೂರಿಗರು ಆಗಾಗ್ಗೆ ಹೋಗಿ ಬರುತ್ತಾರೆ, ಹೋಗುವಾಗ ಇರುವ ಹುಮ್ಮಸ್ಸು ವಾಪಸ್ಸು ಬರುವಾಗ ಗಾಳಿ ಹೋದ ಟ್ಯೂಬ್‌ನಂತೆ ಠುಸ್ಸಾಗಿರುತ್ತದೆ. ಆ ಬೆಂದಕಾಳೂರಿಗೆ ಹೋಗಿ ಬರುವಷ್ಟರಲ್ಲಿ ನನ್ನ ದೇಹ ದಣಿದಿರುತ್ತದೆ ಮನಸ್ಸು ಬೆಂದುಹೋಗಿರುತ್ತದೆ. ಕೇವಲ ಒಂದು ದಿನ ಹೋಗಿ ಬಂದವರಿಗೆ ಮಾತ್ರವೇ ಹೀಗೆ ಆಗುತ್ತದೋ ಅಥವಾ ಅಲ್ಲೇ ನೆಲೆಸಿರುವ ನಾಗರಿಕರಿಗೂ ಬೆಂಗಳೂರೆಂದರೆ ಹೀಗೆ ಆಗುವುದೋ ತಿಳಿಯದು. ಹರಿಬಿರಿಯಲ್ಲಿರುವ ಜನಜಂಗುಳಿ, ರಸ್ತೆ ತುಂಬ ಹೊಗೆ ಉಗುಳುವ ವಾಹನಗಳು ಸಾಲದ್ದಕ್ಕೆ ಐದಾರು ನಿಮಿಷಕ್ಕೊಮ್ಮೆ ಓಡುತ್ತಿರುವ ಮೆಟ್ರೋ ರೈಲುಗಳು. ಬಗೆಬಗೆಯ ಉಡುಗೆ–ತೊಡುಗೆಗಳನ್ನು ತೊಟ್ಟಿರುವ ಜನಗಳು, ಎದುರಿಗೆ ಸಿಕ್ಕವರು ಒಮ್ಮೆಯೂ ನೋಡಿರದ ಮುಖಗಳು. ವಾಸವಿರುವ ಅಷ್ಟೂ ಜನರು ಜೀವನೋಪಾಯಕ್ಕಾಗಿ ಪರ ಊರಿನಿಂದ ವಲಸೆ ಬಂದು ದುಡಿಮೆಗೆ ವಿವಿಧ ವೃತ್ತಿ ಕಂಡುಕೊಂಡವರೇ.

ಬೆಂಗಳೂರಿನಲ್ಲಿ ನೆಲೆಸಿರುವ ಜನಸಂಖ್ಯೆಯಲ್ಲಿ ಕೆಟ್ಟು ಪಟ್ಟಣ ಸೇರಿದವರೆ ಹೆಚ್ಚು, ಆ ಊರು ಬಂದವರಿಗೆಲ್ಲ ಬದುಕು ಕಟ್ಟಿಕೊಳ್ಳಲು ಆಸರೆ ಆಗುವುದು. ನಮ್ಮ ಮೈಸೂರಿನ ಆಜುಬಾಜಿನಲ್ಲಿರುವ ಕಬಿನಿ, ಕಾವೇರಿ ನದಿಗಳ ನೀರು ಪೂರ್ಣವಾಗಿ ಬೆಂಗಳೂರಿಗೇ ಹರಿದರೂ ಸಾಕಾಗದಷ್ಟು ಮಟ್ಟಕ್ಕೆ ಏರುತ್ತಿರುವ ಜನಸಂಖ್ಯೆ ಅಬ್ಬಾ.. ಮಾಲಿನ್ಯಗೊಂಡಿರುವ ಗಾಳಿಯನ್ನು ಕುಡಿದುಕೊಂಡು ಹೇಗೆ ಬದುಕಿದ್ದಾರೋ ಆ ದೇವರೇ ಬಲ್ಲ.

ನಮ್ಮ ಮೈಸೂರು ಹಾಗಲ್ಲ, ಬೆಂಗಳೂರಿನಿಂದ ವಾಪಸ್ಸು ಬಂದು ಮಣಿಪಾಲ್ ಆಸ್ಪತ್ರೆಯ ಸರ್ಕಲನ್ನು ಬಸ್ಸಿನ ಕಿಟಕಿಯಲ್ಲಿ ನೋಡುತ್ತಿದ್ದರೆ ಆಗುವ ಖುಷಿ ಅಷ್ಟಿಷ್ಟಲ್ಲ. ಶ್ರೀರಂಗಪಟ್ಟಣದ ಕಾವೇರಿ ನದಿಯನ್ನು ದಾಟುವಾಗಲೇ ಮನ ಪುಳಕಿತಗೊಳ್ಳುವುದು. ಇತ್ತೀಚೆಗೆ ಇದರ ಬೆಳವಣಿಗೆಯನ್ನು ನೋಡಿದರೆ ಇದೂ ಕೂಡ ಬೆಂಗಳೂರಂತೆ ಕಾಂಕ್ರೀಟ್ ಕಾಡಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗಾಗದಿರಲಿ ಎಂಬುದು ನನ್ನ ಬಯಕೆ, ಆಗದೆ ಇರುವುದಿಲ್ಲ ಎಂಬುದು ಸಹ ನನಗೆ ಗೊತ್ತಿದೆ.

ಮೈಸೂರನ್ನು ದ್ವೇಷಿಸಲು ಯಾವುದೇ ಒಂದು ಕಾರಣ ಯಾರೂ ಹೇಳಲಾಗುವುದಿಲ್ಲ, ಪ್ರೀತಿಸುವುದಕ್ಕೆ ಇರುವ ಕಾರಣಗಳಿಗೆ ಲೆಕ್ಕವಿಲ್ಲ. ಅರಮನೆಯ ನಗರ ನಮ್ಮೂರು, ಪಾರಂಪರಿಕ ಕಟ್ಟಡಗಳ ಬೀಡು ಈ ಮೈ'ಸೂರು', ಸಾವಿರ ವರ್ಷಗಳ ಇತಿಹಾಸ ಇರುವ ನಗರ. ಹೆಸರಾಂತ ಕವಿಗಳು, ಬುದ್ಧಿಜೀವಿಗಳು, ರಾಜಕೀಯ ಧುರೀಣರು ಹುಟ್ಟಿದ ಸ್ಥಳ. ಸಂಸ್ಕೃತಿ ಆವರಿಸಿಕೊಂಡಿರುವ ಮೈಸೂರಿನಲ್ಲಿ ಕಲೆ ಸಾಹಿತ್ಯಕ್ಕಾಗಿ ನಿರಂತರವಾಗಿ ಸೇವೆ ನೀಡುತ್ತಿರುವ ಕವಿಗಳು ಕುವೆಂಪುವಿನಿಂದ ಈಗಿನ ಸಿಪಿಕೆ, ದೇಜಗೌ, ನಾಗಣ್ಣ, ಮಳಲಿ, ಡಾ. ಲತಾ ರಾಜಶೇಖರ್.... ಮತ್ತು ಬೆಳೆಯುತ್ತಿರುವ ನೂರಾರು ಯುವ ಕವಿಗಳು. ಇವರಿಂದ ನಿತ್ಯವೂ ಒಂದಿಲ್ಲೊಂದು ಸಾಹಿತ್ಯ ಕಾರ್ಯಕ್ರಮಗಳು, ಕಾವ್ಯಾಸಕ್ತರಿಗೆ ಸಾಹಿತ್ಯದ ರಸದೂಟ.

ಮೈಸೂರಿನಲ್ಲಿ ನೀನು ನೆಲೆಸಲು ಇಷ್ಟಪಡುವುದು ಏಕೆಂದು?, ಯಾರನ್ನೇ ಕೇಳಿದರೂ ಕೆಳಗಿನ ಎಲ್ಲಾ ಕಾರಣಗಳನ್ನು ಇಲ್ಲವೆ ಕೆಲವನ್ನಾದರೂ ಹೇಳೇ ಹೇಳುತ್ತಾರೆ. ಹೊರಗಿನಿಂದ ನೌಕರಿಗಾಗಿ ಅಥವಾ ಇನ್ಯಾವುದೇ ಕಾರಣದಿಂದ ಬಂದವರಂತೂ ಮೈಸೂರನ್ನು ಬಿಟ್ಟು ಹೋಗಲು ಇಷ್ಟಪಡುವುದಿಲ್ಲ. ಇಲ್ಲಿನ ಗಾಳಿ, ನೀರು, ನೆಲದ ಗುಣವೇ ಅಂತಹದ್ದು.

ಉಸಿರಾಡಲು ಚಾಮುಂಡಿಬೆಟ್ಟವನ್ನು ಸವರಿಕೊಂಡು ಬರುವ ಶುದ್ಧಗಾಳಿ, ಕುಡಿಯಲು ಕಾವೇರಿ, ಕಪಿಲೆಯರ ಜಲಾಮೃತ, ರಾಜ ಮಹಾರಾಜರು ನಡೆದಾಡಿದ ಪುಣ್ಯಭೂಮಿ. ಕಣ್ಮನ ಸೆಳೆಯುವ ಪರಿಸರ: ಶ್ರೀರಂಗಪಟ್ಟಣ, ಕರಿಘಟ್ಟ, ಕನ್ನಂಬಾಡಿ, ಬಲಮುರಿ, ಚುಂಚನಕಟ್ಟೆ, ಎಡತೊರೆ, ಕಪ್ಪಡಿ, ಡೋರ್ನಹಳ್ಳಿ, ಗೊಮ್ಮಟಗಿರಿ, ನಂಜನಗೂಡು, ತಿರುಮಕೂಡ್ಲು, ಶಿಂಷಾ, ಸೋಮನಾಥಪುರ, ಚಾಮುಂಡಿಬೆಟ್ಟ.... ಇತ್ಯಾದಿ ಸ್ಥಳಗಳಿಗೆ ರಜಾ ದಿನಗಳಂದು ಹಾಗೂ ವಾರಾಂತ್ಯಗಳಲ್ಲಿ ಭೇಟಿ ನೀಡುವುದೇ ಪ್ರಯಾಣಿಕರಿಗೆ ಆನಂದ.

ರಜಾ ದಿನಗಳು ಮತ್ತು ವಾರಾಂತ್ಯದ ಮಜಾಕ್ಕಾಗಿ ಮೈಸೂರು ಪ್ರವಾಸಿಗರನ್ನು ಸೆಳೆಯುವುದು, ನಗರದ ಬೀದಿಗಳು ಡಾಂಬರಿಗೆ ಬದಲಾಗಿ ಕಾಂಕ್ರೀಟ್ ರಸ್ತೆಗಳಾಗಿ ರಾಜಬೀದಿಗಳಾಗಿವೆ, ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆ ಇದೆಯಾದರೂ ನಗರ ಒಂದು ಹಂತಕ್ಕೆ ಅಭಿವೃದ್ಧಿಯನ್ನು ಕಾಣುತ್ತಿದೆ.

ಮೈಸೂರಿನ ಬಡಾವಣೆಗಳಲ್ಲಿ ಇರುವ ಕುಟುಂಬಗಳಲ್ಲಿ ಹೆಚ್ಚಿನವರು ನಿವೃತ್ತಿಯಾಗಿರುವ ನಾಗರಿಕರು, ಅಜ್ಜ–ಅಜ್ಜಿಯರು ಇದ್ದಾರೆ, ಅವರು ಮಕ್ಕಳು ಮೊಮ್ಮಕ್ಕಳೊಂದಿಗೆ ಸುಖೀ ಜೀವನ ನಡೆಸುತ್ತಿದ್ದಾರೆ. ನಿವೃತ್ತರ ಸ್ವರ್ಗ ಮೈಸೂರು. ಬಡಾವಣೆಗಳಿಗೆ ಒಂದರಂತೆ ಸುಸಜ್ಜಿತವಾದ ಪಾರ್ಕ್‌ಗಳು, ಮುಂಜಾನೆ ಮತ್ತು ಸಾಯಂಕಾಲ ವಾಯುವಿಹಾರಕ್ಕಾಗಿ ಬರುವ ಗೌರವಯುತ ಜನತೆ, ವಾಯುವಿಹಾರಕ್ಕಾಗಿ ಪಾರ್ಕ್‌ಗಳಿಗೆ ಬರುವ ಜನರಿಗೆ ಬೆಂಗಳೂರಿನ ಪಾರ್ಕ್‌ಗಳಲ್ಲಿರುವಂತೆ ಜನಜಂಗುಳಿಯ ಕಾಟವಿಲ್ಲ. ಲಲಿತ ಮಹಲ್ ಗ್ರೌಂಡ್, ಚಾಮುಂಡಿಬೆಟ್ಟ, ಲಿಂಗಾಂಬುದಿಕೆರೆ, ಕುಕ್ಕರಹಳ್ಳಿಕೆರೆ ಮತ್ತು ಕಾರಂಜಿಕೆರೆಗಳು ವಾಯುವಿಹಾರಿಗಳನ್ನು ಕೈಬೀಸಿ ಕರೆಯುತ್ತವೆ. ಬೆಳಿಗ್ಗೆದ್ದು ಈ ಸ್ಥಳಗಳಿಗೆ ವಾಕ್ ಹೋಗುವುದೇ ಒಂದು ಆನಂದ. ಇಂಥ ಆನಂದವನ್ನು ಅನುಭವಿಸುತ್ತಿರುವ ನಾವುಗಳೇ ಧನ್ಯರು.

ಚಾಮುಂಡಿಬೆಟ್ಟದ ಮೇಲಿನ ಚಾಮುಂಡೇಶ್ವರಿ ದೇವಸ್ಥಾನ, ಒಂಟಿಕೊಪ್ಪಲಿನ ವೆಂಕಟರಮಣಸ್ವಾಮಿ ದೇವಸ್ಥಾನ, ಆರಮನೆ ಅಂಗಳದಲ್ಲಿರುವ ಹತ್ತಾರು ದೇವಸ್ಥಾನಗಳು, ಕೋಟೆ ಆಂಜನೇಯ ದೇವಸ್ಥಾನ, ನಂಜನಗೂಡು ರಸ್ತೆಯಲ್ಲಿರುವ ದತ್ತಪೀಠ, ರಾಜ್‌ಕುಮಾರ್ ರಸ್ತೆಯಲ್ಲಿರುವ ಕಲ್ಯಾಣವೆಂಕಟೇಶ್ವರ ದೇವಸ್ಥಾನ, ಬನ್ನೂರು ರಸ್ತೆಯಲ್ಲಿರುವ ಮಲೆಮಹದೇಶ್ವರ ದೇವಸ್ಥಾನ.... ಪಟ್ಟಿ ಮಾಡುತ್ತಾ ಹೋದರೆ ಇಲ್ಲಿ ದಾಖಲಿಸಲು ಸ್ಥಳಾವಕಾಶ ಸಾಲದಷ್ಟು ಸಂಖ್ಯೆಯಲ್ಲಿ ದೇವಸ್ಥಾನಗಳು ನಮ್ಮೂರಲ್ಲಿವೆ. ದೇವರ ಪೂಜೆಗಾಗಿ ನಮ್ಮ ಜನರು ಎಲ್ಲಾ ದೇವಸ್ಥಾನಗಳಲ್ಲೂ ತುಂಬಿರುತ್ತಾರೆ ವಿಶೇಷ ದಿನಗಳಂದು ಜನಜಾತ್ರೆ. ಇದಕ್ಕಿಂತ ದೊಡ್ಡಜಾತ್ರೆ ವರ್ಷಕ್ಕೊಮ್ಮೆ ತಪ್ಪದೆ ನಡೆಯುವ ದಸರಾ ಹಬ್ಬ, ನವರಾತ್ರಿಯ ದಿನಗಳಂದು ಬೆಳಗುವ ದೀಪಾಲಂಕಾರ ಕಣ್ಮನ ಸೆಳೆಯುವುದು.

ನಗರದೊಳಗೆ ಇಷ್ಟೊಂದು ದೇವಸ್ಥಾನಗಳು ಇದ್ದರೂ ಸಮೀಪದ ನಂಜನಗೂಡಿನ ನಂಜುಡೇಶ್ವರ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ, ಚುಂಚನಕಟ್ಟೆಯ ಶ್ರೀ ಕೋದಂಡರಾಮ, ತೀ.ನರಸೀಪುರದ ಅಗಸ್ತ್ಯೇಶ್ವರ ಗುಂಜಾ ನರಸಿಂಹಸ್ವಾಮಿ, ಗೊಮಟಗಿರಿಯ ಗೊಮಟೇಶ್ವರ, ಕನ್ನಂಬಾಡಿಯ ವೇಣುಗೋಪಾಲ, ಎಡತೊರೆಯ ಅರ್ಕೇಶ್ವರ ಇತ್ಯಾದಿ ದೇವಸ್ಥಾನಗಳು ಮೈಸೂರಿನ ಜನತೆ ದೇವರನ್ನು ಪೂಜಿಸಲು ಇವೆ.

ವಾಯುವಿಹಾರದ ನಂತರ ಸ್ನಾನ ಪೂಜೆ ಮಾಡಿಕೊಂಡು ಸಿಟಿಗೆ ಕಾಲಿಟ್ಟರೆ ನಾಲಿಗೆಗೆ ರುಚಿ ಮತ್ತು ಹಸಿದ ಹೊಟ್ಟೆ ತುಂಬಿಸುವುದಕ್ಕಾಗಿ ನಜರ್‌ಬಾದ್‌ನಲ್ಲಿ ಇರುವ ಮೈಲಾರಿ ಹೋಟೇಲ್‌ನ ದೋಸೆ, ಮೃಗಾಲಯದ ಬಳಿ ಇರುವ ಮೈಸೂರು ರಿಫ್ರೆಷ್‌ಮೆಂಟ್, ಜಿಟಿಆರ್, ಸಂತೋಷ್ ಹೋಟೆಲ್, ಅರಮನೆ ಕೆಫೆ, ಶೃಂಗಾರ್ ಹೋಟೆಲ್, ಯುವರಾಜ, ವಿಷ್ಣುಭವನ್.... ಇತ್ಯಾದಿಗಳಲ್ಲದೆ ರುಚಿ–ರುಚಿಯಾಗಿ ಉಣಬಡಿಸುವ ಬೀದಿಬದಿಗಳಲ್ಲಿನ ಮೊಬೈಲ್ ಕ್ಯಾಂಟೀನ್‌ಗಳು.

ಮಾಂಸಾಹಾರಿಗಳಿಗೂ ಇಲ್ಲುಂಟು ಒಳ್ಳೆಯ ಹೋಟೆಲ್‌ಗಳು, ಬನ್ನೂರು ಸಿದ್ದೇಶ್ವರ, ಲಕ್ಷ್ಮಣ ಮೆಸ್, ಹನುಮಂತು ಹೋಟೆಲ್, ತೇಗು ಮೆಸ್, ಆರ್‌ಆರ್‌ಆರ್ ಹೋಟೆಲ್, ಬಿರಿಯಾನಿ ಪ್ಯಾರಡೈಸ್‌ಗಳು ಮತ್ತು ಇತ್ತೀಚಿನ ಎಂಪೈರ್ ಹೋಟೇಲ್. ಇವುಗಳಲ್ಲಿ ಬೆಳಿಗ್ಗೆ ತಿಂಡಿಯಿಂದ ರಾತ್ರಿ ಊಟದವರೆಗೂ ರುಚಿರುಚಿಯಾದ ವಿವಿಧ ಐಟಂಗಳು ದೊರೆಯುವುದು.

ವಯಸ್ಸಾದವರಿಗೆ ಹೇಗೆ ಮೈಸೂರು ಸ್ವರ್ಗವೋ ಹಾಗೆಯೇ ಯುವಕರಿಗೂ ಈ ಊರು ಅಚ್ಚುಮೆಚ್ಚು. ಗಂಗೋತ್ರಿಯ ಬಯಲಿರಬಹುದು, ಕುಕ್ಕರಹಳ್ಳಿ ಕೆರೆಯ ದಂಡೆ ಇರಬಹುದು, ಕಾರಂಜಿಕೆರೆಯ ದೋಣಿವಿಹಾರ ಇರಬಹುದು, ಚಾಮುಂಡಿಬೆಟ್ಟ ತಪ್ಪಲಿನ ಮರಗಳ ಆಶ್ರಯ ಇರಬಹುದು, ಲಲಿತಮಹಲ್ ಹೆಲಿಪ್ಯಾಡ್ ಇರಬಹುದು, ರಂಗನತಿಟ್ಟು ಇರಬಹುದು, ಬೃಂದಾವನ ಗಾರ್ಡನ್ ಇರಬಹುದು, ಶ್ರೀರಂಗಪಟ್ಟಣದ ಕಾವೇರಿ ನದಿ ತೀರಗಳಿರಬಹುದು, ಬಲಮುರಿ ಇರಬಹುದು ಎಲ್ಲವೂ ಯುವ ಜೋಡಿಗೆ ಸುಂದರ ತಾಣಗಳು. ಕನ್ನಡ ಚಲನಚಿತ್ರ ಒಂದರಲ್ಲಿ ಹಂಸಲೇಖರವರು ಬರೆದಿರುವ ಸಾಹಿತ್ಯದಂತೆ ನಮ್ಮೂರು: ಕೂರಕ್ಕೆ ಕುಕ್ಕರಳ್ಳಿ ಕೆರೆ, ತೇಲಕ್ಕೆ ಕಾರಂಜಿಕೆರೆ.... ಮರದ ಮರೆಯಲಿ..... ಭಯ ಬಿಟ್ಟಾಕಿ ಪ್ರೀತಿ ಮಾಡಿ....

ವಿದ್ಯಾರ್ಜನೆಗಾಗಿ ರಾಜ್ಯವಲ್ಲದೆ ದೇಶ ವಿದೇಶಗಳಿಂದ ಮೈಸೂರಿಗೆ ಬರುವ ಮಕ್ಕಳು. ಇವರ ಜ್ಞಾನದಾಹ ತಣಿಸಲು ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮೆಡಿಕಲ್ ಕಾಲೇಜು, ಜೆಎಸ್‌ಎಸ್, ಎನ್‌ಐಇ, ಜೆಸಿಇ, ಯುವರಾಜ, ಮಹಾರಾಜ, ಮಹಾರಾಣಿ, ಶಾರದಾ ವಿಲಾಸ, ಎಂಐಟಿ, ವಿದ್ಯಾವರ್ಧಕ ಕಾಲೇಜು.... ಇತ್ಯಾದಿ ಪ್ರತಿಷ್ಠಿತ ಕಾಲೇಜುಗಳು ನಮ್ಮೂರಲ್ಲಿ ಉಂಟು.

ಮೈಸೂರಿನಲ್ಲಿ ಮನರಂಜನೆಗಾಗಿ ಹತ್ತಾರು ಸಿನಿಮಾ ಮಂದಿರಗಳು, ವಾರಾಂತ್ಯ ನಾಟಕಕ್ಕಾಗಿ ರಂಗಾಯಣದ ಜೊತೆಗೆ ಕೆಲವಾರು ರಂಗಸಂಸ್ಥೆಗಳು ನಿರಂತರವಾಗಿ ಮನರಂಜನೆ ನೀಡುತ್ತಿವೆ. ಬಹುತೇಕ ವಾರದ ಎಲ್ಲಾ ದಿನಗಳು ಮನೆಯಂಗಳದಲ್ಲಿ ಕವಿಶ್ರೇಷ್ಠರಿಂದ ರಚಿಸಲ್ಪಟ್ಟ ಕೃತಿಗಳು ಬಿಡುಗಡೆ ಆಗುತ್ತಿರುತ್ತವೆ, ಬುದ್ಧಿಜೀವಿಗಳ ಭಾಷಣಗಳಿಗೆ ಕೊರತೆ ಇಲ್ಲ. ನಿತ್ಯವೂ ಹೊಸ ಹೊಸ ವಿಚಾರಗಳನ್ನು ಕಲಿಯಲು ಇಲ್ಲಿ ಅವಕಾಶ ಉಂಟು. ವಿಜಯನಗರದಲ್ಲಿ ಇರುವ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆಯುವ ಕನ್ನಡ ಕಾರ್ಯಕ್ರಮಗಳು ಸಾಹಿತ್ಯಾಸಕ್ತರಿಗೆ ಹಬ್ಬ.

ಮನಸ್ಸು ಬೇಸರಗೊಂಡಾಗ ಮನೆಯಿಂದ ಹೊರಬಂದರೆ ಸಾಯಂಕಾಲ ಮೈಸೂರಿನ ದೇವರಾಜ ಅರಸು ಮತ್ತು ಸಯ್ಯಾಜಿರಾವ್ ರಸ್ತೆಗಳಲ್ಲಿ ಶಾಪಿಂಗ್ ಮಾಡುವುದರಲ್ಲಿ ಸಿಗುವ ಖುಷಿ ಹೇಳತೀರದು, ಆ ಖುಷಿಯನ್ನು ಅನುಭವಿಸೇ ತಿಳಿಯಬೇಕು.

ಮೈಸೂರಿನ ಜೀವನವನ್ನು ಬಣ್ಣಿಸುತ್ತಾ ಹೋದರೆ ಬಹುಶಃ ಒಂದು ದೊಡ್ಡ ಗ್ರಂಥವನ್ನು ರಚಿಸಿ ಓದುಗರಿಗಾಗಿ ಲೋಕಾರ್ಪಣೆ ಮಾಡಬಹುದು. ಸೀಮಿತ ಸ್ಥಳಾವಕಾಶದಲ್ಲಿ ನಮ್ಮ ಹೆಮ್ಮೆಯ ಮೈ'ಸೂರು' ನಗರದ ವಾಸಿಯಾಗಿ ನಾ ಕಂಡು ಅನುಭವಿಸುತ್ತಿರುವ ಸುಖದ ತಾಣಗಳ ಕುರಿತು ದಾಖಲಿಸಿದ್ದೇನೆ. ನಾನು ಮೈಸೂರಿಗನೆಂದು ಪರ ಊರಿನವರೊಂದಿಗೆ ಹೇಳಿಕೊಳ್ಳಲು ನನ್ನ ಹೃದಯ ಮನಸ್ಸು ಆನಂದದಿಂದ ಕುಣಿಯುವುದು, ನಿಮಗೂ ಹಾಗೇ ಆಗುತ್ತದೆಯಲ್ಲವೆ?.

ಮೈಸೂರೆಂದರೆ ಮೈಯೆಲ್ಲಾ ಝುಮ್‌ಝುಮ್, ಮೈಸೂರೆಂದರೆ ಮನಸ್ಸೆಲ್ಲ ಹಗುರ, ಮೈಸೂರೆಂದರೆ ಮನಸೂರೆಗೊಳ್ಳುವ ಅರಮನೆಗಳು ಮತ್ತು ಪಾರಂಪರಿಕ ಕಟ್ಟಡಗಳು. ಬಣ್ಣಿಸುತ್ತಾ ಹೋದರೆ ಇದು ಮಹಾಕವಿ ಬನವಾಸಿಯನ್ನು ಬಣ್ಣಿಸಿದ್ದಕ್ಕಿಂತಲೂ ಹೆಚ್ಚು ಬಣ್ಣಿಸಲು ಸಾಧ್ಯವಿರುವ ಎಲ್ಲಾ ಲಕ್ಷಣಗಳನ್ನು ಹೊಂದಿರುವ ನಗರ. ಆದ್ದರಿಂದ ಅವನಂತೆ ನಮಗೂ ಮತ್ತೆ ಮತ್ತೆ ಇಲ್ಲೇ ಹುಟ್ಟಬೇಕೆನಿಸುವುದು.

ಆಕ್ಟೋಬರ್ ತಿಂಗಳಲ್ಲಿ ನಡೆಯುವ ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ನಗರವು ಬೇರೆಯದೇ ರೂಪ ತಾಳಿ ಭೂಲೋಕದ ಸ್ವರ್ಗದಂತೆ ಬದಲಾಗುವುದು, ಜಗಮಗಿಸುವ ವಿದ್ಯುತ್ ಬೆಳಕಿನಲ್ಲಿ ಕಂಗೊಳಿಸುವ ಮೈಸೂರನ್ನು ಒಮ್ಮೆ ಸುತ್ತಿ ಬಂದರೆ, **'ಹುಟ್ಟಿದರೆ ಮೈಸೂರಲ್ಲೇ ಹುಟ್ಟಬೇಕು'** ಎಂದು ಅನಿಸದೇ ಇರುವವರು ನಿಮಗೆ ಯಾರೂ ಸಿಗುವುದಿಲ್ಲ,

ಯಡಿಯೂರಪ್ಪ ಸೇರಿ ಹಲವರಿಗೆ ಸಂಕಷ್ಟ : 2019ರ ಆಪರೇಷನ್ ಕಮಲ ಕೇಸ್ ಮುನ್ನೆಲೆಗೆ

ಬೆಂಗಳೂರು, ಸೆ.15– 2019ರ 'ಆಪರೇಷನ್ ಕಮಲ' ಪಕ್ಷಾಂತರ ಪ್ರಕರಣದ ಸಂಬಂಧ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ 17 ಶಾಸಕರ ವಿರುದ್ಧ ಭ್ರಷ್ಟಾಚಾರ ನಿಗ್ರಹ (ತಿದ್ದುಪಡಿ) ಕಾಯ್ದೆ 2018 ಅಡಿಯಲ್ಲಿ ಲೋಕಾಯುಕ್ತ ತನಿಖೆಗೆ ಅನುಮತಿ ನೀಡುವಂತೆ ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್‌ಗೆ ಬೆಂಗಳೂರಿನ 'ಜನಾಧಿಕಾರ ಸಂಘರ್ಷ ಪರಿಷತ್ತು' ಮನವಿ ಮಾಡಿದೆ.

ಈ ಕುರಿತು ಸಂಘಟನೆಯ ಆದರ್ಶ್ ಆರ್. ಅಯ್ಯರ್ ಸೇರಿದಂತೆ ಪದಾಧಿಕಾರಿಗಳು ಸೆ.11 ರಂದು ಸಭಾಧ್ಯಕ್ಷರ ಕಚೇರಿಗೆ ಅರ್ಜಿ ಸಲ್ಲಿಸಿದ್ದಾರೆ. ಅಂದು ನಡೆದ 'ಆಪರೇಷನ್ ಕಮಲ' ನಂತರದ ಪಕ್ಷದ ವಿಪ್ ಉಲ್ಲಂಘಿಸಿ ಸದನದಲ್ಲಿ ಹಾಜರಾಗದೇ ಇರುವ ಮೂಲಕ ಯಡಿಯೂರಪ್ಪ ಅವರಿಗೆ ಅನುಚಿತ ಅನುಕೂಲತೆಯನ್ನು ಶಾಸಕರು ಕಲ್ಪಿಸಿದ್ದರು. ಈ ಶಾಸಕರ ವಿರುದ್ಧ 'ಜನಾಧಿಕಾರ ಸಂಘರ್ಷ ಪರಿಷತ್ತು' ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ'ಕ್ಕೆ ಪ್ರಕರಣ ದಾಖಲಿಸಿ ಭ್ರಷ್ಟಾಚಾರ ತಡೆ ಕಾಯ್ದೆ ಅನ್ವಯ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿತ್ತು.

ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯ ನೀಡಿದ ತೀರ್ಪಿನಲ್ಲಿ ಸದರಿ ಪ್ರಕರಣ ಭ್ರಷ್ಟಾಚಾರ ನಿಗ್ರಹ (ತಿದ್ದುಪಡಿ) ಕಾಯ್ದೆ 2018 ಕಲಂ 7 ಅಡಿಯಲ್ಲಿ ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಶಾಸಕರ ವಿರುದ್ಧ ಅಭಿಯೋಜನೆಗೆ ಮಂಜೂರಾತಿ ಪಡೆಯಬೇಕೆಂದು ಆದೇಶಿಸಿತ್ತು. ಈ ಹಿನ್ನೆಲೆ ಪಕ್ಷಾಂತರ ಮಾಡಿದ ಶಾಸಕರನ್ನು ಕೇವಲ ಅನರ್ಹಗೊಳಿಸಿದರಷ್ಟೇ ಸಾಲದು, ಪಕ್ಷಾಂತರ ಕೃತ್ಯದ ಹಿಂದೆ ನಡೆಯುವ ಭ್ರಷ್ಟ ಕ್ರಮಗಳ ವಿರುದ್ಧವೂ ತನಿಖೆ ಆಗಬೇಕು. ಆದ್ದರಿಂದ ಜನಾದೇಶ ವಿರೋಧಿ ನಡೆಗಳ ವಿರುದ್ಧ ತನಿಖೆಗೆ ಅನುಮತಿ ನೀಡಬೇಕೆಂದು ಸಂಘಟನೆ ಸಭಾಧ್ಯಕ್ಷರಿಗೆ ಅರ್ಜಿ ಸಲ್ಲಿಸಿದೆ.

ಯಾರ ವಿರುದ್ಧ ದೂರು?: ರಮೇಶ್ ಜಾರಕಿಹೊಳಿ, ಮಹೇಶ್ ಕುಮಟಳ್ಳಿ, ಪ್ರತಾಪಗೌಡ ಪಾಟೀಲ್, ಬಿ.ಸಿ. ಪಾಟೀಲ್, ಅರಬೈಲ್ ಶಿವರಾಮ ಹೆಬ್ಬಾರ್, ಎಸ್.ಟಿ. ಸೋಮಶೇಖರ್, ಬಿ.ಎ.ಬಸವರಾಜ್, ಮುನಿರತ್ನ, ಡಾ.ಕೆ ಸುಧಾಕರ್, ಆನಂದ ಸಿಂಗ್, ಆರ್.ಶಂಕರ್, ಎ.ಎಚ್. ವಿಶ್ವನಾಥ್, ಕೆ. ಗೋಪಾಲಯ್ಯ, ಕೆ.ಸಿ. ನಾರಾಯಣಗೌಡ, ರೋಶನ್ ಬೇಗ್, ಎನ್. ನಾಗರಾಜು ಎಂಟಿಬಿ, ಶ್ರೀಮಂತ ಪಾಟೀಲ್ ಹಾಗೂ ಯಡಿಯೂರಪ್ಪ ವಿರುದ್ಧ ಲೋಕಾಯುಕ್ತದಿಂದ ತನಿಖೆ ನಡೆಸಲು ಅನುಮತಿ ನೀಡುವಂತೆ ಆದರ್ಶ್ ಅಯ್ಯರ್ ಅರ್ಜಿ ಸಲ್ಲಿಸಿದ್ದಾರೆ.

ಆಧಾರ್ ಕಾರ್ಡ್ ಉಚಿತ ಅಪ್ಡೇಟ್ ಮಾಡಲು ಡಿ.14ರವರೆಗೆ ಅವಧಿ ವಿಸ್ತರಣೆ

ದೆಹಲಿ, ಸೆ.15– ಆಧಾರ್ ಕಾರ್ಡ್‌ನಲ್ಲಿನ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಉಚಿತವಾಗಿ ನವೀಕರಿಸಲು ಸೆಪ್ಟೆಂಬರ್ 14 ರಂದು ಗಡುವು ಮುಗಿಯಲಿದೆ ಎಂಬ ಪ್ರಕಟಣೆಯಿಂದ ಆತಂಕಕ್ಕೊಳಗಾಗಿದ್ದವರಿಗೆ ಕೇಂದ್ರ ಸರ್ಕಾರದಿಂದ ಸಿಹಿ ಸುದ್ದಿ. ಆಧಾರ್ ಕಾರ್ಡ್ ಪಡೆದು 10 ವರ್ಷಗಳು ಪೂರ್ಣಗೊಂಡವರಿಗೆ ಮಾಹಿತಿಯನ್ನು ಉಚಿತವಾಗಿ ನವೀಕರಿಸಲು ದಿನಾಂಕವನ್ನು ಮತ್ತೆ ವಿಸ್ತರಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಹೊಸ ಆದೇಶದ ಪ್ರಕಾರ, 2024 ರ ಡಿಸೆಂಬರ್ 14 ರವರೆಗೆ ಶುಲ್ಕವಿಲ್ಲದೆ ಆಧಾರ್ ಕಾರ್ಡ್ ಹೊಂದಿರುವವರು ತಮ್ಮ ಮಾಹಿತಿಯನ್ನು ನವೀಕರಿಸಿಕೊಳ್ಳಬಹುದು ಎಂದು ಯುನಿಕ್ ಐಡೆಂಟಿಫಿಕೇಶನ್ ಅಥಾರಿಟಿ ಆಫ್ ಇಂಡಿಯಾ (ಯುಐಡಿಎಐ) ತಿಳಿಸಿದೆ.

ಆಧಾರ್ ಒಬ್ಬ ನಾಗರಿಕನ ಪ್ರಮುಖ ಗುರುತಿನ ದಾಖಲೆಯಾಗಿರುವುದರಿಂದ, ಇಲ್ಲಿಯವರೆಗೆ ನವೀಕರಿಸದವರು ತಕ್ಷಣವೇ ನವೀಕರಿಸಿಕೊಳ್ಳಬೇಕೆಂದು ಯುಐಡಿಎಐ ಮನವಿ ಮಾಡಿದೆ. ಪ್ರತಿ ಹತ್ತು ವರ್ಷಗಳಿಗೊಮ್ಮೆ ಆಧಾರ್ ಮಾಹಿತಿಯನ್ನು ನವೀಕರಿಸಬೇಕೆಂದು ಯುಐಡಿಎಐ ಸೂಚಿಸಿದೆ.

ಇದರೊಂದಿಗೆ, ಉಚಿತವಾಗಿ ಆಧಾರ್ ಅನ್ನು ನವೀಕರಿಸಲು ಕೇಂದ್ರ ಸರ್ಕಾರವು ಹಲವಾರು ಬಾರಿ ಗಡುವನ್ನು ವಿಸ್ತರಿಸಿದೆ. ಈಗ ಸಮಯ ಮಿತಿಯನ್ನು ಮೂರು ತಿಂಗಳವರೆಗೆ ವಿಸ್ತರಿಸಲಾಗಿದೆ. ಪ್ರಸ್ತುತ ಆದೇಶದ ಪ್ರಕಾರ, ಡಿಸೆಂಬರ್ 14 ರವರೆಗೆ ಹೆಸರು, ವಿಳಾಸ ಮುಂತಾದವುಗಳನ್ನು ಉಚಿತವಾಗಿ ನವೀಕರಿಸಬಹುದು ಅಥವಾ ತಿದ್ದುಪಡಿ ಮಾಡಬಹುದು. ಡಿಸೆಂಬರ್ 14 ರ ನಂತರ ಮಾಹಿತಿಯನ್ನು ನವೀಕರಿಸಲು ಶುಲ್ಕ ಪಾವತಿಸಬೇಕಾಗುತ್ತದೆ. ಉಚಿತ ಸೇವೆಯು ಎಂ–ಆಧಾರ್ ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿದೆ. ಜನಸಂಖ್ಯಾ ಮಾಹಿತಿಯನ್ನು ನವೀಕರಿಸುವ ಪ್ರಕ್ರಿಯೆಯನ್ನು ಸುಲಭಗೊಳಿಸಲು ಮತ್ತು ನಾಗರಿಕರಿಗೆ ಹೆಚ್ಚಿನ ಅನುಕೂಲತೆಯನ್ನು ಖಚಿತಪಡಿಸಿಕೊಳ್ಳಲು ಈ ಉಚಿತ ಸೇವೆಯನ್ನು ಒದಗಿಸಲಾಗುತ್ತಿದೆ ಎಂದು ಯುಐಡಿಎಐ ಹೇಳಿದೆ.

ನೀವು ಹತ್ತು ವರ್ಷಗಳ ಹಿಂದೆ ಆಧಾರ್ ಪಡೆದಿದ್ದರೆ, ನಿಮ್ಮ ವಿವರಗಳನ್ನು ನವೀಕರಿಸುವುದು ಅತ್ಯಗತ್ಯ. ಗುರುತಿನ ಪುರಾವೆ, ವಿಳಾಸ ಪುರಾವೆ ದಾಖಲೆಗಳನ್ನು ನೀಡಬೇಕಾಗುತ್ತದೆ. ಮೈ ಆಧಾರ್ ಪೋರ್ಟಲ್ ಮೂಲಕ ಮಾತ್ರ ಉಚಿತ ಸೇವೆ ಲಭ್ಯವಾಗುತ್ತದೆ. ಹೆಸರು, ವಿಳಾಸ, ಜನ್ಮ ದಿನಾಂಕ ಮತ್ತು ಇತರ ವಿವರಗಳನ್ನು ಯುಐಡಿಎಐ ವೆಬ್‌ಸೈಟ್‌ನ ಪೋರ್ಟಲ್‌ನಲ್ಲಿ ಆನ್‌ಲೈನ್‌ನಲ್ಲಿ ಉಚಿತವಾಗಿ ನವೀಕರಿಸಬಹುದು. ಆದರೆ, ಫೋಟೋ, ಬಯೋಮೆಟ್ರಿಕ್, ಐರಿಸ್ ಮುಂತಾದ ಮಾಹಿತಿಯನ್ನು ನವೀಕರಿಸಲು ಹತ್ತಿರದ ಆಧಾರ್ ಕೇಂದ್ರಗಳಿಗೆ ಭೇಟಿ ನೀಡಬೇಕಾಗುತ್ತದೆ.

ಹುಮಾಯಾನ್ ರಚಿತ 'ಭಾವದಿಂಚರ' ಕವನ ಸಂಕಲನ ಬಿಡುಗಡೆ

ಮೈಸೂರು, ಸೆ.15(ಎಸ್‌ಪಿಎನ್)– ಕವಿ ಎನ್.ಮೊಹಮ್ಮದ್ ಹುಮಾಯಾನ್ ರಚಿತ 'ಭಾವದಿಂಚರ' ಕವನ ಸಂಕಲನ, 5 ಮಂದಿ ಸಾಧಕ ಶಿಕ್ಷಕರಿಗೆ 'ವಿದ್ಯಾವಾರಿಧಿ' ಪ್ರಶಸ್ತಿ ಪುರಸ್ಕಾರ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಬೀದರ್ ಎನ್‌ಎಸ್‌ಎಸ್‌ಕೆ ಮ್ಯಾನೇಜಿಂಗ್ ಕನ್ಸಲ್‌ಟೆಂಟ್ ಬಿ.ಎಸ್.ಅಪರಂಜಿ ಸನ್ಮಾನಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಮೈಸೂರು ಕಬೀರ್ ಪ್ರಕಾಶನ ಸಹಯೋಗದೊಂದಿಗೆ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಸಾಧಕ ಶಿಕ್ಷಕರು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಒಂದು ಕವನ ಸಂಕಲನವಾಗಲಿ, ಗದ್ಯವನ್ನಾಗಲಿ ರಚನೆ ಮಾಡುವುದು ಸಾಮಾನ್ಯರಿಂದ ಸಾಧ್ಯವಿಲ್ಲ. ಬದಲಾಗಿ, ಬರವಣಿಗೆಯನ್ನು ತಪಸ್ಸಿನ ರೀತಿ ಯಾರು ಪರಿಗಣಿಸುತ್ತಾರೋ ಅಂತಹವರು ಮಾತ್ರ ರಚನೆ ಮಾಡಲು ಸಾಧ್ಯ. ಕವಿ ಎನ್. ಮೊಹಮ್ಮದ್ ಹುಮಾಯಾನ್ ರಚಿತ 'ಭಾವದಿಂಚರ' ಕವನ ಸಂಕಲನದಲ್ಲಿರುವ 70ಕ್ಕೂ ಹೆಚ್ಚು ಕವಿತೆಗಳು ಉತ್ತಮವಾಗಿ ಮೂಡಿಬಂದಿವೆ ಎಂದರು.

ಈ ವೇಳೆ ಶಿಕ್ಷಕರ ದಿನಾಚರಣೆ ಅಂಗವಾಗಿ ಸಾಧಕ ಶಿಕ್ಷಕರಾದ ಬಿ.ರವೀಶ್ ಕುಮಾರ್, ರಾಮಚಂದ್ರ ಭಟ್, ಉಷಾಮಣಿ, ಸಿ.ಎಸ್.ರಾಘವೇಂದ್ರ, ಜೈಬುನ್ನೀಸ ಅವರಿಗೆ 'ವಿದ್ಯಾವಾರಿಧಿ' ಪ್ರಶಸ್ತಿಯನ್ನು ನೀಡಿ, ಗೌರವಿಸಲಾಯಿತು. ನಂತರ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಾದ ಎನ್. ಅನು, ವರ್ಷ ಮಹೇಶ್, ದೀಕ್ಷಾ ಸಿ.ಅರಸ್ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ. ಸಂತೋಷ್, ನಿವೃತ್ತ ಶಿಕ್ಷಕ ಬಿ.ರವೀಶ್ ಕುಮಾರ್, ಕವಯತ್ರಿ ಬಿ.ಶೋಭಾ, ಸಿ. ವಾಣಿ ರಾಘವೇಂದ್ರ, ಎನ್.ಸಿ.ಮಮತ, ಹೇಮಗಂಗಾ, ಸೌಗಂಧಿಕಾ ವಿ.ಜೋಯಿಸ್, ರೇಖಾ ಸಂತೋಷ್, ಎಸ್.ವಿ.ಪನ್ನಗ, ಎನ್.ಆರ್.ರೂಪಶ್ರೀ, ಕೆ.ಪ್ರೇಮಾಕುಮಾರ, ನೀತು ಎಸ್.ರಾಜ್ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಾಜಿ ಸಚಿವ ಸಗೀರ್ ಅಹಮದ್ ಕುಟುಂಬಕ್ಕೆ ಭೂ ಶಾಕ್

31 ಎಕರೆ ಭೂಮಿ ಸರಕಾರದ ವಶಕ್ಕೆ

ಚಿಕ್ಕಮಗಳೂರು, ಸೆ.15– ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಸಗೀರ್ ಅಹಮದ್ ಅವರ ಕುಟುಂಬಕ್ಕೆ ಭೂ ವ್ಯಾಜ್ಯದಲ್ಲಿ ಭಾರಿ ಹಿನ್ನಡೆಯಾಗಿದೆ. ತಾಲೂಕಿನ ಐತಿ ಹಾಸಿಕ ಇನಾಂ ದತ್ತಾತ್ರೇಯ ಪೀಠ ಗ್ರಾಮದ ವ್ಯಾಪ್ತಿಯಲ್ಲಿ ಮಾಜಿ ಸಚಿವ ಸಗೀರ್ ಅಹಮದ್ ಅವರ ಪತ್ನಿ ಹೆಸರಿನಲ್ಲಿನ ಐದು ಸರ್ವೆ ನಂಬರ್‌ಗಳ ವ್ಯಾಪ್ತಿಯಲ್ಲಿದ್ದ ಒಟ್ಟು 31.31 ಎಕರೆ ಜಾಗವನ್ನು ಸರಕಾರ ವಶಕ್ಕೆ ಪಡೆದಿದೆ. ಈ ಜಾಗದಲ್ಲಿರುವ ಕಾಲುದಾರಿ, ಬಂಡಿ ದಾರಿ, ಜಲಪಾತ, ರಸ್ತೆಗಳ ಮೇಲೂ ಅವರಿಗೆ ಹಕ್ಕು, ಮಾಲೀಕತ್ವ ಇಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಈ ಜಾಗ ಮೂಲತಃ ಹಿಂದೂ–ಮುಸ್ಲಿಂ ಭಾವೈಕ್ಯದ ಕೇಂದ್ರವಾಗಿರುವ ಇನಾಂ ದತ್ತಾತ್ರೇಯ ಪೀಠ ಮತ್ತು ಬಾಬಾ ದರ್ಗಾ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ್ದಾಗಿತ್ತು. ಈ ಸಂಸ್ಥೆಯ ವಹಿವಾಟುದಾರರಾಗಿದ್ದ ಸಜ್ಜಾದ್ ಎಂಬುವರು ವಾಸಿಮಲ್ ಎಂಬುವರಿಗೆ ಗೇಣಿಗೆ ನೀಡಿದ್ದರು.

1955ರಲ್ಲಿ ಜಾರಿಗೆ ಬಂದ ಕರ್ನಾಟಕ ರಿಲೀಜಿಯಸ್ ಆಂಡ್ ಚಾರಿಟಬಲ್ ಇನಾಂ ಅಬಾಲಿಷನ್ ಕಾಯ್ದೆಯ ಪ್ರಕಾರ ಅಷ್ಟೂ ಜಾಗ ಸರಕಾರ ಸೇರ್ಪಡೆಯಾಗಿತ್ತು. ಇದಾದ ಬಳಿಕವೇ ಇನಾಂ ದತ್ತಾತ್ರೇಯ ಪೀಠ ಮತ್ತು ಬಾಬಾ ದರ್ಗಾದ ಧಾರ್ಮಿಕ ಸಂಸ್ಥೆಗೆ ರೂ. 11.60 ಲಕ್ಷ ರೂ ತಸ್ತಿಕ್ ನಿಗದಿ ಮಾಡಲಾಗಿತ್ತು. ನಂತರ ವಾಸಿಮಲ್ ಎಂಬುವರಿಂದ 1966ರಲ್ಲಿ ಇಲ್ಲಿಸ್ ಖಾನ್ ಎಂಬುವರು ಕ್ರಯಪತ್ರದ ಮೂಲಕ ಖರೀದಿಸಿದ್ದರು. ಅವರಿಂದ ಮೆ. ಸಿಪಾನಿ ಅಂಡ್ ಕಂಪನಿ ಖರೀದಿ ಮಾಡಿದೆ. ಆ ನಂತರ 1978ರಲ್ಲಿ ಮಾಜಿ ಸಚಿವ ಸಿ.ಆರ್. ಸಗೀರ್ ಅಹಮದ್ ಅವರ ಪತ್ನಿ ಫಾತಿಮಾಬಿ ಖರೀದಿ ಮಾಡಿದ್ದರು.

ಇದಾದ ನಂತರ ಫಾತಿಮಾಬಿ ಅವರು ಇನಾಂ ರದ್ದತಿ ಕಾಯ್ದೆಯಲ್ಲಿನ ಅವಕಾಶದಂತೆ ಅದಿಭೋಗದಾರಿಕೆ ಹಕ್ಕನ್ನು ಭೂ ನ್ಯಾಯ ಮಂಡಳಿ ಮುಂದೆ ಮಂಡಿಸುತ್ತಾರೆ. ಅರ್ಜಿ ಪುರಸ್ಕರಿಸಿದ ನ್ಯಾಯ ಮಂಡಳಿಯು 1994ರಲ್ಲಿ ಅದಿಭೋಗದಾರರು ಎಂದು ನೊಂದಾಯಿಸಿ ಆದೇಶಿಸಿತ್ತು. ಬಳಿಕ ಅವರ ಹೆಸರಿಗೆ ಮ್ಯುಟೇಷನ್ ಮತ್ತು ಪಹಣಿ ಕೂಡ ದಾಖಲಾಗಿದೆ.

ಈ ಜಾಗದಲ್ಲಿ ಧಬೆಧಬೆ ಜಲಪಾತಕ್ಕೆ ಹಾದು ಹೋಗುವ ರಸ್ತೆಯು ಸಾರ್ವಜನಿಕ ರಸ್ತೆಯಲ್ಲ ಎಂದು ಫಾತಿಮಾಬಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ರಸ್ತೆ ಯಾರಿಗೆ ಸೇರಿದ್ದು ಎಂಬುದನ್ನು ಇತ್ಯರ್ಥಪಡಿಸಲು ಜಿಲ್ಲಾಧಿಕಾರಿಗೆ ಹೈ ಕೋರ್ಟ್ ಆದೇಶಿಸಿತ್ತು. ದಾಖಲೆಗಳನ್ನು ಪರಿಶೀಲಿಸಿದಾಗ ಇದು ಭೂನ್ಯಾಯ ಮಂಡಳಿ ಆದೇಶದಂತೆ ನೋಂದಾಯಿಸಿರುವ ಜಮೀನು ಎಂಬುದು ಬೆಳಕಿಗೆ ಬಂದಿದೆ.

ಫಾತಿಮಾಬಿ ಅವರ ಪರ ವಕೀಲರು ಸಲ್ಲಿಸಿದ ಎಲ್ಲ ದಾಖಲೆಗಳು, ಸರಕಾರದ ಬಳಿ ಇರುವ ದಾಖಲೆಗಳನ್ನು ಪರಿಶೀಲನೆ ನಡೆಸಿದ್ದು, 1993ರ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ರದ್ದುಗೊಳಿಸಿದ ಇನಾಂ ಜಮೀನುಗಳನ್ನು ಮರಳಿ ಅದಿಭೋಗದಾರಿಕೆ ನೀಡುವ ಅಧಿಕಾರ ಜಿಲ್ಲಾಧಿಕಾರಿಗೆ ಮಾತ್ರ ಇದೆ. ಆದ್ದರಿಂದ ಭೂನ್ಯಾಯ ಮಂಡಳಿ ನೀಡಿರುವ ಮಂಜೂರಾತಿ ಅಸಿಂಧು ಎಂದು ತೀರ್ಮಾನಿಸಿದ್ದಾರೆ. ಅಲ್ಲದೇ ಭೂನ್ಯಾಯ ಮಂಡಳಿಯ ಆದೇಶದ ಜೆರಾಕ್ಸ್ ಪ್ರತಿ ಇದ್ದು, ಮೂಲಪ್ರತಿ ಲಭ್ಯವಿಲ್ಲ ಆದ್ದರಿಂದ ಫಾತಿಮಾಬಿ ಅವರ ಹಕ್ಕು ದಾರಿಕೆ ಕಾನೂನು ಬದ್ಧವಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

ಅಗ್ನಿಶಾಮಕ ದಳದ 46 ಅಧಿಕಾರಿ, ಸಿಬ್ಬಂದಿ ವರ್ಗಾವಣೆ

ಮೈಸೂರು, ಸೆ.15(ಎಸ್‌ಪಿಎನ್)–ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 46 ಮಂದಿ ಅಧಿಕಾರಿ/ಸಿಬ್ಬಂದಿಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಸೆ.13ರಂದು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ. ಹೆಚ್.ಡಿ.ಕೋಟೆ ಅಗ್ನಿಶಾಮಕ ದಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಮೋದ್ ಎಂ.ಪಟಗಾರ ಅವರನ್ನು ಕುಮಟಾ ಅಗ್ನಿಶಾಮಕ ಠಾಣೆಗೆ, ಮಲ್ಲಿಕಾರ್ಜುನ ಎಮ್ಮಿ ಅವರನ್ನು ಹೆಚ್.ಡಿ.ಕೋಟೆಯಿಂದ ಧಾರವಾಡಕ್ಕೆ ಕೆ.ವಿ.ಅವಿನಾಶ್ ಅವರನ್ನು ಬೆಂಗಳೂರು ಬನಶಂಕರಿಯಿಂದ ಹಾಸನಕ್ಕೆ, ಕೆ.ಎಂ.ಸೂರ್ಯ ಅವರನ್ನು ಅರಕಲಗೂಡಿನಿಂದ ಕೆ.ಆರ್.ನಗರ ಅಗ್ನಿಶಾಮಕ ಠಾಣೆಗೆ ಸರ್ಕಾರ ವರ್ಗಾವಣೆ ಗೊಳಿಸಿದೆ.

ಗಣೇಶ ವಿಸರ್ಜನೆ ವೇಳೆ ದುರಂತ: ತಂದೆ–ಮಗ ಸೇರಿ ಮೂವರು ಜಲಸಮಾಧಿ

ತುಮಕೂರು, ಸೆ.15– ಜಿಲ್ಲೆಯ ತುರುವೇಕೆರೆ ತಾಲೂಕಿನ ಮಾರಸಂದ್ರ ಗ್ರಾಮ ಸಮೀಪದ ರಂಗನಹಟ್ಟಿ ಕೆರೆಯಲ್ಲಿ ಗಣೇಶ ವಿಸರ್ಜನೆ ವೇಳೆ ತಂದೆ, ಮಗ ಸೇರಿ ಮೂವರು ಸಾವನ್ನಪ್ಪಿರುವಂತಹ ದುರ್ಘಟನೆ ಸಂಭವಿಸಿದೆ. ಮೃತರನ್ನು ತಂದೆ ಮಗ, 46 ವರ್ಷದ ರೇವಣ್ಣ, 26 ವರ್ಷದ ಶರತ್ ಹಾಗೂ ದಯಾನಂದ ಎಂದು ಗುರುತಿಸಲಾಗಿದೆ. ಗಣೇಶ ಮೂರ್ತಿ ವಿಸರ್ಜನೆಗೆ ತೆರಳಿದ್ದ ವೇಳೆ ಘಟನೆ ಸಂಭವಿಸಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪೊಲೀಸರು ಮೃತದೇಹಗಳಿಗೆ ಶೋಧ ನಡೆಸಿದ್ದಾರೆ. ಘಟನಾ ಸ್ಥಳಕ್ಕೆ ದಂಡಿನಶಿವರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಒಂದನೇ ಪುಟದಿಂದ

ಪ್ರಜಾಪ್ರಭುತ್ವ ದಿನಾಚರಣೆ

ಮಂದಿ ಈ ಕಾರ್ಯಕ್ರಮಕ್ಕಾಗಿ ಹೆಸರು ನೋಂದಾಯಿಸಿಕೊಂಡಿದ್ದು, ಪರೋಕ್ಷವಾಗಿ ಕೋಟ್ಯಂತರ ಜನರು ಬೆಂಬಲ ಸೂಚಿಸಿದ್ದಾರೆ. ಇದೇ ವೇಳೆ ಸಂಪುಟದ ಎಲ್ಲಾ ಸಚಿವರೂ ತಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ ಮಾನವ ಸರಪಳಿ ಕಾರ್ಯಕ್ರಮವನ್ನು ಹೆಚ್ಚು ಯಶಸ್ವಿಯಾಗಿ ನಡೆಸಿದರಲ್ಲದೆ, ಅಲ್ಲೇ ಸಂವಿಧಾನದ ಪೀಠಿಕೆಯನ್ನು ಓದಿ ಜಾಗೃತಿ ಮೂಡಿಸಿದ್ದಾರೆ. ಹಾಗೆಯೇ ಆ ಭಾಗದಲ್ಲಿ ಸಾವಿರಾರು ಗಿಡಗಳನ್ನು ನೆಡಿಸಿ ಪರಿಸರ ರಕ್ಷಣೆಯ ಸಂದೇಶವನ್ನೂ ಸಾರಿದ್ದಾರೆ. ಹೀಗೆ ವಿಭಿನ್ನ ರೀತಿಯಲ್ಲಿ ಪ್ರಜಾಪ್ರಭುತ್ವ ದಿನ ಆಚರಿಸಿದ ಜಿಲ್ಲೆಗಳಿಗೆ ಐದು ವಿಭಾಗಗಳಲ್ಲಿ ವಿಶೇಷ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಪ್ರತಿ ವಿಭಾಗಗಳಲ್ಲೂ 3 ಜಿಲ್ಲೆಗಳಂತೆ ಒಟ್ಟು 15 ಜಿಲ್ಲೆಗಳಿಗೆ ಮುಖ್ಯಮಂತ್ರಿ ಅವರಿಂದ ಪ್ರಶಸ್ತಿ ಕೊಡಿಸಲಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಅವರು, ಕಳೆದ ಜೂನ್‌ನಿಂದಲೇ ಈ ಕಾರ್ಯಕ್ರಮದ ಯೋಜನೆ ರೂಪಿಸಿ, ಸಾರ್ವಜನಿಕರ ಅಭಿಪ್ರಾಯ ಪಡೆದು ಮಂತ್ರಿಗಳೊಂದಿಗೆ ಚರ್ಚಿಸಿ ಒಪ್ಪಿಗೆ ಪಡೆದಿದ್ದರು. ನಂತರ ನಿರಂತರ ಸಭೆಗಳನ್ನು ನಡೆಸಿ 25ಕ್ಕೂ ಹೆಚ್ಚು ಉಪ ಸಮಿತಿಗಳನ್ನು ರಚಿಸಿ ಅವುಗಳ ನಿತ್ಯ ಅನುಷ್ಠಾನ ಕಾರ್ಯಗಳ ಮೇಲೆ ನಿಗಾವಹಿಸುತ್ತಿದ್ದರು. ಮಣಿವಣ್ಣನ್ ಅವರು ಕಳೆದ 15 ದಿನಗಳಿಂದ ಸಮಿತಿಗಳು ವಿವಿಧ ಇಲಾಖೆಗಳ ನೂರಾರು ಅಧಿಕಾರಿಗಳ ಜೊತೆ ಹಗಲಿರುಳು ಸಭೆ, ಚರ್ಚೆ, ಸಮಾಲೋಚನೆ ನಡೆಸಿದರು. ದಿಢೀರ್ ಸ್ಥಳ ಪರಿಶೀಲನೆಗಳನ್ನು ನಡೆಸಿ ತಮ್ಮದೇ ಪರಿಕಲ್ಪನೆಯೊಂದಿಗೆ ಕಾರ್ಯಕ್ರಮದ ವಿಶೇಷ ಜಾಲ ರೂಪಿಸಿದ್ದರು. ಆ ಮೂಲಕ ರಾಜ್ಯಾದ್ಯಂತ ಪ್ರಜಾಪ್ರಭುತ್ವದ ದಿನಾಚರಣೆ ಎಲ್ಲೆಡೆ ಯಶಸ್ವಿಯಾಗುವಂತೆ ಮಾಡಿದರು ಎಂದು ವಿವಿಧ ಇಲಾಖೆಗಳ ಅಧಿಕಾರಿಗಳು ಹೇಳಿದ್ದಾರೆ.

ನಾವು ಬದುಕಿನಲ್ಲಿ ಆಚರಿಸೋಣ

ನಮ್ಮ ಸರ್ಕಾರ ಸಮಾನತೆ ಸಾಧಿಸುವ ದಿಕ್ಕಿನಲ್ಲಿ, ಎಲ್ಲಾ ಜಾತಿ–ಎಲ್ಲಾ ಧರ್ಮದ ಬಡವರಿಗೆ, ಮಧ್ಯಮ ವರ್ಗದವರಿಗೆ ಶಕ್ತಿ ತುಂಬುವ ಕಾರ್ಯಕ್ರಮ ರೂಪಿಸಿ ಜಾರಿ ಮಾಡಿದ್ದೇವೆ. ಏಕತೆ ನೆಪದಲ್ಲಿ ಸಮಾಜವನ್ನು ಒಡೆಯುವ ವಿಚ್ಛಿದ್ರಕಾರಕ ಶಕ್ತಿಗಳನ್ನು ನಾಶ ಮಾಡಲು ಪ್ರಜಾಪ್ರಭುತ್ವವಾದಿಗಳು ಎದ್ದುನಿಲ್ಲಬೇಕು. ಬನ್ನಿ ಎದ್ದು ನಿಲ್ಲೋಣ ಎಂದು ಕರೆ ನೀಡಿದರು. ಏಕತೆ ಭಜನೆ ಮಾಡುವ ವಿಚ್ಛಿದ್ರಕಾರಕ ದುಷ್ಟ ಶಕ್ತಿಗಳು ಸಾಮಾಜಿಕ ನ್ಯಾಯ, ಸಮಾನತೆಯ ವಿರೋಧಿಗಳು. ಇವರು ಸಮಾಜದ ಶತ್ರುಗಳು ಇವರನ್ನು ಮೆಟ್ಟಿ ನಿಲ್ಲದ ಹೊರತು ಮಹಿಳೆಯರ, ದಲಿತರ, ಹಿಂದುಳಿದವರ ಹಕ್ಕುಗಳು, ಅವಕಾಶಗಳು ಸಿಗಲು ಸಾಧ್ಯವಾಗುವುದಿಲ್ಲ ಎಂದರು. 20 ಲಕ್ಷಕ್ಕೂ ಹೆಚ್ಚು ಮಂದಿಯ ಮಾನವ ಸರಪಳಿ ರಚಿಸಿರುವುದೇ ದುಷ್ಟಶಕ್ತಿಗಳಿಗೆ ಎಚ್ಚರಿಕೆ ನೀಡಿ ಮನುಷ್ಯ ಸಮಾಜವನ್ನು ಬೆಸೆಯುವುದಾಗಿದೆ ಎಂದರು.

ಉದ್ಘಾಟನೆ ಸಂದರ್ಭದಲ್ಲಿ ಪ್ರಜಾಪ್ರಭುತ್ವ ದಿನದ ರಾಯಭಾರಿ ಹರೇಕಳ ಹಾಜಪ್ಪ, ಪೌರ ಕಾರ್ಮಿಕ ತಾಯಂದಿರಾದ ನಾಗಲಕ್ಷ್ಮಿ, ಮಂಜುಳ ಹಾಗೂ ತೃತೀಯ ಲಿಂಗಿ ಪ್ರಿಯಾಂಕ ಮತ್ತು ಇಬ್ಬರು ವಿಶೇಷ ಚೇತನ ವಿದ್ಯಾರ್ಥಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎಡ–ಬಲದಲ್ಲಿ ನಿಂತು ಪ್ರಜಾಪ್ರಭುತ್ವ ದಿನವನ್ನು ಅರ್ಥಪೂರ್ಣಗೊಳಿಸಿದರು. ಶಾಸಕ ರಿಜ್ವಾನ್ ಅರ್ಷದ್ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಉಪಸಭಾಪತಿ ರುದ್ರಪ್ಪ ಲಮಾಣಿ, ಸಚಿವರುಗಳಾದ ಡಾ.ಹೆಚ್.ಸಿ.ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹಮದ್, ಯು.ಬಿ.ವೆಂಕಟೇಶ್ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

ಭದ್ರತಾ ಲೋಪ: ಸಿಎಂ ಸಿದ್ದರಾಮಯ್ಯಗೆ ಶಾಲು ಹೊದಿಸಲು ವೇದಿಕೆಗೆ ಜಿಗಿದ ಯುವಕನ ಬಂಧನ

ಬೆಂಗಳೂರು, ಸೆ.15– ಸಿಎಂ ಸಿದ್ದರಾಮಯ್ಯ ಭಾಗಿಯಾಗಿದ್ದ ಕಾರ್ಯಕ್ರಮದಲ್ಲಿ ಭದ್ರತಾ ಲೋಪವಾಗಿದ್ದು, ಸಿಎಂ ಇದ್ದ ಕಾರ್ಯಕ್ರಮದ ವೇದಿಕೆ ಮೇಲೆ ಯುವಕ ನೋರ್ವ ಜಿಗಿದ ಪರಿಣಾಮ ಕೆಲಕಾಲ ಆತಂಕ ಸೃಷ್ಟಿಯಾಗಿತ್ತು.

ವಿಧಾನಸೌಧದ ಮುಂಭಾಗ ನಡೆಯುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಕಾರ್ಯಕ್ರಮದಲ್ಲಿ ಭದ್ರತಾ ನಿಯಮ ಉಲ್ಲಂಘನೆಯಾಗಿರುವ ಘಟನೆ ನಡೆದಿದೆ. ಕಾರ್ಯಕ್ರಮದ ವೇದಿಕೆಯಲ್ಲಿ ಸಿ.ಎಂ ಸಿದ್ದರಾಮಯ್ಯ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ, ದಿನೇಶ್ ಗುಂಡೂರಾವ್, ಕೆ.ಜೆ.ಜಾರ್ಜ್, ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

2 ದಿನ ಪೊಲೀಸ್ ಕಸ್ಟಡಿಗೆ

ನೀಡುವಂತೆ ಪೊಲೀಸರು ನ್ಯಾಯಾಧೀಶರಲ್ಲಿ ಮನವಿ ಮಾಡಿದರು. ಆಗ ವಿಚಾರಣೆ ನಡೆಸಿದ ನ್ಯಾಯಾಧೀಶರು ಎರಡು ದಿನಗಳ ಕಾಲ ಅವರನ್ನು ಪೊಲೀಸ್ ಕಸ್ಟಡಿಗೆ ನೀಡಿದರು. ಜಾತಿ ನಿಂದನೆ ಮಾಡಿರುವುದಾಗಿ ಬಿಬಿಎಂಪಿಯ ಮಾಜಿ ಸದಸ್ಯ ವೇಲು ನಾಯ್ಕರ್ ಅವರು ವೈಯಾಲಿಕಾವಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು ಅವರನ್ನು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ. ತ್ಯಾಜ್ಯ ವಿಲೇವಾರಿ ಗುತ್ತಿಗೆಯಲ್ಲಿ 30 ಲಕ್ಷ ರೂ. ಕಮೀಷನ್ ಕೊಡುವಂತೆ ಒತ್ತಾಯಿಸಿ ನನಗೆ ಕೊಲೆ ಬೆದರಿಕೆ, ಜಾತಿ ನಿಂದನೆ ಮಾಡಿದ್ದಾರೆ ಎಂದು ಬಿಬಿಎಂಪಿ ಗುತ್ತಿಗೆದಾರ ಚಲುವರಾಜು ಅವರು ಸಹ ವೈಯಾಲಿಕಾವಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಪ್ರಕರಣದಲ್ಲಿ ಮುನಿರತ್ನ ಸೇರಿದಂತೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಮೈಸೂರು ಮಿತ್ರ ಸೋಮವಾರ 16 ಸೆಪ್ಟೆಂಬರ್ 2024

ಗಗನಚುಕ್ಕಿ ಜಲಪಾತೋತ್ಸವಕ್ಕೆ ತೆರೆ



ಮಳವಳ್ಳಿ: ತಾಲೂಕಿನ ಶಿವನಸಮುದ್ರದ ಗಗನಚುಕ್ಕಿ ಜಲಪಾತೋತ್ಸವಕ್ಕೆ ವೈಭವದ ತೆರೆ ಬಿದ್ದಿದೆ. ನಿನ್ನೆಯಿಂದ ವೈಭವದಿಂದ ಆರಂಭಗೊಂಡ ಜಲಪಾತೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದ್ದರು. ಎರಡು ದಿನಗಳ ಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಭಾನುವಾರ ಬೆಳಿಗ್ಗೆಯಿಂದ ಸ್ಥಳೀಯ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದರೆ, ಸಂಜೆ ಗಿಲಿಗಿಲಿ ತಂಡದಿಂದ ಕಾಮಿಡಿ ಷೋ ಹಾಗೂ ಖ್ಯಾತ ಸಂಗೀತ ನಿರ್ದೇಶಕ ರವಿ ಬಸ್ರೂರ್ ತಂಡದಿಂದ ಮ್ಯೂಸಿಕಲ್ ನೈಟ್ ನಡೆಯಿತು. ವೇದಿಕೆ ಕಾರ್ಯಕ್ರಮ ಹಾಗೂ ಲೇಸರ್ ಲೈಟ್ ಅಳವಡಿಕೆಯ ಗಗನಚುಕ್ಕಿ ಜಲಪಾತ ವೀಕ್ಷಿಸಲು ಸಾವಿರಾರು ಮಂದಿ ಭಾಗವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿ, ನಯನ ಮನೋಹರವಾಗಿರುವ ಗಗನಚುಕ್ಕಿ ಜಲಪಾತ ಪ್ರಕೃತಿ ಕೊಟ್ಟ ಸುಂದರ ಸೊಬಗಿನ ಪ್ರವಾಸಿ ತಾಣ. ಇದು ಮತ್ತಷ್ಟು ಸಮಗ್ರವಾಗಿ ಅಭಿವೃದ್ಧಿ ಆಗಬೇಕು. ಸರ್ಕಾರ ಸಹ ಇಂತಹ ಪ್ರವಾಸಿ ತಾಣವನ್ನು ಅಭಿವೃದ್ಧಿ ಮಾಡಲು ಸಿದ್ಧವಿದೆ. ಪ್ರವಾಸಿಗರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಮಾಡಲು ಕಾರಣೀಭೂತರಾಗಬೇಕೆಂದು ಕರೆ ನೀಡಿದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಕಾರ್ಯಕ್ರಮ ಯಶಸ್ವಿಗೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳು. ಪ್ರವಾಸಿಗರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಗಗನಚುಕ್ಕಿ ಜಲಪಾತದ ಅಭಿವೃದ್ಧಿ ಹಾಗೂ ಇನ್ನು ದೊಡ್ಡ ಮಟ್ಟದ ಪ್ರವಾಸಿ ತಾಣ ಮಾಡುವುದೆ ನನ್ನ ಗುರಿ ಎಂದರು.

ಶಾಸಕರಾದ ರವಿಕುಮಾರ್ ಗಣಿಗ, ಕೆಆರ್.ನಗರ ರವಿಶಂಕರ್, ವಿಧಾನಪರಿಷತ್ ಸದಸ್ಯ ಸುಧಾಮ್‌ದಾಸ್, ಜಿಲ್ಲಾಧಿಕಾರಿ ಡಾ.ಕುಮಾರ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಣೆ

ಸಾರ್ವಜನಿಕರಿಗೆ ಪ್ರಜಾಪ್ರಭುತ್ವ ದಿನದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು: ಚಲುವರಾಯಸ್ವಾಮಿ

ಮಂಡ್ಯ,ಸೆ.15–ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಸೆ.15ರಂದು ಆಚರಿಸುತ್ತಿದ್ದು, ಮಕ್ಕಳಿಗೆ, ಸಾರ್ವಜನಿಕರಿಗೆ ಪ್ರಜಾಪ್ರಭುತ್ವದ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಭಾನುವಾರ ನಗರದ ಮಿಮ್ಸ್ ಆವರಣದಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, 1997ರ ಸೆಪ್ಟೆಂಬರ್ 15ರಂದು ವಿಶ್ವಸಂಸ್ಥೆಯು ವಿಶ್ವ ಪ್ರಜಾಪ್ರಭುತ್ವ ದಿನವೆಂದು ತೀರ್ಮಾನಿಸಿ ಘೋಷಣೆ ಮಾಡಿತು. ತದನಂತರ 2007ರಲ್ಲಿ ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳು ಸೆ.15ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸುವುದಾಗಿ ಸಹಿ ಹಾಕಿ ಒಪ್ಪಂದ ಮಾಡಿಕೊಂಡವು ಎಂದರು.

ಕರ್ನಾಟಕ ಸರ್ಕಾರ ಈ ವರ್ಷ ಸೆ.15ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸುವುದಾಗಿ ತಿಳಿಸಿತು. ಆದ್ದರಿಂದ ಈ ದಿನ ನಮ್ಮ ರಾಷ್ಟ್ರಕ್ಕೆ ಹಾಗೂ ಪ್ರಜಾಪ್ರಭುತ್ವ ಇರುವಂತಹ ಎಲ್ಲಾ ರಾಷ್ಟ್ರಗಳಿಗೂ ಪವಿತ್ರವಾದ ದಿನವಾಗಿದೆ. ಯಾವುದೇ ಸರ್ಕಾರ ರಚನೆಯಾಗಬೇಕೆಂದರೆ ಪ್ರಜೆಗಳಿಂದ ಪ್ರತಿನಿಧಿಗಳು ಆಯ್ಕೆಯಾಗಿ ಮುಂದೆ ಸರ್ಕಾರವನ್ನು ರಚಿಸಿ ನಡೆಸಿಕೊಂಡು ಹೋಗಲಾಗುತ್ತದೆ. ಈ ಮೂಲಕ ಪ್ರಜೆಗಳ ತೀರ್ಮಾನದ ಮಹತ್ವವನ್ನು ತಿಳಿಯಬಹುದು ಎಂದು ಹೇಳಿದರು.



ಮಂಡ್ಯದಲ್ಲಿ ನಡೆದ ಅಂತಾರಾಷ್ಟ್ರೀಂಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಸಚಿವ ಚಲುವರಾಯಸ್ವಾಮಿ, ಅಧಿಕಾರಿಗಳು.

ಸಂವಿಧಾನ ಶಿಲ್ಪಿಯಾದ ಡಾ.ಬಿ.ಆರ್. ಅಂಬೇಡ್ಕರ್ ಅವರು ಭಾರತ ಸಂವಿಧಾನದಲ್ಲಿ ಪ್ರಜಾಪ್ರಭುತ್ವವನ್ನು ರಚಿಸುವ ಮೂಲಕ ದೇಶದ ಪ್ರತಿಯೊಬ್ಬರ ಬದುಕಿಗೆ ಶಕ್ತಿ ತುಂಬುವಂತಹ ಕೆಲಸವನ್ನು ಮಾಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಸಾಕಷ್ಟು ಶ್ರಮಿಸಿದ್ದಾರೆ. ಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸಂವಿಧಾನವನ್ನು ಪ್ರಶಂಸಿಸುವಂತೆ ಮಾಡಿದ್ದಾರೆ. ನಮ್ಮ ಭಾರತ ದೇಶಕ್ಕೆ ಸಂವಿಧಾನವನ್ನು ನೀಡಿದ ಮಹಾನ್ ವ್ಯಕ್ತಿಯಾದ ಇವರನ್ನು ಪ್ರತಿಯೊಬ್ಬರು ನೆನೆಯಬೇಕು ಎಂದು ತಿಳಿಸಿದರು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ಆಚರಣೆಯ ಅಂಗವಾಗಿ ಕರ್ನಾಟಕ ರಾಜ್ಯದಲ್ಲಿ ಅತೀ ಉದ್ದವಾದ ಮಾನವ ಸರಪಳಿಯ ಮೂಲಕ ಅಧಿಕೃತವಾಗಿ ಪ್ರಜಾಪ್ರಭುತ್ವದ ಅರಿವನ್ನು ಮೂಡಿಸಲಾಗುವುದು. ಮಾನವ ಸರಪಳಿಯು ಬೀದರ್ ಜಿಲ್ಲೆಯಿಂದ ಚಾಮರಾಜನಗರ ಜಿಲ್ಲೆಯವರೆಗೂ ಏಕಕಾಲದಲ್ಲಿ ಜಾಗೃತಿ ಮೂಡಿಸಲಾಗುವುದು. ಮಂಡ್ಯ ಜಿಲ್ಲೆಯಲ್ಲಿ ಮದ್ದೂರಿನ ನಿಡಘಟ್ಟ ಗ್ರಾಮದಿಂದ ಶ್ರೀರಂಗಪಟ್ಟಣದ ಸಿದ್ದಲಿಂಗಾಪುರದ ವರೆಗೂ ಸುಮಾರು 65 ಕಿ.ಮೀ. ವರೆಗೂ ಜಿಲ್ಲಾಡಳಿತ, ಸಂಘ ಸಂಸ್ಥೆಗಳು ಹಾಗೂ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಸೇರಿ ಮಾನವ ಸರಪಳಿಯ ನಿರ್ಮಾಣ ಮಾಡುವ ಮೂಲಕ ಅರಿವು ಮೂಡಿಸಲಾಗುತ್ತಿದೆ. ಕಾರ್ಯಕ್ರಮವನ್ನು ಬಹಳ ಯಶಸ್ವಿಯಾಗಿ ಮೂಡಿಸಿದಂತಹ ಜಿಲ್ಲಾಡಳಿತ, ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳಿಗೆ ಅಭಿನಂದನೆ ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ, ಮಲ್ಲಿಕಾರ್ಜುನ ಬಾಲದಂಡಿ, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಉಪವಿಭಾಗಾಧಿಕಾರಿ ಶಿವಮೂರ್ತಿ, ರೆಡ್‌ಕ್ರಾಸ್ ಸಂಸ್ಥೆಯ ಡಾ.ಮೀರಾಶಿವಲಿಂಗಯ್ಯ ಉಪಸ್ಥಿತರಿದ್ದರು.

ಕಾರು ಡಿಕ್ಕಿ: ಅಜ್ಜಿ, ಒಂದು ವರ್ಷದ ಮೊಮ್ಮಗು ಸಾವು

ಗಣಪತಿ ಪ್ರಸಾದ ಸ್ವೀಕರಿಸಿ ರಸ್ತೆ ದಾಟುತ್ತಿದ್ದಾಗ ದುರಂತ

ಭಾರತಿನಗರ, ಸೆ.15– ಗಣಪತಿ ಪ್ರಸಾದ ಸ್ವೀಕರಿಸಿ ಮನೆಗೆ ಹಿಂತಿರುಗುತ್ತಿದ್ದ ಅಜ್ಜಿ ಮತ್ತು ಒಂದು ವರ್ಷದ ಮೊಮ್ಮಗು ಕಾರು ಡಿಕ್ಕಿಯಿಂದ ಸಾವನ್ನಪ್ಪಿರುವ ಘಟನೆ ಮದ್ದೂರು ತಾಲೂಕಿನ ಹುನನದೊಡ್ಡಿ ಬಳಿ ಸಂಭವಿಸಿದೆ.

ಹುನನದೊಡ್ಡಿಯ ನಿವಾಸಿ ಸಾಕಮ್ಮ(65), ಒಂದು ವರ್ಷ ಮಗು ಧನಿಕ ಎಸ್.ಗೌಡ ಸಾವನ್ನಪ್ಪಿದ್ದು, ಗಾಯಗೊಂಡಿರುವ ಮೂರು ವರ್ಷದ ನಂದನ್.ಎಸ್ ಗೌಡನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮದ್ದೂರು ತಾಲೂಕಿನ ಹುನನದೊಡ್ಡಿ ಗ್ರಾಮದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣೇಶನನ್ನು ಭಾನುವಾರ ಸಂಜೆ ವಿಸರ್ಜಿಸಲಾಗುತ್ತಿತ್ತು. ಈ ವೇಳೆ ಭಕ್ತರಿಗೆ ಪ್ರಸಾದವನ್ನು ವಿತರಿಸಲಾಗುತ್ತಿತ್ತು ಇದೇ ಗ್ರಾಮದ ಶಂಕರ್ ಮತ್ತು ಅಂಜಲಿ ದಂಪತಿ ಮಕ್ಕಳಾದ ಧನಿಕ ಮತ್ತು ನಂದನ್ ಅವರುಗಳು ತಮ್ಮ ಅಜ್ಜಿ ಜೊತೆ ಪ್ರಸಾದ ಸ್ವೀಕರಿಸಲು ತೆರಳಿದ್ದರು. ಅಜ್ಜಿ ಸಾಕಮ್ಮ, ತನ್ನ ಒಂದು ವರ್ಷದ ಮೊಮ್ಮಗುವನ್ನು ಎತ್ತಿಕೊಂಡು, ಮತ್ತೊಂದು ಮಗುವನ್ನು ನಡೆಸಿಕೊಂಡು ಪ್ರಸಾದ ಸ್ವೀಕರಿಸಿ ರಸ್ತೆ ದಾಟುತ್ತಿದ್ದಾಗ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆಯಿತು.

ಇದರಿಂದ ಮೇಲಕ್ಕೆ ಎಸೆಯಲ್ಪಟ್ಟ ಮೊಮ್ಮಗು, ಅಜ್ಜಿ ಸ್ಥಳದಲ್ಲೆ ಸಾವನ್ನಪ್ಪಿದರು. ಮತ್ತೊಂದು ಮಗು ನಂದನ್ ಕೂಡಾ ಗಾಯಗೊಂಡರು. ಕಾರನ್ನು ನಿಲ್ಲಿಸದೆ ಚಾಲಕ ಪರಾರಿಯಾಗಿದ್ದು, ಸಾರ್ವಜನಿಕರ ಸಹಾಯದಿಂದ ಮಳವಳ್ಳಿ ಬಳಿ ಪೊಲೀಸರು ಕಾರನ್ನು ವಶಪಡಿಸಿಕೊಂಡು ಚಾಲಕನನ್ನು ಬಂಧಿಸಿದ್ದಾರೆ.

ಈ ಹೃದಯ ವಿದ್ರಾವಕ ಘಟನೆಯನ್ನು ಕಂಡ ಗ್ರಾಮಸ್ಥರು ಕಂಬನಿ ಮಿಡಿದರೆ, ಪ್ರಸಾದ ಸ್ವೀಕರಿಸಿ ಹಿಂದೆ ಬರುತ್ತಿದ್ದ ಮಗುವಿನ ತಾಯಿ ಕೂಡಾ ಶಾಕ್‌ಗೊಳಗಾಗಿ ಕುಸಿದು ಬಿದ್ದಿದ್ದಾರೆ ಕೆಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ನಾಗಮಂಗಲ ಗಲಭೆ: ಸಿಐಡಿ ತನಿಖೆ ನಡೆಸಲು ಚಿಂತನೆ

ಮಂಡ್ಯ,ಸೆ.15– ನಾಗಮಂಗಲ ಗಲಭೆಗೆ ಸಂಬಂಧಿಸಿದಂತೆ ಸಿಐಡಿ ತನಿಖೆ ಮಾಡಿಸುವ ಬಗ್ಗೆ ಚಿಂತನೆ ನಡೆಯುತ್ತಿದ್ದು, ಯಾರಿಂದ ತನಿಖೆ ಮಾಡಬೇಕೆಂದು ಶೀಘ್ರದಲ್ಲೇ ತೀರ್ಮಾನಿಸಿ ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೂ ಚರ್ಚೆ ನಡೆಸುವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಲಭೆ ವೇಳೆ ಕೇರಳದವರು ಬಂದು ಹೋಗಿಲ್ಲ. ಕೇರಳದವರು ನಾಗಮಂಗಲದ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಗಲಭೆಯಲ್ಲಿ ಭಾಗಿಯಾಗಿದ್ದಾರೆಂದು ಪೊಲೀಸರು ಬಂಧಿಸಿದ್ದಾರೆ. ಗಲಭೆ ಬಗ್ಗೆ ಸಂಪೂರ್ಣ ತನಿಖೆ ಆಗುತ್ತಿದೆ ಎಂದರು.

ಗಲಭೆಯಲ್ಲಿ ಪಿಎಫ್ಐ ಸಂಘಟನೆಯವರಿದ್ದಾರೆ ಎನ್ನುವುದಕ್ಕೆ ಆಗುವುದಿಲ್ಲ. ಎಲ್ಲದಕ್ಕೂ ಊಹಾಪೋಹಗಳು ಬೇಡ. ನನಗೆ ಇದನ್ನು ಬೆಳೆಸೋದಕ್ಕಿಂತ ಶಾಂತಿ ಮಾಡಬೇಕು ಎಂಬುದೇ ಉದ್ದೇಶ ಯಾರು ಇದ್ದಾರೆ ಅಂತಾ ಕಂಡು ಹಿಡಿದು ಹೇಳುತ್ತೇವೆ. ಈ ಗಲಭೆಯ ಬಗ್ಗೆ ಸಂಪೂರ್ಣ ರಿಪೋರ್ಟ್ ಕೊಡಲು ಹೇಳಿದ್ದೇನೆ. ಒಂದು ಕಡೆ ಗಣಪತಿ ಬಂದಿದ್ದು, ಹೋಗಿದ್ದು. ಇನ್ನೊಂದು ಕಡೆ ಎರಡು ಕೋಮಿನ ನಡುವೆ ಘರ್ಷಣೆ ಆಗಿದ್ದು ವರದಿ ಕೇಳಿದ್ದೇನೆ. ಪೊಲೀಸ್ ಠಾಣೆ ಬಳಿ ಬಂದಾಗ ಕಲ್ಲು ಹೊಡೆದಿದ್ದು, ಬೆಂಕಿ ಹಾಕಿದ್ದು ಯಾರು ಅಂತಾ ವರದಿಯಲ್ಲಿ ಗೊತ್ತಾಗಲಿದೆ ಎಂದು ತಿಳಿಸಿದರು.

ಸದ್ಯ ಎರಡು ಕೋಮಿನ ಜನರು ಎಲ್ಲಾ ಹಬ್ಬಗಳನ್ನು ಆಚರಿಸಬೇಕೆಂದು ತೀರ್ಮಾನ ಮಾಡಲಾಗಿದೆ. ಇಂದು ನಾಗಮಂಗಲದಲ್ಲಿ ಎರಡು ಮೂರು ಕಡೆ ಗಣಪತಿ ವಿಸರ್ಜನೆ ಮಾಡಿದ್ದಾರೆ ಎಂದರು.

ಅಲ್ಲಿಗೆ ಮುಸ್ಲಿಮರು ಹೋಗಿ ಜ್ಯೂಸ್ ಕೊಟ್ಟು, ಗಣಪತಿಗೆ ಹಾರ ಹಾಕುತ್ತಾರೆ. ನಾಗಮಂಗಲದಲ್ಲಿ ಶಾಂತಿಯಾಗಿ ಇದೆ. ನಾಳೆ ಮುಸ್ಲಿಮರ ಹಬ್ಬವೂ ಆಗುತ್ತದೆ. ಮಂಗಳವಾರದಿಂದ ಮತ್ತೆ ಗಣಪತಿ ವಿಸರ್ಜನೆ ಆಗುತ್ತದೆ ಎಂದು ಹೇಳಿದರು.

ಸಣ್ಣ ಪುಟ್ಟ ಜಗಳವನ್ನು ಯಾರು ದುರುಪಯೋಗ ಮಾಡಿಕೊಂಡಿದ್ದಾರೆಂದು ನೋಡಬೇಕು. ಪೊಲೀಸರು ನಿರ್ದೇಶನ ನೀಡುವ ಸ್ಥಳಗಳಲ್ಲಿ ಮೆರವಣಿಗೆ ಮಾಡಬೇಕು. ಎಲ್ಲೂ ಕೂಡ ಯಾರಿಗೂ ನೋವಾಗದ ರೀತಿ ನೋಡಿಕೊಳ್ಳಬೇಕು. ಮಸೀದಿಯ ಮುಂದೆಯೇ ಹೆಚ್ಚು ಹೊತ್ತು ನಿಂತು ಕೂಗಬಾರದು. ಹೀಗಾಗಿ ಎಲ್ಲರೂ ಒಂದಾಣಿಕೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪಿಎಚ್‌ಡಿ ಪದವಿ

ಮೈಸೂರು, ಸೆ. 15–ಡಾ.ಹೆಚ್.ನಾಗರಾಜ ಅವರ ಮಾರ್ಗದರ್ಶನದಲ್ಲಿ ಎಂ. ಪ್ರಮೀಳ ಅವರು ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ನಾಳೆ ವಿಶ್ವಕರ್ಮ ಜಯಂತಿ

ಮಂಡ್ಯ, ಸೆ.15– ಮಂಡ್ಯ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆಯ ಸಂಯುಕ್ತಾಶ್ರಯದಲ್ಲಿ 2024–25 ನೇ ಸಾಲಿನ ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ಸೆ.17 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರು ಹಾಗೂ ಸಂಸದರು ಮಂಡ್ಯ ಲೋಕಸಭಾ ಕ್ಷೇತ್ರ ಹೆಚ್.ಡಿ.ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ವಹಿಸಲಿದ್ದಾರೆ.

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸದಸ್ಯತ್ವ ನೋಂದಣಿ ಬಿರುಸು



ಮಂಡ್ಯ, ಸೆ.15– ರಾಜ್ಯ ಯುವ ಕಾಂಗ್ರೆಸ್ ಚುನಾವಣೆಯ ಸದಸ್ಯತ್ವ ನೋಂದಣಿ ಮತ್ತು ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ತಾಲೂಕು, ಜಿಲ್ಲೆ ಹಾಗೂ ರಾಜ್ಯದಾದ್ಯಂತ ಬಿರುಸಿನಿಂದ ನಡೆಯುತ್ತಿದೆ.

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷಗಾದಿ ಆಕಾಂಕ್ಷಿಗಳು ತಮ್ಮ ಸ್ವಕ್ಷೇತ್ರ ಸೇರಿದಂತೆ ರಾಜ್ಯಾದ್ಯಂತ ಬಿರುಸಿನ ಪ್ರಚಾರ ಕೈಗೊಂಡು ಸದಸ್ಯತ್ವವನ್ನು ನೊಂದಣಿ ಮಾಡಿಸುವ ಮೂಲಕ ಪಕ್ಷ ಸಂಘಟನೆ ಮಾಡುತ್ತಿದ್ದು, ತಮ್ಮ ಪರವಾಗಿಯೇ ಮತ ಹಾಕಿಸಿಕೊಂಡು ಗೆಲ್ಲುವ ಕಸರತ್ತು ನಡೆಸುತ್ತಿದ್ದಾರೆ.


ಎಐಸಿಸಿ ಯುವ ಕಾಂಗ್ರೆಸ್ ಘಟಕದ ಸೂಚನೆ ಮತ್ತು ಮಾರ್ಗದರ್ಶಿಯನ್ವಯ ಈ ಸದಸ್ಯತ್ವ ನೋಂದಣಿ ಮತ್ತು ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದು, ಹಲವಾರು ಯುವ ಪ್ರತಿಭೆಗಳು ಕಣಕ್ಕಿಳಿದಿದ್ದು, ತಮ್ಮ ಅದೃಷ್ಟವನ್ನು ಪರೀಕ್ಷೆಗೊಡ್ಡಿದ್ದಾರೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಹಿಂಡಸಹಳ್ಳಿಯ ರೈತ ಕುಟುಂಬದ ಮಂಜುನಾಥ್.ಹೆಚ್.ಎಸ್. ಅವರು ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದು, ತಮ್ಮ ಸುಕ್ಷೇತ್ರ ಮಂಡ್ಯ ಜಿಲ್ಲೆ ಮತ್ತು ರಾಜ್ಯದಲ್ಲಿ ಪ್ರವಾಸ ಕೈಗೊಂಡು ಸದಸ್ಯತ್ವ ನೋಂದಣಿ ಮಾಡಿಸಿ ಪಕ್ಷದ ಕೈ ಬಲಪಡಿಸುವುದರೊಂದಿಗೆ ಅಧ್ಯಕ್ಷಗಾದಿಗೂ ಮತವನ್ನು ಪಡೆಯುತ್ತಿದ್ದಾರೆ.

ಎನ್‌ಎಸ್‌ಯುಐ ವಿದ್ಯಾರ್ಥಿ ಸಂಘಟನೆ ಮೂಲಕ ರಾಜಕೀಯ ರಂಗಕ್ಕೆ ಕಾಲಿಟ್ಟಿರುವ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರ ಆಶೀರ್ವಾದದೊಂದಿಗೆ ಬಿರುಸಿನ ನೋಂದಣಿ ಮಾಡಿಸುತ್ತಿದ್ದು, ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅನಗತ್ಯ ವಿಚಾರಗಳಿಗೆ ತಲೆಕೆಡಿಸಿಕೊಳ್ಳದೆ ಪುಸ್ತಕ ಓದಿದರೆ ಜ್ಞಾನ ವೃದ್ಧಿಯಾಗುತ್ತದೆ

ರಾಜ್ಯಸಭಾ ಸದಸ್ಯೆ, ಇನ್ಫೋಸಿಸ್‌ನ ಡಾ.ಸುಧಾಮೂರ್ತಿ ಅಭಿಮತ



ರಾಜ್ಯ ಸಭಾ ಸದಸ್ಯರೂ ಆದ ಇನ್ಫೋಸಿಸ್‌ನ ಡಾ.ಸುಧಾಮೂರ್ತಿ ತಮ್ಮ 300ನೇ ಪುಸ್ತಕ ಬಿಡುಗಡೆ ಮಾಡಿದರು. ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಮೈಸೂರು ಬುಕ್ ಕ್ಲಬ್ಸ್‌ನ ಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಗೋಪಿ(ನಾಯಿ), ಪುಟಾಣಿಗಳು, ಪೋಷಕರು ಉಪಸ್ಥಿತರಿದ್ದರು.

ಮೈಸೂರು, ಸೆ.15(ಎಂಕೆ)– ಸಾಹಿತ್ಯದಷ್ಟು ಸುಂದರವಾದದ್ದು ಮತ್ಯಾವುದೂ ಇಲ್ಲ. ಅನಗತ್ಯ ವಿಚಾರಗಳಿಗೆ ತಲೆಕೆಡಿಸಿಕೊಳ್ಳದೆ, ಅವುಗಳ ಬಗ್ಗೆ ಮಾತನಾಡದೆ ಪುಸ್ತಕಗಳ ಓದಿದರೆ ಜ್ಞಾನ ವೃದ್ಧಿಯಾಗುತ್ತದೆ ಎಂದು ತಿಳಿಸಿಕೊಟ್ಟ ರಾಜ್ಯಸಭಾ ಸದಸ್ಯರೂ ಆದ ಇನ್ಫೋಸಿಸ್ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷೆ ಡಾ.ಸುಧಾಮೂರ್ತಿ, ಮಕ್ಕಳಲ್ಲಿನ ಪ್ರತಿಭೆ ಗುರ್ತಿಸಿ ಪ್ರೋತ್ಸಾಹಿಸಿ ಎಂದು ತಿಳಿಸಿದರು.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ಸ್ ಹಾಗೂ ಮೈಸೂರು ಚಿಲ್ಡ್ರನ್ಸ್ ಬುಕ್ ಕ್ಲಬ್ಸ್ ವತಿಯಿಂದ ಆಯೋಜಿಸಿದ್ದ ತಮ್ಮ 300ನೇ 'GRANDAPA'S BAG OF STORIES' ಪುಸ್ತಕ ಬಿಡುಗಡೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚಿಕ್ಕ ವಯಸ್ಸಿನಲ್ಲಿ ನಮ್ಮ ತಾಯಿ ನನ್ನನ್ನು ಮೊದಲು ಸಂಗೀತ ತರಗತಿಗೆ ಸೇರಿಸಿದ್ರು. ಆದರೆ ನಾನು 8 ದಿನಕ್ಕೆ ಸಂಗೀತ ಕ್ಲಾಸ್ ಬಿಟ್ಟೆ, ಪೇಟಿಂಗ್ ಕ್ಲಾಸ್‌ಗೆ ಸೇರಿಸಿದ್ರು ಅದನ್ನು 15 ದಿನಕ್ಕೆ ಬಿಟ್ಟೆ, ಲಲಿತ ಕಲೆ ತರಬೇತಿಗೂ ಸೇರಿಸಿದ್ರು ಅದನ್ನು ಮೂರೆ ದಿನಕ್ಕೆ ಬಿಟ್ಟೆ ಕಡೆಗೆ ನಾನು ಪ್ರಬಂಧ ಬರೆಯುತ್ತಿದ್ದನ್ನು ಗಮನಿಸಿದ ನಮ್ಮಮ್ಮ ದಿನಚರಿಯನ್ನು ಬರೆಯುವಂತೆ ತಿಳಿಸಿದರು. ಅದರಂತೆ ಒಂದು ವರ್ಷಗಳ ಬರೆಯುವಂತೆ ಹೇಳುತ್ತಿದ್ದರು. ನಂತರ ಅದೇ ನನಗೆ ಅಭ್ಯಾಸವಾಯಿತು. ಬರವಣಿಗೆಯೇ ನನ್ನ ಭಾವನೆಗಳ ಅಭಿವ್ಯಕ್ತ ಸಾಧನ. ಶಬ್ದಗಳ ಮಾಯಾಜಾಲದಲ್ಲಿ ಬರೆದರಷ್ಟೇ ನನಗೆ ಸಂತೋಷ. ಇದುವರೆಗೆ ನಾನೇದರೂ ಸಾಹಿತ್ಯದಲ್ಲಿ ಕೃಷಿ ಮಾಡಿದ್ದರೆ ಅದು ನಮ್ಮ ತಾಯಿಗೆ ಸಲ್ಲುತ್ತದೆ ಎನ್ನುತ್ತಲೇ ಮಕ್ಕಳಲ್ಲಿ ಯಾವ ಪ್ರತಿಭೆ ಇದೆ ಎಂಬುದನ್ನು ತಾಯಿ ಮತ್ತು ಶಿಕ್ಷಕರು ಕಂಡು ಹಿಡಿದು ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

1979ರಲ್ಲಿ ಅಮೆರಿಕಾಗೆ ಹೋಗಿದ್ದರ ಅನುಭವ ನನ್ನ ಮೊದಲ ಪ್ರವಾಸ ಕಥನವಾಗಿದೆ. ಬರವಣಿಗೆ ಆರಂಭಿಸಿದ ನಂತರ ಇಂಜಿನಿಯರಿಂಗ್ ಓದಿದ್ದವರೂ ಸಾಹಿತ್ಯ ಬರೆಯಬಹುದು ಅನಿಸಿತು. ಅದರಲ್ಲೂ ಮುಖ್ಯವಾಗಿ ಓದುವುದು ನನ್ನ ಅತೀ ಮುಖ್ಯ ಹವ್ಯಾಸವಾಗಿದೆ. ಕೊರೊನಾ ಸಂದರ್ಭದಲ್ಲಿ ಗೋಪಿ(ನಾಯಿ)ಯೊಂದಿಗೆ ಹೆಚ್ಚು ಕಾಲ ಇರಲು ಸಾಧ್ಯವಾಯಿತು. ಆತ ತುಂಟಾಗಳನ್ನು ನೋಡುತ್ತಲೇ ಗೋಪಿ ಹೆಸರಿನಲ್ಲಿ 4 ಪುಸ್ತಕಗಳ ಬರೆದಿದ್ದೇನೆ ಎಂದು ತಮ್ಮಲ್ಲಿರುವ ಸಾಹಿತ್ಯಾಭಿಮಾನ ತೋರಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಹಾಗೂ ಮೈಸೂರು ಬುಕ್ ಕ್ಲಬ್ಸ್‌ನ ಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಸಂವಾದ ನಡೆಸಿಕೊಟ್ಟರು. ಕಾರ್ಯಕ್ರಮ ವಿಶೇಷ ಅತಿಥಿಯಾಗಿದ್ದ ಗೋಪಿ (ನಾಯಿ) ಎಲ್ಲರ ಆಕರ್ಷಣೆಯಾಗಿತ್ತು.

300ನೇ ಟೈಟಲ್ ಪುಸ್ತಕ...

'GRANDAPA'S BAG OF STORIES' ನನ್ನ 46ನೇ ಪುಸ್ತಕವಾಗಿದ್ದು, 300ನೇ ಟೈಟಲ್ ಪುಸ್ತಕವಾಗಿದೆ. 44 ವರ್ಷದಲ್ಲಿ 46 ಪುಸ್ತಕಗಳನ್ನು ಬರೆದಿದ್ದು, ಅವುಗಳು 23 ಭಾಷೆಯಲ್ಲಿ ಭಾಷಾಂತರಗೊಂಡಿವೆ. 35 ಇಂಗ್ಲಿಷ್, 34 ಹಿಂದಿ, 30 ಮರಾಠಿ, 33 ತೆಲುಗು, 27 ಕನ್ನಡ, 13 ಬ್ರೈಲ್ ಇಂಗ್ಲಿಷ್, 12 ಬ್ರೈಲ್ ಮರಾಠಿ, 4 ಟಿಬೆಟಿಯನ್, 2 ಬೆಂಗಾಲಿ, 1 ಕಾಶ್ಮೀರಿ, 1 ಡೊಂಗ್ರಿ, 2 ಸಿಂಧಿ, 2 ಸಂಸ್ಕೃತ, 16 ಮಲೆಯಾಳಂ, 28 ಗುಜರಾತಿ, 5 ಅಸ್ಸಾಮಿ ಎಲ್ಲಾ ಒಟ್ಟು ಮೂನ್ನೂರಾಗಲಿದ್ದು, 300ನೇ ಟೈಟಲ್ ಇದಾಗಿದೆ. ಗೋಪಿ (ನಾಯಿ) ಮೇಲೆ ಇಂಗ್ಲಿಷ್‌ನಲ್ಲಿ 4 ಪುಸ್ತಕ ಬರೆದಿದ್ದು, ಅದರ ಅನುವಾದ ಸೇರಿ 23 ಪುಸ್ತಕಗಳಾಗಿವೆ. ಹಾಗಾಗಿ ಗೋಪಿ ನನ್ನ ವಿಶೇಷ ಪಾರ್ಟ್ನರ್ ಆಗಿದ್ದಾನೆ.

- ಡಾ.ಸುಧಾಮೂರ್ತಿ, ರಾಜ್ಯಸಭಾ ಸದಸ್ಯರು ಹಾಗೂ ಇನ್ಫೋಸಿಸ್ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷರು

ಶ್ರೀ ಗಾನಯೋಗಿ ಕಲಾ ಟ್ರಸ್ಟ್‌ನಿಂದ ವಿಶೇಷ ಸಂಗೀತ ತರಗತಿಗಳು

ಮೈಸೂರು,ಸೆ.15–ಮೈಸೂರಿನ ಹೆಬ್ಬಾಳು ಬಡಾವಣೆಯ ಶ್ರೀ ಗಾನಯೋಗಿ ಕಲಾ ಟ್ರಸ್ಟ್ ವತಿಯಿಂದ ಕುವೆಂಪುನಗರದ ಭಾನವಿ ಆಸ್ಪತ್ರೆ ಸಮೀಪದ ಎಸ್‌ಜಿಕೆಟಿ ಸಂಗೀತ ಶಾಲೆಯಲ್ಲಿ ಗಾನಯೋಗಿ ಪಂಡಿತ್ ಪುಟ್ಟರಾಜ ಗವಾಯಿಗಳವರ ಶಿಷ್ಯರಿಂದ ಹಿಂದೂಸ್ತಾನಿ ಸಂಗೀತ ಹಾಡು ಗಾರಿಕೆ, ತಬಲ ವಾದ್ಯ, ಹಾರ್ಮೋನಿಯಂ, ಸುಗಮ ಸಂಗೀತ, ಶಾಸ್ತ್ರ ವಿಭಾಗದ ತರಗತಿಗಳು ಆರಂಭಗೊಂಡಿವೆ. ಹೆಚ್ಚಿನ ಮಾಹಿತಿಗೆ ಮೊ. 7892658046 ಸಂಪರ್ಕಿಸಿ.

ಶ್ರೀ ನಾರಾಯಣ ಗುರು ಮೆರವಣಿಗೆಯಲ್ಲಿ ಸೋಲೂರು ಶ್ರೀಗಳು ಭಾಗಿ



ಮೈಸೂರು ಜಿಲ್ಲಾಡಳಿತದ ವತಿಯಿಂದ ಶನಿವಾರ ಆಯೋಜಿಸಿದ್ದ ಶ್ರೀ ನಾರಾಯಣ ಗುರು ಅವರ 170ನೇ ಜಯಂತೋತ್ಸವ ಪ್ರಯುಕ್ತ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಕಲಾಮಂದಿರದವರೆಗೆ ನಡೆದ ಮೆರವಣಿಗೆಗೆ ಸೋಲೂರು ಮಠದ ಶ್ರೀ ವಿಖ್ಯಾತನಂದ ಸ್ವಾಮೀಜಿ ಚಾಲನೆ ನೀಡಿದರು. ಈ ವೇಳೆ ಉದ್ಯಮಿಗಳಾದ ಎಸ್.ಶ್ರೀಕಾಂತ್, ಪೋತರಾಜ್ ಸೇರಿದಂತೆ ಈಡಿಗ ಸಮುದಾಯದ ಹಲವು ಮುಖಂಡರು ಸ್ವಾಮೀಜಿಯವರೊಂದಿಗೆ ಮೆರವಣಿಗೆಯಲ್ಲಿ ಸಾಗಿದರು.

ಮೀರತ್‌ನಲ್ಲಿ ಮೂರು ಅಂತಸ್ತಿನ ಕಟ್ಟಡ ಕುಸಿತ: ಮೃತರ ಸಂಖ್ಯೆ 9ಕ್ಕೆ ಏರಿಕೆ

ಮೀರತ್, ಸೆ.15– ಉತ್ತರ ಪ್ರದೇಶದ ಮೀರತ್ ಜಿಲ್ಲೆಯಲ್ಲಿ ಮೂರು ಅಂತಸ್ತಿನ ಮನೆಯೊಂದು ಕುಸಿದು ಬಿದ್ದ ಪರಿಣಾಮ ಮೃತಪಟ್ಟವರ ಸಂಖ್ಯೆ ಒಂಬತ್ತಕ್ಕೆ ಏರಿದ್ದು, ಸ್ಥಳದಲ್ಲಿ ರಕ್ಷಣಾ ಕಾರ್ಯ ಇನ್ನೂ ನಡೆಯುತ್ತಿದೆ ಎಂದು ಜಿಲ್ಲಾಡಳಿತ ಭಾನುವಾರ ತಿಳಿಸಿದೆ. ಅವಶೇಷಗಳಡಿ ಸಿಲುಕಿದ್ದ ಆರು ವರ್ಷದ ಬಾಲಕ ಸೋಫಿಯಾನ್‌ನನ್ನು ರಕ್ಷಿಸಲಾಗಿದ್ದು, ಆತನ ಆರೋಗ್ಯ ಸ್ಥಿರವಾಗಿದೆ. ಒಬ್ಬ ವ್ಯಕ್ತಿ ಇನ್ನೂ ಅವಶೇಷಗಳಡಿ ಸಿಲುಕಿರುವ ಆತಂಕವಿರುವುದಾಗಿ ಜಿಲ್ಲಾಡಳಿತ ಮಾಹಿತಿ ನೀಡಿದೆ. ಘಟನೆಯಲ್ಲಿ ಗಾಯಗೊಂಡಿದ್ದ ನಾಲ್ವರು ಲಾಲಾ ಲಜಪತ್ ರಾಯ್ ಸ್ಮಾರಕ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶನಿವಾರ ಸಂಜೆ ಮೀರತ್‌ನ ಜಾಕಿರ್ ಕಾಲೋನಿಯಲ್ಲಿ ಸಂಭವಿಸಿದ ಈ ದುರ್ಘಟನೆಯಲ್ಲಿ 12 ಮಂದಿ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದರು. ಇವರಲ್ಲಿ 9 ಮಂದಿ ಸಾವನ್ನಪ್ಪಿದ್ದಾರೆ.

ಮೊಬೈಲ್‌ಗೆ ಜಿಪಿಎಸ್ ಚಿಪ್ ಬದಲು ಭಾರತದ ನಾವಿಕ್ ಚಿಪ್ ಬರಲಿದೆ

ಇಸ್ರೋ ನ್ಯಾವಿಗೇಷನ್ ಸಿಸ್ಟಮ್ ಏರಿಯಾ ಸಮೂಹ ನಿರ್ದೇಶಕಿ ಎಂ.ಎ.ರೂಪ ಮಾಹಿತಿ

ಮೈಸೂರು, ಸೆ.15(ಎಂಕೆ)– ಮುಂದಿನ ದಿನಗಳಲ್ಲಿ ಎಲ್ಲರ ಮೊಬೈಲ್‌ಗಳಿಗೆ ಅಮೆರಿಕದ ಜಿಪಿಎಸ್ (ಗ್ಲೋಬಲ್ ನೇವಿಗೇಶನ್ ಸ್ಯಾಟಲೈಟ್ ಸಿಸ್ಟಂ)ಚಿಪ್ ಬದಲು ಭಾರತದ ನಾವಿಕ್ ಚಿಪ್‌ಗಳು ಬರಲಿವೆ ಎಂದು ಇಸ್ರೋ ನ್ಯಾವಿಗೇಷನ್ ಸಿಸ್ಟಮ್ ಏರಿಯಾ ಸಮೂಹ ನಿರ್ದೇಶಕಿ ಎಂ.ಎ.ರೂಪ ತಿಳಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಜೇಷನ್, ಮೈಸೂರು ವತಿಯಿಂದ ಆಯೋಜಿಸಿದ್ದ ವಿಡಿಒ ಟೆಕ್ನೋ ಲೈಟ್ ಡೇ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಪೂರ್ಣ ಸ್ವಾವಲಂಬನೆ ಸಾಧಿಸಿದೆ. ಗೂಗಲ್ ಜಿಪಿಎಸ್‌ನಂತೆಯೇ ಸ್ವದೇಶಿ ನಾವಿಕ ವ್ಯವಸ್ಥೆ ಬಂದಿದ್ದು, ಇದಕ್ಕಾಗಿಯೇ 8 ಉಪಗ್ರಹಗಳನ್ನು ಮೀಸಲಿಡಲಾಗಿದೆ ಎಂದರು.

ನ್ಯಾವಿಗೇಷನ್ ಸಿಸ್ಟಮ್ ನಿರ್ವಹಣೆಯಲ್ಲಿ ಸದ್ಯಕ್ಕೆ 8 ಉಪಗ್ರಹಗಳು ಕಾರ್ಯನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ 24 ಉಪಗ್ರಹಗಳ ಬಳಕೆಗೆ ಸಿದ್ದತೆಗಳು ನಡೆದಿವೆ. ಈಗಿರುವ 8 ಉಪಗ್ರಹಗಳಲ್ಲಿ ಭಾರತ ಹಾಗೂ ಭಾರತದ ಸುತ್ತಲೂ ಸುಮಾರು 1,500 ಕಿಲೋ ಮೀಟರ್ ಸುತ್ತಳತೆಯ ಮಾಹಿತಿಯನ್ನು ಅತ್ಯಂತ ನಿಖರವಾಗಿ ನೀಡಲಾಗುತ್ತಿದೆ. ಮುಂದೆ ಬರುವ ಎಲ್ಲಾ ಮೊಬೈಲ್‌ಗಳಲ್ಲಿ ಜಿಪಿಎಸ್ ಚಿಪ್ ಬದಲು ಭಾರತದ ನಾವಿಕ್ ಚಿಪ್ ಇರಲಿದೆ ಎಂದು ಮಾಹಿತಿ ನೀಡಿದರು.



ವಿಡಿಒ ಟೆಕ್ನೋ ಲೈಟ್ ಡೇ ಕಾರ್ಯಕ್ರಮದಲ್ಲಿ 'ಬುದ್ಧ ಪ್ರಜ್ಞಾ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಇಸ್ರೋ ನ್ಯಾವಿಗೇಷನ್ ಸಿಸ್ಟಮ್ ಏರಿಯಾ ಸಮೂಹ ನಿರ್ದೇಶಕಿ ಎಂ.ಎ.ರೂಪ, ಜಲಸಂಪನ್ಮೂಲ ಇಲಾಖೆ ನಿವೃತ್ತ ಕಾರ್ಯದರ್ಶಿ ಎಸ್.ಜೆ.ಚನ್ನಬಸಪ್ಪ, ಇಂಜಿನಿಯರ್ ಮಂಜುನಾಥ ಪ್ರಸಾದ್ ಮತ್ತಿತರರಿದ್ದರು.

ದೇಶದ ರೈತರು ಹಾಗೂ ಸಾರ್ವಜನಿಕರ ಏಳಿಗೆಗಾಗಿ ಸ್ಥಾಪನೆಯಾದ ಇಸ್ರೋ, ಬೇರೆ ದೇಶಗಳ ಬಾಹ್ಯಾಕಾಶ ಸಂಸ್ಥೆಗಳಿಗಿಂತ ವಿಭಿನ್ನವಾಗಿದೆ. ಬೇರೆ ದೇಶಗಳಲ್ಲಿ ರಕ್ಷಣೆ ಮತ್ತು ತಂತ್ರಜ್ಞಾನಕ್ಕೆ ಬಾಹ್ಯಾಕಾಶ ಸಂಸ್ಥೆ ಆರಂಭವಾದರೆ, ಇಸ್ರೋ ಶುರುವಾಗಿದ್ದೇ ರೈತರಿಗಾಗಿ. ಹಾಗೆಯೇ ಮೀನುಗಾರರಿಗೂ ಅನುಕೂಲವಾಗುವಂತೆ ಉಪಗ್ರಹಗಳಿಂದ ಮಾಹಿತಿ ಒದಗಿಸಲಾಗುತ್ತಿದೆ. ಗೂಗಲ್ ಪೋರ್ಟಲ್‌ನಂತೆ ಇಸ್ರೋ ನಿರ್ಮಿತ ಭುವನ್ ಪೋರ್ಟಲ್ ಇದ್ದು, ದೇಶದ ಎಲ್ಲಾ ಮಾಹಿತಿಯೂ ದೊರೆಯಲಿದೆ. ಭೂ ನಿಧಿ ಪೋರ್ಟಲ್ ಮೂಲಕ ಸರ್ಕಾರದ ವಿವಿಧ ಇಲಾಖೆಗಳ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಪುಸ್ತಕ ಬಿಡುಗಡೆ ಮತ್ತು ಪ್ರಶಸ್ತಿ ಪ್ರದಾನ: ಇದೇ ವೇಳೆ ಲೇಖಕರಾದ ಡಿ.ಎನ್.ಹರ್ಷ ಮತ್ತು ರೇಖಾ ಶಿವರಾಮು ರಚಿತ 'ಬುದ್ಧ ಪ್ರಜ್ಞಾ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಬಳಿಕ ಲೋಕೋಪಯೋಗಿ ಇಲಾಖೆ ನಿವೃತ್ತ ಅಧೀಕ್ಷಕ ಇಂಜಿನಿಯರ್ ಆರ್.ಕೆ. ರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂ.ಎಸ್.ಅಶ್ವಿನಿ ಲಕ್ಷ್ಮಯ್ಯ ಹಾಗೂ ಈಗಲ್‌ಬರ್ಗ್ ಇಂಡಿಯಾ ಪ್ರೈ.ಲಿ.ನ ಪ್ರಾಜೆಕ್ಟ್ ಇಂಜಿನಿಯರ್ ಎಸ್.ರಾಧಾಕೃಷ್ಣ ಅವರಿಗೆ 'ವಿಡಿಒ–ಕರುನಾಡ ಅಭಿಯಂತರ–2024' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹಾಗೆಯೇ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ, ಸೈನ್ಸ್ ಮಾಡೆಲ್ ಮೇಕಿಂಗ್ ಸ್ಪರ್ಧೆಗಳಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಜೊತೆಗೆ ಉಚಿತ ಆರೋಗ್ಯ ಆರೋಗ್ಯ ತಪಾಸಣೆ ಹಾಗೂ ಮಿತ್ರ ಸಿಂಧು ಕರೋಕೆ ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಮೈಸೂರು ಗಾಂಧಿನಗರದ ಉರಿ ಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಜಲಸಂಪನ್ಮೂಲ ಇಲಾಖೆ ನಿವೃತ್ತ ಕಾರ್ಯದರ್ಶಿ ಎಸ್.ಜೆ.ಚನ್ನಬಸಪ್ಪ, ಇಂಜಿನಿಯರ್ ಮಂಜುನಾಥ ಪ್ರಸಾದ್, ಮೈಸೂರು ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವ ಮೂರ್ತಿ, ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗ ನೈಜೇಷನ್ ಅಧ್ಯಕ್ಷ ಎಲ್.ಶಿವಪ್ರಸಾದ್, ಕಾರ್ಯ ದರ್ಶಿ ಕೆ.ಗಣೇಶ್, ನಿರ್ದೇಶಕ ಡಾ.ಹೆಚ್. ಸಿ.ಚೌಡಯ್ಯ ಮತ್ತಿತರರಿದ್ದರು.

ಮಡಿಕೇರಿಯಲ್ಲಿ 72.2 ಕಿಮೀ ಮಾನವ ಸರಪಳಿ

ಪ್ರಜಾಪ್ರಭುತ್ವ ದಿನಾಚರಣೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಚಾಲನೆ


ಮಡಿಕೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಮಾನವ ಸರಪಳಿಗೆ ಚಾಲನೆ ನೀಡಿದರು.

ಮಡಿಕೇರಿ, ಸೆ.15–ಪ್ರಜಾಪ್ರಭುತ್ವ ಬಲಪಡಿಸಿ ಅದರ ಮೌಲ್ಯಗಳನ್ನು ನಾಡಿನುದ್ದಕ್ಕೂ ಪಸರಿಸುವ ವಿಶಾಲ ದೃಷ್ಟಿಕೋನದಡಿ ಭಾನುವಾರ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಸಂಪಾಜೆಯಿಂದ ಶಿರಂಗಾಲದವರೆಗಿನ 72.2 ಕಿ.ಮೀ. ಮಾನವ ಸರಪಳಿ ರಚಿಸುವ ಮೂಲಕ ಯಶಸ್ವಿಗೊಳಿಸಲಾಯಿತು.

ಜಿಲ್ಲಾಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ ಪ್ರಜಾಪ್ರಭುತ್ವ ದಿನಾಚರಣೆಗೆ ನಗರದ ಫೀ.ಮಾ.ಕಾರ್ಯಪ್ಪ ಮತ್ತು ಗುಡ್ಡೆಮನೆ ಅಪ್ಪಯ್ಯ ಗೌಡರ ವೃತ್ತದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಗಿಡ ನೆಡುವ ಮೂಲಕ ಚಾಲನೆ ನೀಡಿದರು.

ಬೃಹತ್ ಮಾನವ ಸರಪಳಿ: ಈ ಸಂದರ್ಭ ಉಸ್ತುವಾರಿ ಸಚಿವ ಭೋಸರಾಜು, ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಅಪರ ಜಿಲ್ಲಾಧಿಕಾರಿ ಐಶ್ವರ್ಯ, ಎಸ್‌ಪಿ ಕೆ.ರಾಮರಾಜನ್, ಎಎಸ್‌ಪಿ ಸುಂದರ ರಾಜ್, ಜಿಪಂ ಸಿಇಒ. ವಿನಾಯಕ ನರ್ವಾಡೆ, ಸಮಾಜ ಕಲ್ಯಾಣ ಇಲಾಖೆ ಅಪರ ನಿರ್ದೇಶಕ ರಾಜೇಶ್‌ಗೌಡ, ವಿದ್ಯಾರ್ಥಿಗಳು, ಅಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಪ್ರಮುಖರೊಂದಿಗೆ ಕೈ ಕೈ ಜೋಡಿಸುವುದರೊಂದಿಗೆ ಬೃಹತ್ ಮಾನವ ಸರಪಳಿ ರಚನೆಗೆ ಸಾಕ್ಷಿಯಾದರು.

ಬೈಕ್ ಜಾಥಾ: ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆ ಶಿರಂಗಾಲದಿಂದ ಮಡಿಕೇರಿ ಹಾಗೂ ಸಂಪಾಜೆಯಿಂದ ಮಡಿಕೇರಿವರೆಗೆ ಆಯಾ ವ್ಯಾಪ್ತಿಯ ಡಿವೈಎಸ್‌ಪಿಗಳ ನೇತೃತ್ವದಲ್ಲಿ ಬೈಕ್ ಜಾಥಾ ನಡೆಸಲಾಯಿತು. ಜಾಥಾದಲ್ಲಿ ಬಂದರು ತಹಸೀಲ್ದಾರ್ ಪ್ರವೀಣ್ ಮೂಲಕ ಪ್ರಜಾಪ್ರಭುತ್ವ ದಿನಾಚರಣೆ ಧ್ವಜವನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ಹಸ್ತಾಂತರಿಸಿದ್ದು ಗಮನ ಸೆಳೆಯಿತು. ಇದೇ ವೇಳೆ ಮಾತನಾಡಿದ ಶಾಸಕ ಎ.ಎಸ್.ಪೊನ್ನಣ್ಣ, ಪ್ರಜಾಪ್ರಭುತ್ವ ಮತ್ತು ಇದಕ್ಕೆ ಅವಕಾಶ ಒದಗಿಸಿದ ಅಂಬೇಡ್ಕರ್ ರಚಿಸಿದ ಸಂವಿಧಾನದ ಆಶಯಗಳನ್ನು ತಿಳಿಸುವುದು ಮಾನವ ಸರಪಳಿಯ ಮೂಲ ಉದ್ದೇಶವಾಗಿದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣ ಪ್ರಜೆಗಳೇ ಆಗಿದ್ದಾರೆಂದು ತಿಳಿಸಿದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಅಂಬೇಡ್ಕರ್ ದೇಶಕ್ಕೆ ನೀಡಿರುವ ಸಂವಿಧಾನದ ಮೂಲಕ ರಾಷ್ಟ್ರದ ಪ್ರಜೆಗೂ ಸಮಾನತೆ ಒದಗಿಸುವ ಬಹುದೊಡ್ಡ ಕಾರ್ಯ ಮಾಡಿದ್ದಾರೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜಾತಿ, ಮತ, ಭೇದಗಳನ್ನು ಮರೆತು ಎಲ್ಲರೂ ಒಗ್ಗೂಡಿ ಮುನ್ನಡೆಯಬೇಕು ಎಂದರು.

ಇದೇ ಸಂದರ್ಭ ಅಪರ ಜಿಲ್ಲಾಧಿಕಾರಿ ಐಶ್ವರ್ಯ, ಸಂವಿಧಾನ ಪ್ರಸ್ತಾವನೆ ಬೋಧಿಸಿದರು. ಕಡಗದಾಳು ಶ್ರೀ ಬೀರಲಿಂಗೇಶ್ವರ ಯುವಕರ ಸಂಘದ ಡೊಳ್ಳು ಕುಣಿತ, ಬಿಸಿಗಾಳಿಯ ಬಲೂನು, ಕಲಶ ಹಿಡಿದ ಬಾಲಕಿಯರು, ಕೈ ಕೈ ಹಿಡಿದ ವಿದ್ಯಾರ್ಥಿ ಸಮೂಹ 'ಜೈ ಹಿಂದ್', ಜೈ ಕರ್ನಾಟಕ' ಘೋಷಣೆಗಳೊಂದಿಗೆ ಪ್ರಜಾಪ್ರಭುತ್ವ ದಿನಾಚರಣೆ ಸಂದೇಶ ನಾಡಿನುದ್ದಕ್ಕೂ ಪಸರಿಸಿತು.

> **ಕೊಡಗಿನ ಸಂಪಾಜೆಯಿಂದ ಶಿರಂಗಾಲದವರೆಗೆ 12 ಗ್ರಾಮ ಪಂಚಾಯಿತಿ ಮತ್ತು ಮಡಿಕೇರಿ ನಗರಸಭೆ, ಕುಶಾಲನಗರ ಪುರಸಭೆ ಒಳಗೊಂಡಂತೆ ಆಯೋಜಿಸಿದ್ದ ಮಾನವ ಸರಪಳಿಯಲ್ಲಿ 30 ಸಾವಿರ ಮಂದಿ ಪಾಲ್ಗೊಂಡಿದ್ದಾರೆ. ಈ ಮೂಲಕ ಸಂವಿಧಾನದ ಮೂಲ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಭಾವನೆಗಳನ್ನು ಯುವ ಮನಸುಗಳಲ್ಲಿ ಮೂಡಿಸುವ ಪ್ರಯತ್ನ ನಡೆಸಲಾಗಿದೆ.**
> –ಎನ್.ಎಸ್.ಭೋಸರಾಜು, ಜಿಲ್ಲಾ ಉಸ್ತುವಾರಿ ಸಚಿವ

ವಿರಾಜಪೇಟೆಯಲ್ಲಿ ಸಂಗೀತ ಸ್ಪರ್ಧೆ


ವಿರಾಜಪೇಟೆಯಲ್ಲಿ ಆಯೋಜಿಸಿದ್ದ ಸಂಗೀತ ಸ್ಪರ್ಧೆ ಕಾರ್ಯಕ್ರಮವನ್ನು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಉದ್ಘಾಟಿಸದರು.

ವಿರಾಜಪೇಟೆ, ಸೆ.15–ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನದ ಗೌರಿ–ಗಣೇಶ ಉತ್ಸವ ಅಂಗವಾಗಿ ಎನ್.ವೆಂಕಟೇಶ್ ಕಾಮತ್ ಟ್ರಸ್ಟ್ ಸಹಯೋಗದಲ್ಲಿ ವಾಯ್ಸ್ ಆಫ್ ವಿರಾಜಪೇಟೆ ಸಂಗೀತ ಸ್ಪರ್ಧೆ ಆಯೋಜಿಸಲಾಗಿತ್ತು.

ಸ್ಪರ್ಧೆಯಲ್ಲಿ 50ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ, ಎನ್.ವೆಂಕಟೇಶ್ ಕಾಮತ್ ಟ್ರಸ್ಟ್ ಮಕ್ಕಳ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುತ್ತಿದೆ. ಬಸವೇಶ್ವರ ದೇವಸ್ಥಾನದ ಗೌರಿ–ಗಣೇಶ ಉತ್ಸವ ಸಮಿತಿಯ ವಕೀಲ ರವಿಂದ್ರ ಕಾಮತ್ ಅವರು ಒತ್ತಡಗಳ ನಡುವೆ ಹಲವಾರು ವರ್ಷಗಳಿಂದ ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳು ಈ ವೇದಿಕೆ ಮೂಲಕ ತಮ್ಮ ಪ್ರತಿಭೆ ಪ್ರದರ್ಶಿಸಿ, ರಾಜ್ಯ ಮಟ್ಟದಲ್ಲಿ ಗುರುತಿಸುವಂತಾಗಲಿ ಎಂದು ಶುಭ ಹಾರೈಸಿದರು.

ನಿವೃತ್ತ ಪೊಲೀಸ್ ಅಧಿಕಾರಿ ಬಾಬು ನರೋನಾ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಪ್ರತಿಭೆಯಿಂದ ಮಾತ್ರ ಮುಂದೆ ಬರಲು ಸಾಧ್ಯ. ಶ್ರದ್ಧೆ ಮತ್ತು ಛಲದಿಂದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಆಗ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದು ತಿಳಿಸಿದರು.

ಹಿರಿಯ ವಕೀಲ ರವೀಂದ್ರ ಕಾಮತ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಎಲೆಮರೆ ಕಾಯಿಯಂತಿರುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕೆಲ ವರ್ಷಗಳಿಂದ ವಾಯ್ಸ್ ಆಫ್ ವಿರಾಜಪೇಟೆ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಹೇಳಿದರು.

ತೀರ್ಪುಗಾರರಾಗಿ ಶ್ರೇಯಶ್ ಭಟ್ ಹಾಗೂ ಮಾನಸ, ಗೀತಾ ನಾಯ್ಡು, ಟಿ.ಎಲ್.ಶ್ರೀನಿವಾಸ್ ಹಾಜರಿದ್ದರು.

ಇಂದು ಗಣೇಶ ಮೂರ್ತಿಗೆ ಮಹಾಪೂಜೆ, ಅನ್ನಸಂತರ್ಪಣೆ

ವಿರಾಜಪೇಟೆ: ಪಟ್ಟಣದ ದಖ್ಖನಿ ಮೊಹಲ್ಲಾದ ಶ್ರೀ ವಿಜಯ ವಿನಾಯಕ ಉತ್ಸವ ಸಮಿತಿಯಿಂದ ಸೋಮವಾರ(ಸೆ.16) ರಾತ್ರಿ 8 ಗಂಟೆಗೆ ಗಣೇಶ ಮೂರ್ತಿಗೆ ಮಹಾಪೂಜೆ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಉತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ವೇತನ ಪಾವತಿಗೆ ಆಗ್ರಹಿಸಿ ಗುತ್ತಿಗೆ ಚಾಲಕರ ಪ್ರತಿಭಟನೆ


ಮಡಿಕೇರಿಯಲ್ಲಿ ವೇತನ ಪಾವತಿಸುವಂತೆ ಒತ್ತಾಯಿಸಿ ಗುತ್ತಿಗೆ ಬಸ್ ಚಾಲಕರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಸೆ.15–ನಿಗದಿತವಾಗಿ ವೇತನ ಪಾವತಿಸುವಂತೆ ಒತ್ತಾಯಿಸಿ ಗುತ್ತಿಗೆ ಬಸ್ ಚಾಲಕರು ನಗರದಲ್ಲಿ ಪ್ರತಿಭಟನೆ ನಡೆಸಿದರು.


ಡಿಪೋ ಮುಂಭಾಗ ಬಸ್‌ಗಳ ಸಂಚಾರ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದ ಗುತ್ತಿಗೆ ಚಾಲಕರು, ಗುತ್ತಿಗೆ ಸಂಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮಡಿಕೇರಿ ಡಿಪೋನಲ್ಲಿ ಕೆಲ ಚಾಲಕರನ್ನು ಎರಡು ಖಾಸಗಿ ಸಂಸ್ಥೆಗಳು ಪ್ರತ್ಯೇಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡಿವೆ. ಈ ಪೈಕಿ ಸಂಸ್ಥೆಯೊಂದರ ಗುತ್ತಿಗೆ ಅವಧಿ ಮುಗಿದಿದೆ. ಈ ಹಿನ್ನೆಲೆಯಲ್ಲಿ ಮತ್ತೊಂದು ಗುತ್ತಿಗೆ ವಹಿಸಿಕೊಂಡ ಸಂಸ್ಥೆ ಕರಾರಿನ ಪ್ರಕಾರ ತಿಂಗಳಿಗೆ 25 ಸಾವಿರ ರೂ. ವೇತನ, 3 ಸಾವಿರ ರೂ. ಪಿಎಫ್ ಸಹಿತ ವೇತನವನ್ನು 10ನೇ ತಾರೀಖಿನೊಳಗೆ ಪಾವತಿಸಬೇಕಿದೆ. ಆದರೆ, ಕೇವಲ 13 ಸಾವಿರ ರೂ. ಪಾವತಿ ಮಾಡಲಾಗಿದೆ. ವಿಚಾರಿಸಿದರೆ ಉಡಾಫೆಯಿಂದ ಉತ್ತರಿಸುತ್ತಾರೆ. ಗುತ್ತಿಗೆ ಸಂಸ್ಥೆ ಮುಖ್ಯಸ್ಥರು ಸ್ಥಳಕ್ಕಾಗಮಿಸುವಂತೆ ಪಟ್ಟು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಸ್ಥಳಕ್ಕಾಗಮಿಸಿದ ಪುತ್ತೂರು ವಿಭಾಗದ ಮಡಿಕೇರಿ ವಿಭಾಗೀಯ ತಾಂತ್ರಿಕಾಧಿಕಾರಿ ನಂದಕುಮಾರ್, ಚಾಲಕರ ಸಮಸ್ಯೆ ಆಲಿಸಿದರು. ಸಂಸ್ಥೆಯ ಗುತ್ತಿಗೆ ಅವಧಿ ಮುಗಿದ ಕಾರಣ ಬೇರೊಂದು ಸಂಸ್ಥೆ ಇದೀಗ ಚಾಲಕರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿದೆ. ಇದರಿಂದ ಸಮಸ್ಯೆಗೆ ಕಾರಣವಾಗಿದೆ. ಈ ಕುರಿತು ನಿಗಮದ ಉನ್ನತ ಅಧಿಕಾರಿಗಳು, ಡಿಪೋ ಮ್ಯಾನೇಜರ್ ಹಾಗೂ ಗುತ್ತಿಗೆ ಸಂಸ್ಥೆಯೊಂದಿಗೆ ಚರ್ಚಿಸಿ ವೇತನ ವಿಳಂಬ, ಹಾಜರಾತಿ ಸೇರಿದಂತೆ ಮತ್ತಿತರ ಸಮಸ್ಯೆಗಳ ಪರಿಹಾರಕ್ಕೆ ತುರ್ತು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ನಂತರ ಚಾಲಕರು ಪ್ರತಿಭಟನೆ ಕೈಬಿಟ್ಟರು. ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ಸಹಾಯಕ ನಿಯಂತ್ರಣ ಮೇಲ್ವಿಚಾರಣಾಧಿಕಾರಿ ಈರಸಪ್ಪ, ನಗರ ಠಾಣಾಧಿಕಾರಿ ಲೋಕೇಶ್ ಹಾಜರಿದ್ದರು.

ಎತ್ತಿನ ಗಾಡಿ ಬಿದ್ದು ಬಾಲಕ ಸಾವು

ಕುಶಾಲನಗರ: ಶುಂಠಿ ಚೀಲ ತುಂಬಿಸಿ ನಿಲ್ಲಿಸಿದ್ದ ಎತ್ತಿನ ಗಾಡಿ ಬಿದ್ದ ಪರಿಣಾಮ ಬಾಲಕ ಮೃತಪಟ್ಟ ಘಟನೆ ತಾಲೂಕಿನ ತೊರೆನೂರು ಗ್ರಾಮದಲ್ಲಿ ಭಾನುವಾರ ನಡೆದಿದೆ.


ಟಿ.ಎಂ.ತರುಣ್

ಗ್ರಾಮದ ನಿವಾಸಿ ಮಧು ಮತ್ತು ಅನು ದಂಪತಿ ಪುತ್ರ ಟಿ.ಎಂ.ತರುಣ್(7) ಮೃತ ಬಾಲಕ. ಈತ ಕೂಡಿಗೆ ಖಾಸಗಿ ಶಾಲೆಯಲ್ಲಿ 2ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ. ಬೆಳಗ್ಗೆ ಮನೆಯ ಅಂಗಳದಲ್ಲಿ ಶುಂಠಿ ಚೀಲ ತುಂಬಿ ನಿಲ್ಲಿಸಿದ್ದ ಎತ್ತಿನ ಗಾಡಿ ಬಳಿ ಬಾಲಕ ನಿಂತಿದ್ದ. ಈ ವೇಳೆ ಭಾರ ಹೆಚ್ಚಾಗಿ ಎತ್ತಿನ ಗಾಡಿ ಮಗುಚಿ ಬಿದ್ದಿದೆ. ಇದರಿಂದ ತರುಣ್ ತಲೆಗೆ ಗಂಭೀರ ಗಾಯವಾಗಿದೆ. ತಕ್ಷಣ ಈತನನ್ನು ಕುಶಾಲನಗರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

ಈ ಸಂಬಂಧ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆತ್ಮಹತ್ಯೆಗೆ ಯತ್ನಿಸಿದ್ದ ಎಫ್‌ಡಿಎ ಸಾವು

ಮಡಿಕೇರಿ, ಸೆ.15–ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ತಹಸೀಲ್ದಾರ್ ಕಚೇರಿಯ ಪ್ರಥಮ ದರ್ಜೆ ಸಹಾಯಕ ಭಾನುವಾರ ಮೃತಪಟ್ಟಿದ್ದಾರೆ.


ಪ್ರಜ್ವಲ್

ಮೂಲತಃ ಹಾಸನ ಜಿಲ್ಲೆಯವರಾದ ಮಡಿಕೇರಿ ತಹಸೀಲ್ದಾರ್ ಕಚೇರಿಯ ಪ್ರಥಮ ದರ್ಜೆ ಸಹಾಯಕ ಪ್ರಜ್ವಲ್ (32) ಮೃತಪಟ್ಟಿದ್ದು, ಈತ ಕಳೆದ ಮಂಗಳವಾರ ರಾತ್ರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಪ್ರಜ್ವಲ್ ವಿರುದ್ಧ ಮಡಿಕೇರಿ ತಹಸೀಲ್ದಾರ್ ಪ್ರವೀಣ್ ಅವರ ಸಹಿ ನಕಲಿ ಮಾಡಿ, ಹಣಕ್ಕಾಗಿ ಖಜಾನೆ ಇಲಾಖೆಗೆ ಬಿಲ್ ಕಳುಹಿಸಿದ್ದ ಪ್ರಕರಣ ಬಯಲಾಗಿತ್ತು. ಈ ಸಂಬಂಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಹಿನ್ನೆಲೆಯಲ್ಲಿ ಪ್ರಜ್ವಲ್ ಮಂಗಳವಾರ ರಾತ್ರಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ನಂತರ ಪ್ರಜ್ವಲ್‌ಗೆ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತಪಟ್ಟಿದ್ದಾರೆ. ಮೃತ ಪ್ರಜ್ವಲ್‌ಗೆ ಪತ್ನಿ ಹಾಗೂ ಬಂಧು–ಬಳಗ ಇದ್ದಾರೆ

ಗೋ ಮಾಂಸ ಸಾಗಿಸುತ್ತಿದ್ದ ಇಬ್ಬರ ಬಂಧನ

ಗೋಣಿಕೊಪ್ಪ: ಗೋ ಮಾಂಸ ಸಾಗಿಸುತ್ತಿದ್ದ ಅಸ್ಸಾಂ ಮೂಲದ ಇಬ್ಬರನ್ನು ಬಂಧಿಸಿರುವ ಗೋಣಿಕೊಪ್ಪ ಠಾಣೆ ಪೊಲೀಸರು, 22 ಕೆಜಿ ಗೋ ಮಾಂಸ ವಶಪಡಿಸಿಕೊಂಡಿದ್ದಾರೆ.

ಅಸ್ಸಾಂ ಮೂಲದ ರಹೀಂ ಅಲಿ ಹಾಗೂ ಸೋಹಿದುಲ್ಲಾ ಮುನ್ನಾಸ್ ಬಂಧಿತ ಆರೋಪಿಗಳು. ಈ ಇಬ್ಬರು ಗೋ ಮಾಂಸ ಸಾಗಿಸುತ್ತಿದ್ದರು. ಮಾಹಿತಿ ಮೇಲೆ ದಾಳಿ ನಡೆಸಿದ ಪೊಲೀಸರು ಅತ್ತೂರು ಸಮೀಪ ಬಂಧಿಸಿದ್ದಾರೆ.

ಈ ಭಾಗದಲ್ಲಿ ಅಸ್ಸಾಂ ಕಾರ್ಮಿಕರಿಂದ ನಿರಂತರವಾಗಿ ಅಪರಾಧ ಪ್ರಕರಣ ನಡೆಯುತ್ತಿವೆ. ಆದ್ದರಿಂದ ಪೊಲೀಸರು ಕ್ರಮಕೈಗೊಳ್ಳಬೇಕು ಎಂದು ಹಿಂದೂಪರ ಸಂಘಟನೆ ಕಾರ್ಯಕರ್ತರು ಆಗ್ರಹಿಸಿದ್ದಾರೆ.

ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ...



ಕೇಂದ್ರ ಸರ್ಕಾರ ಜಾರಿಗೊಳಿಸಿರುವ ವಕ್ಫ್ ಬಿಲ್ ವಿರೋಧಿಸಿ ಎಸ್‌ಡಿಪಿಐ ಪಕ್ಷದ ಕಾರ್ಯಕರ್ತರು ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿದರು. ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ದುಲ್ ಅಡ್ಕರ್, ನಗರಸಭೆ ಸದಸ್ಯರಾದ ಎಂ.ಕೆ.ಮನ್ಸೂರ್, ಮೇರಿ ವೇಗಸ್, ಬಷೀರ್ ಅಹಮ್ಮದ್, ಪಕ್ಷದ ಪ್ರಮುಖರಾದ ರಿಜ್ವಾನ್, ನಜೀರ್ ಅಹಮ್ಮದ್ ಇದ್ದರು.

ಶಾಸಕ ಮುನಿರತ್ನ ವಿರುದ್ಧ ಪ್ರತಿಭಟನೆ


ಚಾಮರಾಜನಗರದಲ್ಲಿ ಜಿಲ್ಲಾ ದಲಿತ ಸಂಘಟನೆ ಒಕ್ಕೂಟದ ವತಿಯಿಂದ ಶಾಸಕ ಮುನಿರತ್ನ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ ಸೆ.15–ಜಿಲ್ಲಾ ದಲಿತ ಸಂಘಟನೆ ಒಕ್ಕೂಟದ ವತಿಯಿಂದ ಶಾಸಕ ಮುನಿರತ್ನ ವಿರುದ್ಧ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಶಾಸಕ ಮುನಿರತ್ನ ಘನತ್ಯಾಜ್ಯ ವಿಲೇವಾರಿ ಸಂಬಂಧ ಗುತ್ತಿಗೆದಾರನಿಂದ ಲಂಚ ಕೇಳುವ ಸಂದರ್ಭದಲ್ಲಿ ಗುತ್ತಿಗೆದಾರನಿಗೆ ಬೈಯುವಾಗ ಇಡೀ ದಲಿತ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ. ಮುನಿರತ್ನ ಮಾಡುತ್ತಿರುವುದೇ ಭ್ರಷ್ಟಾಚಾರ. ಅದರಲ್ಲೂ ಕೀಳುಮಟ್ಟಕ್ಕೆ ಇಳಿದು ಮಹಿಳೆಯನ್ನು ಅವಮಾನಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ. ಈತನನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದರು.

ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ಈ ಕೂಡಲೇ ರದ್ದುಗೊಳಿಸಿ, ಎಸ್ಸಿ ಎಸ್ಟಿ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಶಿಕ್ಷೆಗೆ ಒಳಪಡಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘಟನೆ ಒಕ್ಕೂಟದ ರಾಮಸಮುದ್ರ ಸುರೇಶ್, ಯರಿಯೂರು ಸಿ.ರಾಜಣ್ಣ, ಕೆ.ಎಂ.ನಾಗರಾಜು, ಗುಂಡ್ಲುಪೇಟೆ ನಂಜುಂಡಸ್ವಾಮಿ, ಮಾದ್ರಳ್ಳಿ ರಂಗಸ್ವಾಮಿ, ಶಾಂತರಾಜು, ಮರಿಯಲದ ಹುಂಡಿ ಕುಮಾರ, ಅಣಗಳ್ಳಿ ಬಸವರಾಜು, ನಾಗಶೇಖರ್, ಸಿ.ಎಂ. ಶಿವಣ್ಣ, ಕಾಡಳ್ಳಿ ನಾಗರಾಜು, ಶಿವಕುಮಾರ್, ವರದರಾಜು ಭಾಗವಹಿಸಿದ್ದರು.

ಪ್ರತ್ಯೇಕ ಎರಡು ಅಪಘಾತ: ಇಬ್ಬರು ಸಾವು

ಚಾಮರಾಜನಗರ, ಸೆ.15– ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನಲ್ಲಿ ನಡೆದಿದೆ.



ಬೈಕ್‌ಗೆ ಲಾರಿ ಡಿಕ್ಕಿ: ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಹೊರಗುತ್ತಿಗೆ ನೌಕರ ಸಾವನ್ನಪ್ಪಿರುವ ಘಟನೆ ನಗರದ ಸತ್ಯಮಂಗಲಂ ರಾಷ್ಟ್ರೀಯ ಹೆದ್ದಾರಿಯ ಹರದನಹಳ್ಳಿ ಹಾಗೂ ಅಂಕನಶೆಟ್ಟಿಪುರ ಮಧ್ಯೆ ಶನಿವಾರ ತಡರಾತ್ರಿ ನಡೆದಿದೆ.

ತಾಲೂಕಿನ ಅಟ್ಟುಗೂಳಿಪುರ ಗ್ರಾಮದ ಚೆನ್ನನಂಜಸ್ವಾಮಿ(25) ಮೃತಪಟ್ಟ ಬೈಕ್ ಸವಾರ. ಈತ ಜಿಲ್ಲಾಡಳಿತ ಭವನದ ಕೌಶಲಾಭಿವೃದ್ಧಿ ಕೇಂದ್ರದಲ್ಲಿ ಹೊರಗುತ್ತಿಗೆ ನೌಕರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈತ ಎಂದಿನಂತೆ ಕೆಲಸ ಮುಗಿಸಿಕೊಂಡು ಊರಿಗೆ ವಾಪಸ್ ಹೋಗುತ್ತಿದ್ದ ವೇಳೆ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳ ಪರಿಶೀಲಿಸಿದ ನಗರ ಸಂಚಾರ ಠಾಣೆ ಪೊಲೀಸರು ಲಾರಿ ಹಾಗೂ ಚಾಲಕನನ್ನು ವಶಕ್ಕೆ ಪಡೆದು, ಈ ಸಂಬಂಧ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಕುರಿಗಾಹಿ ಸಾವು: ರಸ್ತೆಬದಿ ಕುರಿಗಳನ್ನು ಮೇಯಿಸುತ್ತಿದ್ದ ಕುರಿಗಾಹಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಆತ ಸಾವನ್ನಪ್ಪಿರುವ ಘಟನೆ ತಾಲೂಕಿನ ಕಡುವಿನಕಟ್ಟೆಹುಂಡಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ಗ್ರಾಮದ ಚೆನ್ನೇಗೌಡ (71) ಮೃತ ಕುರಿಗಾಹಿ. ಇದೇ ವೇಳೆ ಅದೇ ಗ್ರಾಮದ ಶಿವೇಗೌಡ ಗಾಯಗೊಂಡಿದ್ದಾರೆ.

ಕಡುವಿನಕಟ್ಟೆಹುಂಡಿ ಹಾಗೂ ವೀರನಪುರ ಕ್ರಾಸ್ ಬಳಿಯ ಮುಖ್ಯ ರಸ್ತೆಯಲ್ಲಿ ಚೆನ್ನೇಗೌಡ ಕುರಿಗಳನ್ನು ಮೇಯಿಸುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ಬಂದ ಶಿವೇಗೌಡ ಈತನನ್ನು ಮಾತನಾಡಿಸುತ್ತಿದ್ದರು. ಈ ವೇಳೆ ಚಾಮರಾಜನಗರದಿಂದ ಬರುತ್ತಿದ್ದ ಕಾರು ಪಂಕ್ಚರ್ ಆಗಿ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆಬದಿಯಲ್ಲಿ ನಿಂತಿದ್ದ ಚೆನ್ನೇಗೌಡ ಹಾಗೂ ಶಿವೇಗೌಡರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಚೆನ್ನೇಗೌಡ ಸಾವನ್ನಪ್ಪಿದ್ದಾರೆ. ಈ ಸಂಬಂಧ ನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮರಾಜನಗರದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಅರ್ಥಪೂರ್ಣ ಆಚರಣೆ

ಹಲವು ವಿಶೇಷಗಳಿಂದ ಗಮನ ಸೆಳೆದ ಮಾನವ ಸರಪಳಿ



ಚಾ.ನಗರದಲ್ಲಿ ನಡೆದ ಮಾನವ ಸರಪಳಿಯಲ್ಲಿ ಸಚಿವ ಕೆ.ವೆಂಕಟೇಶ್, ಶಾಸಕ ಪುಟ್ಟರಂಗಶೆಟ್ಟಿ ಹಾಗೂ ಗಣ್ಯರು ಕೈ ಜೋಡಿಸಿದರು.

ಚಾಮರಾಜನಗರ, ಸೆ.15–ಗಡಿಜಿಲ್ಲೆ ಚಾಮರಾಜ ನಗರದಲ್ಲಿ ಭಾನುವಾರ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ವಿಶಿಷ್ಟ ಹಾಗೂ ವಿನೂತನವಾಗಿ ಆಚರಿಸಲಾಯಿತು.

ಬೀದರ್‌ನಿಂದ ಚಾಮರಾಜನಗರುದವರೆಗೆ ರಾಜ್ಯದ 31 ಜಿಲ್ಲೆಗಳನ್ನೊಳಗೊಂಡ ಅತಿ ಉದ್ದದ ಮಾನವ ಸರಪಳಿಯನ್ನು ರಾಜ್ಯಾದ್ಯಂತ ಏಕಕಾಲದಲ್ಲಿ ಆಯೋಜಿಸಲಾಗಿತ್ತು. ಜಿಲ್ಲೆಯ ಸರಹದ್ದು ಆರಂಭವಾಗುವ ಮೂಗೂರು ಕ್ರಾಸ್‌ನಿಂದ ನಗರದ ರಾಮಸಮುದ್ರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆವರೆಗೆ ಏರ್ಪಡಿಸಿದ್ದ 25 ಕಿ.ಮೀ. ಉದ್ದದ ಮಾನವ ಸರಪಳಿ ಕಾರ್ಯಕ್ರಮ ಗಮನ ಸೆಳೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಮರಿಸ್ವಾಮಿ, ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ ಇನ್ನಿತರೆ ಗಣ್ಯರು ಮೂಗೂರು ಕ್ರಾಸ್ ಬಳಿ ಆರಂಭವಾದ ಮಾನವ ಸರಪಳಿಗೆ ಶುಭ ಕೋರಿದರು.

ದಾರಿಯುದ್ದಕ್ಕೂ ಮಾನವ ಸರಪಳಿಯಲ್ಲಿ ಸಮವಸ್ತ್ರ ಧರಿಸಿದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸಮುದಾಯಗಳ ಮುಖಂಡರು, ಜನಪ್ರತಿನಿಧಿಗಳು, ಸರ್ಕಾರಿ ನೌಕರರು, ಸಿಬ್ಬಂದಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಸಾರ್ವಜನಿಕರು ಪ್ರಜಾಪ್ರಭುತ್ವದ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಬಿಂಬಿಸುವ ಮಹತ್ತರ ಕಾರ್ಯದಲ್ಲಿ ಪಾಲ್ಗೊಂಡು ಮಾನವ ಸರಪಳಿಯ ಮೆರಗನ್ನು ಹೆಚ್ಚಿಸಿದರು.

ಮಾನವ ಸರಪಳಿ ರಚನೆಯಾಗಿದ್ದ ಪ್ರತಿ ಕಿ.ಮೀನಲ್ಲಿ ಅಂಬೇಡ್ಕರ್ ವೇಷಭೂಷಣ ಹಾಗೂ ಇನ್ನಿತರೆ ಸಾಂಪ್ರದಾಯಿಕ ಧಿರಿಸು ಧರಿಸಿದ್ದ ಮಕ್ಕಳು ವಿಶೇಷ ಗಮನ ಸೆಳೆದರು. ಮಾರ್ಗಮಧ್ಯೆ ಶಾಲಾ ಮಕ್ಕಳು ಜಿಲ್ಲೆಯ ಬಿಳಿಗಿರಿರಂಗನ ಅರಣ್ಯವಾಸಿಗಳ ನೃತ್ಯ ಪ್ರದರ್ಶಿಸಿದರು. ಗಾರುಡಿ ಗೊಂಬೆ, ಡೊಳ್ಳು, ವಿವಿಧ ಕಲಾ ತಂಡಗಳ ಸಂಭ್ರಮ ಮತ್ತಷ್ಟು ಹೆಚ್ಚಿಸಿದವು.

ಮಾನವ ಸರಪಳಿಯಲ್ಲಿ ಸಾಂಪ್ರದಾಯಿಕ ಉಡುಗೆ–ತೊಡುಗೆ ತೊಟ್ಟು ತ್ರಿವರ್ಣ ಧ್ವಜ ಹಿಡಿದು ಸಂಭ್ರಮಿಸಿದರು. ಸಂವಿಧಾನ ಪೀಠಿಕೆ ವಾಚನ ಮಾಡಿದರು. ಮಾನವ ಸರಪಳಿಗೆ ಕೈ ಜೋಡಿಸಿ ಪ್ರಜಾಪ್ರಭುತ್ವ ದಿನವನ್ನು ಸಾರ್ಥಕಗೊಳಿಸಿದರು. ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು ಮೂಗೂರು ಕ್ರಾಸಿನ ಸ್ವಾಗತ ಕಮಾನಿನ ಬಳಿ ನೃತ್ಯ ಪ್ರದರ್ಶಿಸಿದರು. ನಗರದ ಪಚ್ಚಪ್ಪ ವೃತ್ತದಲ್ಲಿ ಸೋಲಿಗರ ಗೊರುಕನ ನೃತ್ಯ, ಶಾಲಾ ಮಕ್ಕಳ ಬ್ಯಾಂಡ್ ವಾದನ, ಪ್ರಜಾಪ್ರಭುತ್ವ ಆಚರಣೆಯ ಸಂತಸ ಇಮ್ಮಡಿಗೊಳಿಸಿದರು. ಸಾಕಷ್ಟು ಸಾರ್ವಜನಿಕರು ವೃತ್ತದಲ್ಲಿ ಸಮಾವೇಶಗೊಂಡು ಆಚರಣೆಯ ವೈಶಿಷ್ಟ್ಯ ಕಣ್ತುಂಬಿಕೊಂಡರು.

ಬಿ.ರಾಚಯ್ಯ ಜೋಡಿರಸ್ತೆ ಮಧ್ಯ ಭಾಗದಿಂದ ರಾಮಸಮುದ್ರದ ಅಂಬೇಡ್ಕರ್ ವೃತ್ತದ ಒಂದು ಕಿಮೀವರೆಗೆ ಉದ್ದನೆಯ ರಾಷ್ಟ್ರದ ತ್ರಿವರ್ಣ ಧ್ವಜ ಪ್ರದರ್ಶನ ಅತ್ಯಂತ ವಿಶೇಷ ಎನಿಸಿತು. ಮಾನವ ಸರಪಳಿಯಲ್ಲಿ ಭಾಗವಹಿಸಿದವರಿಗೆ ಉಪಹಾರ, ಕುಡಿಯುವ ನೀರು, ಮೊಬೈಲ್ ಶೌಚಾಲಯ, ಅಂಬುಲೆನ್ಸ್ ಬೈಕ್ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಗಡಿಜಿಲ್ಲೆ ಚಾಮರಾಜನಗರದಲ್ಲಿ ಆಯೋಜಿಸಿದ್ದ ಮಾನವ ಸರಪಳಿ ಅರ್ಥಪೂರ್ಣ ಹಾಗೂ ಯಶಸ್ವಿಯಾಗಿ ನಡೆಯಿತು.

ನಾಡಬಂದೂಕು ತಯಾರಿಸುತ್ತಿದ್ದವನ ಬಂಧನ


ಅಕ್ರಮವಾಗಿ ತಯಾರಿಸುತ್ತಿದ್ದ ನಾಡಬಂದೂಕುಗಳನ್ನು ವಶಪಡಿಸಿಕೊಂಡಿರುವ ರಾಮಪುರ ಠಾಣೆ ಪೊಲೀಸರು.

ಹನೂರು, 15–ಅಕ್ರಮವಾಗಿ ನಾಡಬಂದೂಕು ತಯಾರಿಸುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ರಾಮಪುರ ಠಾಣೆ ಪೊಲೀಸರು, ಎರಡು ನಾಡಬಂದು, ಒಂಟಿ ನಳಿಕೆ ಹಾಗೂ ಮದ್ದು ಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಮಾರ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿರಿಪಾತಿ ಗ್ರಾಮದ ಮಹಿಮೈನಾಥನ್ ಅಲಿಯಾಸ್ ಮೀಸೆ ರಾಜು ಬಂಧಿತ ಆರೋಪಿ.

ಈತ ತನ್ನ ತೋಟದ ಮನೆಯಲ್ಲಿ ಅಕ್ರಮವಾಗಿ ನಾಡಬಂದೂಕು ತಯಾರಿತ್ತಿದ್ದ. ಮಾಹಿತಿ ಮೇರೆಗೆ ದಾಳಿ ನಡೆಸಿದ ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರ, ರಾಮಪುರ ಪಿಎಸ್‌ಐ ಈಶ್ವರ್ ಹಾಗೂ ಅಪರಾಧ ವಿಭಾಗದ ಸಿಬ್ಬಂದಿ ಈತನನ್ನು ಬಂಧಿಸಿ, ತೋಟದ ಮನೆಯ ಹುಲ್ಲಿನ ಮೆದೆಯಲ್ಲಿ ಬಚ್ಚಿಟ್ಟಿದ್ದ ನಾಡಬಂದೂಕು, ಮದ್ದುಗುಂಡು, ಗನ್ ಪೌಡರ್ ಇನ್ನಿತರ ಪರಿಕರಗಳನ್ನು ವಶಕ್ಕೆ ಪಡೆದಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ರಾಮಪುರ ಠಾಣೆ ಪೊಲೀಸರು, ಆರೋಪಿಯನ್ನು ನ್ಯಾಯಾಲಯ ವಶಕ್ಕೆ ಒಪ್ಪಿಸಿದ್ದಾರೆ.

24 ಗಂಟೆಯಲ್ಲಿ ಇಬ್ಬರು ಸಾವು: ಹೆದ್ದಾರಿ ತಡೆದು ಪ್ರತಿಭಟನೆ

ಚಾಮರಾಜನಗರ, ಸೆ.15–ತಾಲೂಕಿನ ಅಟ್ಟಗುಳಿಪುರ ಸಮೀಪದ ಸತ್ಯಮಂಗಲಂ ರಾಷ್ಟ್ರೀಯ ಹೆದ್ದಾರಿಯಲ್ಲಿ 24 ಗಂಟೆಯಲ್ಲಿ ಅಪಘಾತದಿಂದ ಇಬ್ಬರು ಮೃತಪಟ್ಟಿದ್ದು, ಇದರಿಂದ ಆಕ್ರೋಶಗೊಂಡ ಜನರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಶನಿವಾರ ತಡರಾತ್ರಿ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಹೊರಗುತ್ತಿಗೆ ನೌಕರ ಅಟ್ಟಗೂಳಿಪುರ ಗ್ರಾಮದ ಚೆನ್ನನಂಜಸ್ವಾಮಿ ಮೃತಪಟ್ಟಿದ್ದಾರೆ. ಆದರೆ, ಇದೇ ಹೆದ್ದಾರಿಯಲ್ಲಿ ಭಾನುವಾರ ಬೊಲೆರೊ ವಾಹನ ಡಿಕ್ಕಿಯಾಗಿ ಮತ್ತೊಬ್ಬ ಬೈಕ್ ಸವಾರ ತಾಲೂಕಿನ ಜ್ಯೋತಿಗೌಡನಪುರದ ಪ್ರವೀಣ್(25) ಮೃತಪಟ್ಟಿದ್ದಾರೆ.

ಇದರಿಂದ ಆಕ್ರೋಶಗೊಂಡ ಸಾರ್ವಜನಿಕರು, ತಮಿಳುನಾಡು ಹಾಗೂ ಕರ್ನಾಟಕಕ್ಕೆ ಸಂಪರ್ಕ ಕಲ್ಪಿಸುವ ಈ ರಾಷ್ಟ್ರೀಯ ಹೆದ್ದಾರಿ ಅವೈಜ್ಞಾನಿಕ ಕಾಮಗಾರಿಯಿಂದ ಪದೇ ಪದೆ ಅಪಘಾತ ಸಂಭವಿಸುತ್ತಿವೆ. ಯಾವುದೇ ಸೂಚನಾ ಫಲಕಗಳು, ರಸ್ತೆ ಉಬ್ಬು, ಜಿಬ್ರಾ ಕ್ರಾಸ್ ಹಾಕಿಲ್ಲ. ವಾಹನಗಳ ವೇಗ ನಿಯಂತ್ರಣಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ಪೊಲೀಸರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಿಂದ ಒಂದು ಗಂಟೆಗೂ ಹೆಚ್ಚು ಕಾಲ ವಾಹನಗಳ ಸಂಚಾರ ಬಂದ್ ಆಗಿತ್ತು.

ಸ್ವಾತಂತ್ರ್ಯ, ಸಮಾನತೆಯಿಂದ ಪ್ರಜಾಪ್ರಭುತ್ವ ಬಲಿಷ್ಠ

ಚಾಮರಾಜನಗರ, ಸೆ.15– ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಭದ್ರಬುನಾದಿಯಿಂದ ಪ್ರಜಾಪ್ರಭುತ್ವ ಬಲಿಷ್ಠವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಮಾನವ ಸರಪಳಿಯ ಮುಕ್ತಾಯವಾದ ರಾಮಸಮುದ್ರದ ಅಂಬೇಡ್ಕರ್ ಪ್ರತಿಮೆ ಬಳಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ದಿನವನ್ನು ನಾವು ಇಂದು ಎಲ್ಲೆಡೆ ವಿಶಿಷ್ಟವಾಗಿ ಆಚರಿಸಲಾಗಿದೆ. ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಆದರ್ಶಗಳು ಭಾರತೀಯ ಸಂವಿಧಾನ ಪೀಠಿಕೆಯ ಭಾಗವಾಗಿದೆ ಎಂದು ತಿಳಿಸಿದರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2007ರಲ್ಲಿ ಅಂಗೀಕರಿಸಿದ ನಿರ್ಣಯದಂತೆ ಸೆ.15 ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನಾಗಿ ಆಚರಿಸಲಾಗುತ್ತಿದೆ. ಈ ದಿನ ವಿಶ್ವದ ಪ್ರಜಾಪ್ರಭುತ್ವ ಸ್ಥಿತಿಗತಿಯನ್ನು ಪರಿಶೀಲಿಸಲು ಮತ್ತು ಜಾಗತಿಕವಾಗಿ ಪ್ರಜಾಪ್ರಭುತ್ವದ ತತ್ವಗಳನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ ಎಂದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ನಗರಸಭಾ ಅಧ್ಯಕ್ಷ ಸುರೇಶ್, ಚುಡಾ ಅಧ್ಯಕ್ಷ ಅಸ್ಗರ್ ಮುನ್ನ, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಅಬಕಾರಿ ಉಪ ಆಯುಕ್ತ ನಾಗಶಯನ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ಬಿಂದ್ಯಾ, ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್ ಇತರರು ಇದ್ದರು.

ಇದೇ ವೇಳೆ ಕಲಾವಿದರಾದ ಬಿ.ಬಸವರಾಜು, ಸಿ.ಎಂ.ನರಸಿಂಹಮೂರ್ತಿ, ರಾಜಪ್ಪ ಮಂಜುನಾಥ್ ನಾಡಗೀತೆ ಪ್ರಸ್ತುತಪಡಿಸಿದರು. ಬಳಿಕ ಸಂವಿಧಾನ ಪೀಠಿಕೆ ವಾಚಿಸಲಾಯಿತು. ನಂತರ ಉಸ್ತುವಾರಿ ಸಚಿವರು, ಶಾಸಕರು, ಗಣ್ಯರು ಮಾನವ ಸರಪಳಿಗೆ ಕೈ ಜೋಡಿಸಿದರು. ಅಂತಿಮವಾಗಿ ಜೋಡಿಸಿದ ಕೈಗಳನ್ನು ಮೇಲೆತ್ತಿ 'ಜೈ ಹಿಂದ್' 'ಜೈ ಕರ್ನಾಟಕ' ಘೋಷಣೆ ಮೊಳಗಿಸಲಾಯಿತು. ಎನ್‌ಆರ್‌ಎಲ್‌ಎಂ ಮಹಿಳಾ ಸದಸ್ಯರು ದೇಶಭಕ್ತಿ ಗೀತೆಗೆ ನೃತ್ಯ ಮಾಡಿದರು. ಸಸಿ ನೆಟ್ಟು ನೀರೆರೆಯಲಾಯಿತು. ಬಳಿಕ ಸರಪಳಿ ಕಳಚಿದೆ, ಬಾಂಧವ್ಯ ಗಟ್ಟಿಯಾಗಿದೆ ಎಂಬ ಸಂದೇಶ ಫಲಕಕ್ಕೆ ಗಣ್ಯರು ಸಹಿ ಮಾಡಿದರು.

ಹಾಲಿನ ದರ ಹೆಚ್ಚಳದಿಂದ

ಹಾಲು ಉತ್ಪಾದಕರಿಗೆ ಅನುಕೂಲ

ರೈತರಿಗೆ ಲೀಟರ್‌ಗೆ 3 ರಿಂದ 4 ರೂ. ಸಿಗಲಿದೆ ಎಂದ ಮೈಮುಲ್ ಅಧ್ಯಕ್ಷ



ತಿ.ನರಸೀಪುರ ತಾಲೂಕು ಕೇತುಪುರ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಶನಿವಾರ ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ಅಧ್ಯಕ್ಷ ಚೆಲುವರಾಜು ಅವರನ್ನ ಸನ್ಮಾನಿಸಿದರು.

ತಿ.ನರಸೀಪುರ, ಸೆ.15– ಸಿಎಂ ಸಿದ್ದರಾಮಯ್ಯ ಅವರು ನಂದಿನಿ ಪ್ಯಾಕೆಟ್ ಹಾಲಿನ ಬೆಲೆಯನ್ನು 5 ರೂ.ಹೆಚ್ಚಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದು, ಹಾಗೇನಾದರೂ ಆದಲ್ಲಿ ರೈತರಿಗೆ ಲೀಟರ್‌ಗೆ 3 ರಿಂದ 4 ರೂ.ಗಳ ಹೆಚ್ಚುವರಿ ಹಣ ಸಿಗಲಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ಕೇತುಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂಘದ 2023–24 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿದ್ದ ವೇಳೆ ಅವರನ್ನು ಎರಡು ಬಾರಿ ಭೇಟಿ ಮಾಡಿ ರೈತರಿಗೆ ನೀಡುತ್ತಿರುವ ಹಾಲಿನ ದರ ತುಂಬಾ ಕಡಿಮೆ ಇದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಸುಮಾರು 10 ರೂ.ಗಳಷ್ಟು ಕಡಿಮೆ ಇದೆ.ಹಾಗಾಗಿ ಹಾಲಿನ ದರ ಹೆಚ್ಚು ಮಾಡಿಸಲು ಮನವಿ ಮಾಡಿದ್ದೆ.ಇದಕ್ಕೆ ಸ್ಪಂದಿಸಿದ್ದ ಸಿದ್ದರಾಮಯ್ಯರವರು ಈಗ ನಾವು ವಿರೋಧ ಪಕ್ಷದಲ್ಲಿದ್ದೇವೆ.ನಮ್ಮದೇ ಸರ್ಕಾರ ಬಂದಾಗ ಖಂಡಿತ ಹಾಲಿನ ದರ ಹೆಚ್ಚು ಮಾಡಿ ರೈತರಿಗೆ ಅನುಕೂಲಮಾಡಿಕೊಡುತ್ತೇನೆಂಬ ಭರವಸೆ ನೀಡಿದ್ದರು ಎಂದರು.

ಕೆಎಂಎಫ್‌ಗೆ ನಿರ್ಣಯ ಮಾಡಿ ಹಾಲಿನ ದರ ಜಾಸ್ತಿಯಾದರೇ ರೈತರಿಗೆ ಹೆಚ್ಚು ಹಣ ಸಿಗುತ್ತೆ ಎಂದು ಹೇಳಿದ್ದೇ. ಈಗ ನಿನ್ನೆಯಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಕಾರ್ಯಕ್ರಮವೊಂದರಲ್ಲಿ ಹಾಲಿನ ದರ 5 ರೂ.ಹೆಚ್ಚು ಮಾಡುವುದಾಗಿ ಹೇಳಿಕೆ ನೀಡಿದ್ದಾರೆ. ಹಾಗೇನಾದರೂ ಪ್ಯಾಕೆಟ್ ಮೇಲಿನ ಹಾಲಿನ ದರ ಹೆಚ್ಚಾದರೆ ರೈತರಿಗೆ 3 ರಿಂದ 4 ರೂ. ಹೆಚ್ಚುವರಿ ಹಣ ಸಿಗಲಿದೆ. ಹೈನುಗಾರಿಕೆ ಮಾಡುವ ರೈತರಿಗೆ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಅಧ್ಯಕ್ಷನಾಗಲು ಪ್ರಭಾಕರ್ ಕಾರಣ: ಇವತ್ತೇನಾದರೂ ನಾನು ಮೈಮುಲ್‌ಗೆ ಅಧ್ಯಕ್ಷನಾಗಿದ್ದೇನೆ ಎಂದರೆ ಅದಕ್ಕೆ ಮೂಲ ಕಾರಣ ಡೈರಿ ಮಾಜಿ ಅಧ್ಯಕ್ಷ ಪ್ರಭಾಕರ್ ಕಾರಣ. ನಾನು ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕನಾಗಬೇಕೆಂದಿದ್ದಾಗ ಗ್ರಾಮದಲ್ಲಿ ಷೇರು ಕಟ್ಟಿಸಿ ಹಾಲು ಹಾಕಿಸಲು ಸಹಕರಿಸಿದ್ದರು ಅಲ್ಲಿಂದ ಪ್ರಾರಂಭವಾದ ಮೈಮುಲ್‌ನ ಜರ್ನಿ ಇಂದು ಅಧ್ಯಕ್ಷ ಸ್ಥಾನಕ್ಕೆ ತಂದು ಕೂರಿಸಿದೆ. ಇದೆಲ್ಲಾ ಕ್ರೆಡಿಟ್ ಪ್ರಭಾಕರ್‌ಗೆ ಸಲ್ಲಬೇಕು ಎಂದು ಚೆಲುವರಾಜು ತಿಳಿಸಿದರು.

ಸಂಘದ ಅಧ್ಯಕ್ಷ ಕೆ.ವಿ.ಸಂದೀಪ್, ಉಪಾಧ್ಯಕ್ಷ ಕೆ.ಎಂ.ಮದನ್ ಕುಮಾರ್, ಮಾಜಿ ಅಧ್ಯಕ್ಷ ಪ್ರಭಾಕರ್, ಕೆ.ಎನ್.ರಂಗಸ್ವಾಮಿ, ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಡಾ.ದಿವಾಕರ್, ಡಾ.ಶಿವಪ್ರಸಾದ್, ನಿರ್ದೇಶಕರಾದ ಕೆ.ಎನ್.ರಂಗಸ್ವಾಮಿ, ರಂಗೇಗೌಡ, ಶಿವ, ಮಾದೇಗೌಡ, ಕೆ.ರವೀಂದ್ರ, ಭಾಗ್ಯಮ್ಮ, ಶೋಭ, ನಾಗಮ್ಮ, ಮಹದೇವಶೆಟ್ಟಿ, ನಾರಾಯಣ ಮೂರ್ತಿ, ಮುಖಂಡರಾದ ಕೇತುಪುರ ಶಿವಕುಮಾರ್, ಸಂಘದ ಕಾರ್ಯದರ್ಶಿ ಎಂ.ಕುಳ್ಳೇಗೌಡ, ಹಾಲು ಪರೀಕ್ಷಕ ಎಸ್.ಮಹದೇವ, ಗ್ರಾಮಸ್ಥರು ಹಾಜರಿದ್ದರು.

ಕರೆದರೂ ತವರಿನಿಂದ ಬಾರದ ಪತ್ನಿಯನ್ನು

ಮಚ್ಚಿನಿಂದ ಕೊಚ್ಚಿ ಕೊಲೆಗೈದ ಪತಿ

- ಮಚ್ಚಿನೊಂದಿಗೆ ಬಿಳಿಕೆರೆ ಪೊಲೀಸರಿಗೆ ಶರಣಾದ ಆರೋಪಿ
- ಪತಿಯ ಪರಸ್ತ್ರೀ ಸಂಗದಿಂದ ಬೇಸತ್ತು ತವರು ಸೇರಿದ್ದ ಪತ್ನಿ





ಸ್ವಾಮಿನಾಯಕ

ಹುಣಸೂರು, ಸೆ.15– ಎಷ್ಟು ಕರೆದರೂ ತವರಿನಿಂದ ಬಾರದ ಪತ್ನಿಯನ್ನು ಪತಿಯೇ ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಕೊಲೆಗೈದು ಮಚ್ಚಿನೊಂದಿಗೆ ಪೊಲೀಸರಿಗೆ ಶರಣಾದ ಘಟನೆ ತಾಲೂಕಿನ ಬಿಳಿಕೆರೆ ಹೋಬಳಿಯ ಬೆಂಕಿಪುರ ಗ್ರಾಮದಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದೆ.

ಗ್ರಾಮದ ವಾಸಿ ಪಾಪನಾಯಕ ಅವರ ಪುತ್ರಿ ರೋಜಾ(37) ಎಂಬುವರೇ ಪತಿಯಿಂದ ಕೊಲೆಯಾದವರಾಗಿದ್ದಾರೆ. ಪತ್ನಿಯನ್ನು ಕೊಂದ ಇದೇ ಗ್ರಾಮದ ಪೀರ್ ನಾಯಕ ಅವರ ಪುತ್ರ ಸ್ವಾಮಿನಾಯಕ ಅಲಿಯಾಸ್ ಅಪ್ಪಿ ಪೊಲೀಸರ ಅತಿಥಿಯಾಗಿದ್ದಾನೆ. ಘಟನೆಯಿಂದ ದಂಪತಿಯ ಇಬ್ಬರು ಗಂಡು ಮಕ್ಕಳು ಅನಾಥರಾಗಿದ್ದಾರೆ.

ರೋಜಾ ಮತ್ತು ಸ್ವಾಮಿನಾಯಕ ಬೆಂಕಿಪುರ ಗ್ರಾಮದವರಾಗಿದ್ದು, ಕಳೆದ 14 ವರ್ಷದ ಹಿಂದೆ ಶಾಸ್ತ್ರಬದ್ಧವಾಗಿ ವಿವಾಹವಾಗಿದ್ದರು. ದಾಂಪತ್ಯ ಜೀವನ ಅನ್ಯೋನ್ಯವಾಗಿತ್ತು. ದಂಪತಿಗೆ ಪ್ರೀತಂ (12) ಮತ್ತು ಪ್ರಥಮ್(8) ಎಂಬ ಇಬ್ಬರು ಗಂಡು ಮಕ್ಕಳಿದ್ದಾರೆ. ಎಲ್ಲವೂ ಚೆನ್ನಾಗಿತ್ತು. ಆದರೆ ಸ್ವಾಮಿನಾಯಕ ಕಳೆದ ಎರಡು ವರ್ಷಗಳಿಂದ ಪರಸ್ತ್ರೀ ಸಂಗಕ್ಕೆ ಬಿದ್ದು, ಕುಟುಂಬವನ್ನು ನಿರ್ಲಕ್ಷಿಸಿದ್ದನೆನ್ನಲಾಗಿದೆ.

ವಿಷಯ ತಿಳಿದ ಪತ್ನಿ ರೋಜಾ ಪರಸ್ತ್ರೀ ಸಂಗ ಬಿಟ್ಟು ಬಿಡುವಂತೆ ಪರಿಪರಿಯಾಗಿ ಗಂಡನನ್ನು ಬೇಡಿದರೂ ಬಿಡಲಿಲ್ಲ. ಈ ವಿಚಾರವಾಗಿ ದಂಪತಿ ನಡುವೆ ಹಲವಾರು ಬಾರಿ ಗಲಾಟೆ ಏರ್ಪಟ್ಟಾಗ, ಗ್ರಾಮದಲ್ಲಿ ರಾಜಿ ಪಂಚಾಯಿತಿ ನಡೆಸಿ ದಂಪತಿಯನ್ನು ಒಂದಾಗಿ ಬಾಳುವಂತೆ ಸೂಚಿಸಿ ಪರಸ್ತ್ರೀ ಸಹವಾಸ ಬಿಡುವಂತೆ ತಿಳಿಸಿದ್ದರಂತೆ. ಪಂಚಾಯಿತಿ ಕಟ್ಟೆಯಲ್ಲಿ ಇನ್ನು ಮುಂದೆ ಈ ರೀತಿ ಮಾಡುವುದಿಲ್ಲ ಎಂದು ವಚನವಿತ್ತು ಬಂದಿದ್ದ ಸ್ವಾಮಿನಾಯಕ ತನ್ನ ಚಾಳಿಯನ್ನು ಮುಂದುವರೆಸಿದ್ದ.

ಇದರಿಂದ ಬೇಸರಗೊಂಡ ಪತ್ನಿ ಗಂಡನ ತ್ಯಜಿಸಿ, ತನ್ನ ಇಬ್ಬರು ಮಕ್ಕಳೊಂದಿಗೆ ತವರು ಮನೆಗೆ ಹೋಗಿ ನೆಲೆಸಿದ್ದಳು. ಆಗ ಸ್ವಾಮಿನಾಯಕ ಹಲವಾರು ಬಾರಿ ಪತ್ನಿಯನ್ನು ಮನೆಗೆ ಬರುವಂತೆ ಪೀಡಿಸಲಾರಂಭಿಸಿದ. ಆದರೆ ಆಕೆ ಇದಕ್ಕೆ ಒಪ್ಪದೆ ಜೊತೆಗೆ ಬರಲು ನಿರಾಕರಿಸಿದ್ದಳು.

ಭಾನುವಾರ ಬೆಳಗ್ಗೆ ಊರಿನಲ್ಲಿ ಕುಡಿಯುವ ನೀರು ಬಿಟ್ಟಿದ್ದರು. ಆಗ ರೋಜಾ ಅವರು ಮನೆ ಮುಂದೆ ನಲ್ಲಿಯಲ್ಲಿ ಬಗ್ಗಿ ನೀರು ಹಿಡಿಯುತ್ತಿದ್ದಾಗ, ಸ್ವಾಮಿನಾಯಕ ಹಿಂದಿನಿಂದ ಬಂದು ಮಚ್ಚಿನಿಂದ ಆಕೆಯ ಕುತ್ತಿಗೆ, ಎದೆ ಮತ್ತು ತಲೆ ಸೇರಿದಂತೆ ಸಿಕ್ಕ ಸಿಕ್ಕಂತೆ ಮನಸ್ಸೋ ಇಚ್ಛೆ ಥಳಿಸಿದ. ಇದರಿಂದ ಆಕೆ ಚೀರಾಡುತ್ತಾ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡಲಾರಂಭಿಸಿದಳು.

ಕಿರುಚಾಟ ಕೇಳಿ ಅಕ್ಕ–ಪಕ್ಕದ ಮನೆಯವರು ಓಡಿ ಬಂದು ಆಕೆಯನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ದರಾದರೂ, ಮಾರ್ಗ ಮಧ್ಯೆ ಸಾವನ್ನಪ್ಪಿದಳು ಎನ್ನಲಾಗಿದೆ. ಇತ್ತ ಪತ್ನಿಯನ್ನು ಕೊಂದಿದ್ದ ಸ್ವಾಮಿನಾಯಕ ಸೀದಾ ಮಚ್ಚಿನೊಂದಿಗೆ ಬಿಳಿಕೆರೆ ಪೊಲೀಸ್ ಠಾಣೆಗೆ ಹೋಗಿ ಶರಣಾದ. ತಾಯಿ ಸಾವನ್ನಪ್ಪಿ, ತಂದೆ ಜೈಲಿಗೆ ಹೋಗಿದ್ದರಿಂದ ಮಕ್ಕಳಿಬ್ಬರು ಅನಾಥರಾಗಿದ್ದಾರೆ.

ವಿಷಯ ತಿಳಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ, ಡಿವೈಎಸ್ಪಿ ಗೋಪಾಲಕೃಷ್ಣ, ಸರ್ಕಲ್ ಇನ್ಸ್‌ಪೆಕ್ಟರ್ ಲೋಲಾಕ್ಷಿ ಅವರುಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಿದ್ದಾರೆ.

ಮೃತದೇಹವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದ್ದು, ಸೋಮವಾರ ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಬಿಳಿಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಶ್ರೀ ಸ್ವರ್ಣಗೌರಿ, ಗಣೇಶ ವಿಸರ್ಜನೆ



ಹೂವಿನ ಪಲ್ಲಕ್ಕಿ ಉತ್ಸವದಲ್ಲಿ ಗಣೇಶ ವಿಸರ್ಜನೆ ಮಾಡಲಾಯಿತು.

ಮೂಗೂರು, ಸೆ.15– ಗೌರಿ ಗಣೇಶ ಹಬ್ಬದ ಅಂಗವಾಗಿ ಪ್ರತಿಷ್ಠಾಪನೆ ಮಾಡಲಾಗಿದ್ದ ಶ್ರೀ ಸ್ವರ್ಣಗೌರಿ ಹಾಗೂ ಗಣೇಶ ಮೂರ್ತಿಯನ್ನು ಹೂವಿನ ಪಲ್ಲಕ್ಕಿ ಉತ್ಸವದ ಮೂಲಕ ಮೂಗೂರಿನಲ್ಲಿ ಶನಿವಾರ ರಾತ್ರಿ ವಿಸರ್ಜನೆ ಮಾಡಲಾಯಿತು.

ವರ್ತಕರ ಆರಾಧ್ಯದೇವಿ ಎನಿಸಿದ ಗೌರಮ್ಮ ನವರನ್ನು ಹಬ್ಬದ ದಿನ ಅರ್ಚಕರು ಸೇರಿದಂತೆ ಭಾವಿಕಟ್ಟೆ ಬಳಿ ಆಗಮಿಸಿ ಸ್ವರ್ಣಗೌರಿ ಅಮ್ಮನವರ ಮೂರ್ತಿಗೆ ಪೂಜೆ ಸಲ್ಲಿಸಿದ ಬಳಿಕ ಗೌರಿ ಗುಡಿಯ ದೇವಾಲಯದಲ್ಲಿ ಅಮ್ಮನವರನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ಶತಮಾನ ಪೂರೈಸಿ ಗೌರಿ ಗುಡಿ ಎಂದೇ ಪ್ರಸಿದ್ಧಿ ಪಡೆದ ಈ ದೇಗುಲದಲ್ಲಿ 9 ದಿನಗಳ ಕಾಲ ಅಮ್ಮನವರಿಗೆ ಪ್ರತಿದಿನ ಸೇವಾರ್ಥದಾರರಿಂದ ವಿಶೇಷ ರೀತಿ ಪೂಜೆ, ಹೂವಿನ ಅಲಂಕಾರ ಹಾಗೂ ಧಾರ್ಮಿಕ ಆಚರಣೆಗಳ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಮಹಿಳೆಯರು ಬಾಗಿನ ಅರ್ಪಣೆ ಇತ್ಯಾದಿ ಸೇವಾ ಕಾರ್ಯಗಳು ಸಾಂಪ್ರದಾಯಿಕವಾಗಿ ಜರುಗಿತು. 9ನೇ ದಿನ ಗ್ರಾಮದ ಪ್ರಮುಖ ಬೀದಿಗಳು ವಿದ್ಯುತ್ ದೀಪ, ತಳಿರು–ತೋರಣ ಗಳಿಂದ ಸಿಂಗಾರಗೊಂಡು ಅಲಂಕೃತ ಹೂವಿನ ಪಲ್ಲಕ್ಕಿಯಲ್ಲಿ ಸ್ವರ್ಣ ಗೌರಿ ಅಮ್ಮನವರ ಉತ್ಸವ ಗದಗನ ಕನಕ ಶ್ರೀ ಮಹಿಳಾ ಡೋಲು ಕುಣಿತ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಸಾಗಿ ವಿಸರ್ಜನೆ ಮಾಡಲಾಯಿತು.

ಅಂಗಡಿ ಮುಂಗಟ್ಟುಗಳು ಬಂದ್: ಗ್ರಾಮದ ಶ್ರೀ ಸ್ವರ್ಣಗೌರಿ ಭಕ್ತ ಮಂಡಳಿಯ ಕಟ್ಟುಪಾಡುಗಳನ್ನು ಪಾಲಿಸುವ ವರ್ತಕ ಸಮುದಾಯ ಗೌರಮ್ಮ ನವರ ವಿಸರ್ಜನೆ ದಿನ ವ್ಯಾಪಾರ ವಹಿವಾಟುಗಳನ್ನು ಪ್ರತಿ ವರ್ಷದಂತೆ ಸ್ಥಗಿತಗೊಳಿಸಿದ್ದರು.

ಸೆ.22ಕ್ಕೆ ವಾರ್ಷಿಕ ಮಹಾಸಭೆ

ಮಲ್ಕುಂಡಿ, ಸೆ.15– ನಂಜನಗೂಡು ತಾಲೂಕಿನ ಕೂಡ್ಲಾಪುರ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ 2023–24 ನೇ ವಾರ್ಷಿಕ ಮಹಾಸಭೆಯು ಸೆ.22ರಂದು ಸಂಘದ ಅವರಣದಲ್ಲಿ ಸಂಘದ ಅಧ್ಯಕ್ಷ ಮಾರಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆಯಲ್ಲಿದೆ ಎಂದು ಸಿಇಓ ಮಹೇಶ್ ತಿಳಿಸಿದ್ದಾರೆ.

35 ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡ ಪ್ರಗತಿ ಶಾಲೆ ಮಕ್ಕಳು



ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಅತೀ ಹೆಚ್ಚು ಪ್ರಶಸ್ತಿ ಗಳಿಸಿದ ಪ್ರಗತಿ ಶಾಲೆಯ ಮಕ್ಕಳು.

ಸರಗೂರು, ಸೆ.15– ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆಯಲ್ಲಿ ನಡೆದ ಸರಗೂರು ಕ್ಲಸ್ಟರ್ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಪಟ್ಟಣದ ಪ್ರಗತಿ ಶಾಲೆಯ ಮಕ್ಕಳು ಎಲ್ಲ ವಿಭಾಗಗಳಿಂದ 35 ಪ್ರಶಸ್ತಿಗಳನ್ನು ಗೆದ್ದು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಅತೀ ಹೆಚ್ಚು ಪ್ರಶಸ್ತಿ ಗಳಿಸಿದ ಕೀರ್ತಿಗೆ ಪಾತ್ರವಾಗಿದೆ. ಇದರಿಂದ ಶಾಲಾ ಶಿಕ್ಷಕ ವೃಂದ ಅತ್ಯಂತ ಸಂಭ್ರಮಪಟ್ಟಿದೆ.

ಪ್ರಥಮ ಬಹುಮಾನ ದೀಕ್ಷಿತ್– ಮಿಮಿಕ್ರಿ, ಆಶುಭಾಷಣ–ಚಾತುರ್ಯ, ಜಾನಪದ ನೃತ್ಯ–ಬೃಂದ ಮತ್ತು ತಂಡ, ಭರತನಾಟ್ಯ–ಕೋಮಲ, ಜನಪದ ಗೀತೆ –ಶ್ರೇಯ, ಧಾರ್ಮಿಕ ಪಠಣ ಸಂಸ್ಕೃತಿ– ಶಿವು, ಧಾರ್ಮಿಕ ಪಠಣ ಸಂಸ್ಕೃತಿ– ಸಹನಾ, ಧಾರ್ಮಿಕ ಪಠಣ ಸಂಸ್ಕೃತಿ– ಶ್ರೇಯ, ಆಶುಭಾಷಣ–ಐಶ್ವರ್ಯ, ಕನ್ನಡ ಭಾಷಣ–ಲಿಖಿತ್ ವೈಭವ್, ಹಿಂದಿ ಭಾಷಣ–ಲೇಖನ, ಭಾವಗೀತೆ– ಅರ್ಚನಾ, ಭಕ್ತಿಗೀತೆ–ಹರ್ಷಿತ, ಆಶು ಭಾಷಣ–ಅಮೂಲ್ಯ, ಇಂಗ್ಲೀಷ್ ಭಾಷಣ– ಸುನೀತಾ, ಹಿಂದಿ ಕಂಠಪಾಠ–ತೇಜಸ್ವಿನಿ, ಕವನ ವಾಚನ– ತೇಜಸ್ವಿನಿ, ಕವನ ವಾಚನ–ಐಶ್ವರ್ಯ, ಕಥೆ ಹೇಳುವುದು– ಸೃಷ್ಟಿ, ಗಝಲ್–ನಿಸರ್ಗ, ಅಭಿನಯ ಗೀತೆ–ಸೃಜನ, ಧಾರ್ಮಿಕ ಪಠಣ ಅರೇಬಿಕ್– ಆಯಿಷಾ ಸಿದ್ದಿಕ್

ದ್ವಿತೀಯ ಬಹುಮಾನ ರಸಪ್ರಶ್ನೆ– ಲಿಖಿತ್ ಕುಮಾರ್ ಮತ್ತು ಅಜಯ್, ಪ್ರಬಂಧ– ಐಶ್ವರ್ಯ ಪಟೇಲ್, ಮಿಮಿಕ್ರಿ–ಜೀವನ್, ಧಾರ್ಮಿಕ ಪಠಣ ಅರೇಬಿಕ್–ಮೊಹಮ್ಮದ್ ಹುಸೇನ್, ಧಾರ್ಮಿಕ ಪಠಣ ಅರೇಬಿಕ್–ಹಾನಿಯ ಕುಲ್ಸುಮ್, ರಂಗೋಲಿ– ಅಪೂರ್ವ, ಚರ್ಚಾ ಸ್ಪರ್ಧೆ–ಸುಜನ, ಅಭಿನಯ ಗೀತೆ– ಸಾನ್ವಿ ಸಾರಾ, ಕನ್ನಡ ಕಂಠಪಾಠ–ಭಾನುಪ್ರಿಯ, ತೃತೀಯ ಸ್ಥಾನ ಕವ್ವಾಲಿ–ಭವಾನಿ ಮತ್ತು ತಂಡ, ಮಿಮಿಕ್ರಿ– ಪ್ರೀತಮ್, ಇಂಗ್ಲೀಷ್ ಕಂಠಪಾಠ–ಸೃಷ್ಟಿ ಈ ಮಕ್ಕಳು ಪ್ರಶಸ್ತಿಗೆ ಬಾಜನರಾಗಿದ್ದಾರೆ

ಇದರಲ್ಲಿ ಪ್ರಥಮ 22 ಎಲ್ಲ ತಾಲೂಕು ಮಟ್ಟಕ್ಕೆ ಆಯ್ಕೆ , ದ್ವಿತೀಯ 09, ತೃತೀಯ 04, ಒಟ್ಟು 35 ಪ್ರಶಸ್ತಿಗೆ ಕಾರಣಕರ್ತರಾದ ಎಲ್ಲ ವಿದ್ಯಾರ್ಥಿಗಳಿಗೂ ಹಾಗೂ ಶಿಕ್ಷಕರಿಗೂ ಪ್ರಗತಿ ಶಾಲಾ ಆಡಳಿತಾಧಿಕಾರಿ ಗುರುದತ್ ಹಾಗೂ ಶಿಕ್ಷಕ ಸತೀಶ ಹೆಚ್.ಎಸ್ ಹಾಗೂ ಆಡಳಿತ ಮಂಡಳಿ ಅಭಿನಂದನೆಗಳನ್ನು ತಿಳಿಸಿದೆ. ಕಾರ್ಯಕ್ರಮದಲ್ಲಿ ಇಸಿಓ ಪುರುಷೋತ್ತಮ್, ಸಿಆರ್‌ಪಿ ಮಂಜುನಾಥ್, ಲೋಕೇಶ್, ಶಿಕ್ಷಕರಾದ ಮಂಜುಳಾ, ನಂದಿನಿ,ಚೈತ್ರ, ಅಕ್ಕಮಹಾದೇವಿ, ವಿದ್ಯಾ, ಯಶೋಧಾ, ಮಹಾದೇವಮ್ಮ, ದಿವ್ಯಶ್ರೀ, ಭೂಮಿಕಾ, ನಂದಿನಿವಿ, ಸಿದ್ರತಉನ್ನಿಸ, ಶುಭ, ಮಣಿಕುಮಾರ್ ಭಾಗಿಯಾಗಿದ್ದರು,

ಹೆಚ್.ಡಿ.ಕೋಟೆಯಲ್ಲಿ ರಸಮೇವು ಘಟಕ ಸ್ಥಾಪನೆ

ಹೆಚ್.ಡಿ.ಕೋಟೆ, ಸೆ.15– ವನಸಿರಿನಾಡು ಮೇವು ರೈತ ಹಾಲು ಉತ್ಪಾದಕರ ಸಹಕಾರ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹ್ಯಾಂಡ್ ಪೋಸ್ಟ್‌ನಲ್ಲಿರುವ ಸಿದ್ದೆಗೌಡ ಕಲ್ಯಾಣಮಂಟಪ ದಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಕೆ.ಈರೇಗೌಡ NDDB, KMF ಹಾಗೂ ಒಕ್ಕೂಟದ ಸಹಕಾರದಿಂದ ಹೆಚ್.ಡಿ.ಕೋಟೆ ಟೌನಿನಲ್ಲಿ ರಸಮೇವು ಘಟಕ ಸ್ಥಾಪಿಸಿ ಜಿಲ್ಲಾದ್ಯಂತ ಹಾಲು ಉತ್ಪಾದಕರಿಗೆ ರಸಮೇವು ವಿತರಣೆ ಮಾಡುವ ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು. ಮುಖ್ಯಕಾರ್ಯನಿರ್ವಾಹಕರಾದ ಸಿಂಧೂರ ಸಭೆಯಲ್ಲಿ ವಾರ್ಷಿಕ ಲೆಕ್ಕ ಮಂಡಿಸಿದರು. ಇದೇ ಸಂದರ್ಭದಲ್ಲಿ ಉಪಾಧ್ಯಕ್ಷ ಬಸವರಾಜಪ್ಪ ಮೈಮುಲ್ ನಿರ್ದೇಶಕಿ ದ್ರಾಕ್ಷಾಯಿಣಿ, ನೋಡಲ್ ಅಧಿಕಾರಿ ಪ್ರಭುಶಂಕರ್, ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ಜಯಂತ್, ತಾಹಿರಾ, ನಿರ್ದೇಶಕ ರಾದ ಜೈಶಂಕರ್, ಸಕಲೇಶ, ಸುಧೀರ್, ಮರಳೂರ ನಾಯಕ, ಬೀರೇಗೌಡ, ವಿರೂಪಾಕ್ಷ, ಶಿವರಾಜು, ಪ್ರಕಾಶ್, ಶಿವಕುಮಾರ, ಶೋಭಾವತಿ, ಲತಾ, ಲೆಕ್ಕಿಗ ಪ್ರಶಾಂತ್ ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟಕ್ಕೆ ಆಯ್ಕೆ



ಹೆಚ್.ಡಿ.ಕೋಟೆ ತಾಲೂಕು ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಸತತವಾಗಿ ಮೂರನೇ ಬಾರಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಹ್ಯಾಂಡ್ ಪೋಸ್ಟ್ ಯರಹಳ್ಳಿ ಸರ್ಕಾರಿ ಪ್ರೌಢಶಾಲೆ ಶಾಲೆಯ ವಿದ್ಯಾರ್ಥಿನಿಯರು. ಇದೇ ಸಂದರ್ಭದಲ್ಲಿ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ನಾಗೇಂದ್ರಯ್ಯ, ದೈಹಿಕ ಶಿಕ್ಷಣ ಶಿಕ್ಷಕ ರವಿ.ಎಸ್.ಎಲ್ ಹಾಗೂ ಶಿಕ್ಷಕ ಆರಿಫ್ ವಿದ್ಯಾರ್ಥಿಗಳನ್ನ ಅಭಿನಂದಿಸಿದರು.

ಅನುದಾನವಿಲ್ಲದೆ ಹಳ್ಳಿಗಳ ರಸ್ತೆ ಕೂಡ ರಿಪೇರಿ ಮಾಡಿಸಲಾಗುತ್ತಿಲ್ಲ

ಗ್ಯಾರಂಟಿಯೇ ಇದಕ್ಕೆ ಕಾರಣ: ಶಾಸಕ ಜಿ.ಡಿ.ಹರೀಶ್‌ಗೌಡ



ಮಂಚಬಾಯನಹಳ್ಳಿ ಗ್ರಾಮದಲ್ಲಿ ಮುಳ್ಳೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿದರು.

ಹಿರೀಕ್ಯಾತನಹಳ್ಳಿ, ಸೆ.15– ಗ್ಯಾರಂಟಿಯ ಕಾರಣದಿಂದ ಹಳ್ಳಿಗಳ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ವಿಷಾದ ವ್ಯಕ್ತಪಡಿಸಿದ್ದಾರೆ.

ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಮಂಚಬಾಯನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಮುಳ್ಳೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು, ಸರ್ಕಾರಕ್ಕೆ ಗ್ಯಾರಂಟಿ ಯೋಜನೆಗೆ ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡುತ್ತಿದ್ದು, ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಲಾಗುತ್ತಿಲ್ಲ. ಕೊನೇ ಪಕ್ಷ ಹಳ್ಳಿಗಳ ರಸ್ತೆ ದುರಸ್ತಿ ಮಾಡಿಸಲು ಆಗುತ್ತಿಲ್ಲ ಎಂದರು.

ಯಾವ ಹಳ್ಳಿಗಳ ಅಭಿವೃದ್ಧಿಗೂ, ರಸ್ತೆ ಅಭಿವೃದ್ಧಿಗೂ ಕಾಂಗ್ರೆಸ್ ಸರ್ಕಾರದಿಂದ ಅನುದಾನ ಕೊಡುವುದಕ್ಕೆ ಆಗುತ್ತಿಲ್ಲ. ನಮಗೆ ಓಟು ನೀಡಿ ಗೆಲ್ಲಿಸಿದ ಹಳ್ಳಿಗಳ ಅಭಿವೃದ್ಧಿಗೂ ಸರ್ಕಾರದಿಂದ ಹಣ ಬರುತ್ತಿಲ್ಲ. ಇದರಿಂದ ಅಭಿವೃದ್ಧಿ ಕಷ್ಟವಾಗಿದೆ ಎಂದರು. ಇಡೀ ವರ್ಷ ಅಕ್ಷರ ಅಭ್ಯಾಸ ಮಾಡಿಸುವ ಜೊತೆಗೆ ಪ್ರತಿನಿತ್ಯ ಶಾಲಾ ಮಕ್ಕಳಲ್ಲಿರುವ ಪ್ರತಿಭೆಗಳನ್ನು ಗುರುತಿಸಬೇಕು. ಪ್ರತಿಭಾವಂತ ವಿದ್ಯಾರ್ಥಿಗಳ ಚಲನ–ವಲನಗಳ ಬಗ್ಗೆ ಶಿಕ್ಷಕರು ಗಮನ ಹರಿಸಿ ಅವರ ಆಯ್ಕೆಯ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಿದ್ಧಪಡಿಸಿದರೆ ಉನ್ನತ ಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆಯಲು ಸಹಾಯವಾಗುತ್ತದೆ ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ಹೇಮಲತಾ ಮಾತನಾಡಿ ತಾಲೂಕಿನಲ್ಲಿ 26 ಕ್ಲಸ್ಟರ್ ಗಳಲ್ಲಿ ಮಾನ್ಯ ಶಾಸಕರು ಕನಿಷ್ಠ 20 ಕ್ಲಸ್ಟರ್ ಪ್ರತಿಭಾ ಕಾರಂಜಿ ಭಾಗವಹಿ 1 ಚ್ಚು ಗಮನ ಹರಿಸುವ ನಿಟ್ಟಿನಲ್ಲಿ ಕೆಲಸವನ್ನು ಶಿಕ್ಷಣ ಇಲಾಖೆ ಮಾಡುತ್ತಿದೆ.

ಒಂದು ಪಕ್ಷಿ ಗೂಡಿನಿಂದ ಅದರ ಮರಿಗಳನ್ನು ಹೊರ ಬಂದಾಗ ಅವುಗಳು ಬದುಕುವುದನ್ನು ಕಲಿಸಿ ಕೊಡುವಂತೆ ಮಕ್ಕಳ ಪ್ರತಿಭೆಯನ್ನು ಮತ್ತಷ್ಟು ಪ್ರೋತ್ಸಾಹಿಸಿ ಅವರ ಗುರಿಗೆ ತಲುಪಿಸಲು ಶಿಕ್ಷಕರು ಕಷ್ಟಪಟ್ಟು ಮೇಲೆ ತರುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಇದೇ ಸಂದರ್ಭದಲ್ಲಿ ಇತ್ತೀಚಿಗೆ ನಿವೃತ್ತಿಯಾದ ಶಿಕ್ಷಕರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಗ್ರಾಮದ ಯುವಕ ಸಂಘದ ಸದಸ್ಯರು ವಿವಿಧ ಶಾಲೆಗಳಿಂದ ಭಾಗವಹಿಸಿದ ಮಕ್ಕಳಿಗೆ ಉಪಹಾರ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಯೋಗೇಶ್, ಇಸಿಓ ಕೇಶವಮೂರ್ತಿ, ಸಿ.ಆರ್.ಪಿ. ಮಂಜುನಾಥ್, ಮುಖ್ಯ ಶಿಕ್ಷಕ ಸ್ವಾಮಿ, ಗ್ರಾಮ ಪಂಚಾಯಿತಿ ಸದಸ್ಯರು ಗಳು ಗ್ರಾಮದ ಯುವಕ ಸಂಘದ ಪದಾಧಿಕಾರಿಗಳು ಹಾಗೂ ಮಹಿಳಾ ಸಂಘದ ಪದಾಧಿಕಾರಿಗಳು, ಮುಖಂಡರು ಹಾಜರಿದ್ದರು.

ಕಾಳಿಹುಂಡಿ ಶಿವಕುಮಾರ್‌ಗೆ ಗಾನ ಗಾರುಡಿಗ ಪ್ರಶಸ್ತಿ



ಮೈಸೂರು, ಸೆ.15– ಈ ಬಾರಿಯ ಗಣೇಶ ಚತುರ್ಥಿ ಉತ್ಸವದಲ್ಲಿ ಐದು ದಿನಗಳ ಕಾಲ ಗಣೇಶನ ಕುರಿತಾದ ಭಕ್ತಿಗೀತೆ, ಚಿತ್ರಗೀತೆ ಒಳಗೊಂಡಂತೆ ಗಾಯನ ಸ್ಪರ್ಧೆಯನ್ನು "ಝೇಂಕಾರ ವ್ಯಾಟ್ಸಪ್" ಬಳಗದ ಮೂಲಕ ಏರ್ಪಡಿಸಲಾಗಿತ್ತು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಾಳಿಹುಂಡಿ ಶಿವಕುಮಾರ್‌ಗೆ 'ಗಾನ ಗಾರುಡಿಗ ಪ್ರಶಸ್ತಿ' ಸಂದಿದೆ. ರಾಜ್ಯದ ವಿವಿಧ ಗ್ರಾಮದ, ತಾಲೂಕಿನ, ಜಿಲ್ಲೆಯ 50ಕ್ಕೂ ಹೆಚ್ಚು ಗಾಯಕ–ಗಾಯಕಿಯರು ಭಾಗವಹಿಸಿದ್ದರು.

ಡಾ. ಶಿವನಾಗಪ್ಪ ನಿಧನ



ತಿ.ನರಸೀಪುರ, ಸೆ.15– ಪಟ್ಟಣದ ತಾಲೂಕು ಕಚೇರಿ ರಸ್ತೆಯಲ್ಲಿರುವ ಹೆಸರಾಂತ ವೈದ್ಯ ಡಾ. ಶಿವನಾಗಪ್ಪ (80) ಭಾನುವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ ಬೆಳಗ್ಗೆ 9 ರಿಂದ 1 ಗಂಟೆವರೆಗೆ ಆಸ್ಪತ್ರೆ ಮುಂಭಾಗ ಅಂತಿಮ ದರ್ಶನ. ಮಧ್ಯಾಹ್ನ 3 ನಂತರ ಕೊಳ್ಳೇಗಾಲ ತಾಲೂಕಿನ ಕೊಂಗ್ರಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದೆಂದು ಕುಟುಂಬ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಡಾ. ಬಸವಣ್ಣ, ಡಾ. ರವಿಶಂಕರ್ ಸಂತಾಪ ಸೂಚಿದ್ದಾರೆ.

ಶಾಸಕ ಮುನಿರತ್ನ ವಿರುದ್ಧ ನಂ.ಗೂಡು ಠಾಣೆಗೆ ದೂರು

ನಂಜನಗೂಡು, ಸೆ.15– ಗುತ್ತಿಗೆದಾರ ಲಿಂಗರಾಜು ಜೊತೆ ಸೇರಿ ಜಾತಿ ನಿಂದನೆ ಮಾಡಿರುವ ಬೆಂಗಳೂರು ಶಾಸಕ ಮುನಿರತ್ನ ಮೇಲೆ ಕಾನೂನು ಕ್ರಮ ಜರುಗಿಸಿ ಶಿಕ್ಷೆಗೆ ಒಳಪಡಿಸಬೇಕು ಎಂದು ನಂಜನಗೂಡು ಕಾಂಗ್ರೆಸ್ ಘಟಕದ ವತಿಯಿಂದ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಲಾಯಿತು.

ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ ಮಾತನಾಡಿ, ಶಾಸಕ ಮುನಿರತ್ನ ಅವರು ಗುತ್ತಿಗೆದಾರ ಲಿಂಗರಾಜು ಜೊತೆ ಕಮಿಷನ್ ವಿಚಾರವಾಗಿ ಜಾತಿ ನಿಂದನೆ ಮಾಡಿರುವುದಲ್ಲದೆ, ಲಿಂಗರಾಜು ಜೊತೆ ಮಾತನಾಡುತ್ತಾ ಮಹಿಳೆಯರನ್ನು ಅಪಮಾನಗೊಳಿಸುವಂತಹ ಶಬ್ದವನ್ನು ಬಳಕೆ ಮಾಡಿದ್ದಾರೆ. ಅಂಥವರು ಸಾರ್ವಜನಿಕ ಸೇವೆಯಲ್ಲಿರುವುದಕ್ಕೆ ಯೋಗ್ಯರಲ್ಲ, ಆದ್ದರಿಂದ ಶಾಸಕ ಮುನಿರತ್ನ ಮೇಲೆ ಕಾನೂನು ಕ್ರಮ ಜರುಗಿಸಿ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸುನಿಲ್ ಕುಮಾರ್ ಅವರಿಗೆ ದೂರು ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಹುಲ್ಲಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಸಿ.ಎಂ. ಶಂಕರ್, ಮಹದೇವಯ್ಯ, ಜಿ.ಬಸವರಾಜು ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಸೆ.21, ಹುರ ಪಿಎಸಿಸಿಎಸ್ ವಾರ್ಷಿಕ ಮಹಾಸಭೆ

ಮಲ್ಕುಂಡಿ, ಸೆ.15– ನಂಜನಗೂಡು ತಾಲೂಕಿನ ಹುರ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ 2023–24 ನೇ ಸಾಲಿನ ವಾರ್ಷಿಕ ಮಹಾಭೆಯು ಸೆ.21ರಂದು ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷ ಸಣ್ಣಮಾದಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಿಇಓ ನಾಗರಾಜಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಶಾಸಕ ಮುನಿರತ್ನ ಗಡಿಪಾರಿಗೆ ಆಗ್ರಹಿಸಿ ದಸಂಸ ಪ್ರತಿಭಟನೆ



ಜಾತಿ ನಿಂದನೆ ಮಾಡಿರುವ ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿ, ಗಡಿಪಾರು ಮಾಡುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ, ಸೆ.15– ಅಳಕು–ಅಂಜಿಕೆಯಿಲ್ಲದೆ ದಲಿತ ಸಮುದಾಯದ ವ್ಯಕ್ತಿಯ ಜಾತಿ ನಿಂದನೆ ಮಾಡಿ, ಮತ್ತೊಂದು ಸಮುದಾಯದ ಮಹಿಳೆಯರ ಬಗ್ಗೆ ಕೀಳಾಗಿ ಮಾತನಾಡಿರುವ ಬೆಂಗಳೂರು ರಾಜರಾಜೇಶ್ವರಿ ನಗರದ ಶಾಸಕ ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿ, ರಾಜ್ಯದಿಂದಲೇ ಗಡಿಪಾರು ಮಾಡುವಂತೆ ಆಗ್ರಹಿಸಿ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ವೃತ್ತದಲ್ಲಿ ಭಾನುವಾರ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನೆ ನಡೆಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಜಮಾವಣೆಗೊಂಡ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ಬಿಬಿಎಂಪಿ ಗುತ್ತಿಗೆದಾರರೊಬ್ಬರಿಗೆ ಮನೆಯ ಮಹಿಳೆಯರ ಬಗ್ಗೆ ಅಸಭ್ಯವಾಗಿ ಮಾತನಾಡಿ, ಶೋಷಿತ ಸಮುದಾಯದ ಜಾತಿ ನಿಂದನೆ ಮಾಡಿ ಬಂಧಿತರಾಗಿರುವ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತ, ಅವರ ಭಾವಚಿತ್ರಕ್ಕೆ ಬೆಂಕಿಯಿಟ್ಟು ಅರ್ಧ ತಾಸಿಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಎಲ್ಲಾ ವರ್ಗದ ಜನ ಸಮುದಾಯದ ಮತಗಳನ್ನು ಪಡೆದುಕೊಂಡು ಶಾಸಕರಾಗಿರುವ ಮುನಿರತ್ನ ಗುತ್ತಿಗೆದಾರನೊಂದಿಗೆ ಮಾತನಾಡುವಾಗ ಶತಮಾನಗಳಿಂದಲೂ ಜಾತಿಯ ಅಸಹನೆಗೆ ಸಿಲುಕಿ ಶೋಷಣೆಗೆ ಒಳಗಾಗಿರುವ ಸಮುದಾಯದ ಹೆಸರನ್ನು ಬಳಸಿ ಕೀಳಾಗಿ ನಿಂದಿಸಿರುವುದು ಅಕ್ಷಮ್ಯ ಅಪರಾಧವಾಗಿದೆ. ಕೂಡಲೇ ರಾಜ್ಯಪಾಲರು ಹಾಗೂ ವಿಧಾನ ಸಭಾಧ್ಯಕ್ಷರು ಮುನಿರತ್ನ ಅವರ ಶಾಸಕ ಸ್ಥಾನದಿಂದ ಅನರ್ಹಗೊಳಿಸಿ, ಮುಂದಿನ ಎಲ್ಲಾ ಚುನಾವಣೆಗಳಲ್ಲೂ ಸ್ಪರ್ಧಿಸದಂತೆ ನಿರ್ಬಂಧಿಸಬೇಕು. ಕಠಿಣ ಕಾನೂನು ಕ್ರಮಗಳನ್ನು ಜರುಗಿಸಿ ಶಿಕ್ಷೆಗೆ ಗುರಿ ಪಡಿಸಬೇಕು. ತಪ್ಪಿದಲ್ಲಿ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮತ್ತೋರ್ವ ಜಿಲ್ಲಾ ಪ್ರಧಾನ ಸಂಚಾಲಕ ಬನ್ನಹಳ್ಳಿ ಸೋಮಣ್ಣ, ತಾಲೂಕು ಸಂಚಾಲಕ ಕುಕೂರು ರಾಜು ಮಾತನಾಡಿದರು. ಪ್ರತಿಭಟನೆಯಲ್ಲಿ ದಸಂಸ ಸಂಚಾಲಕ ಯಾಚೇನಹಳ್ಳಿ ಸೋಮ ಶೇಖರ್, ಜಿಲ್ಲಾ ಸಂಘಟನಾ ಸಂಚಾಲಕ ಯಡದೊರೆ ಮಹದೇವಯ್ಯ, ಹಿರಿಯೂರು ರಾಜೇಶ್, ಗ್ರಾ.ಪಂ ಸದಸ್ಯ ನಾಗರಾಜು, ಮಾಜಿ ಸದಸ್ಯ ಗಿರಿಯಪ್ಪ, ಯಜಮಾನ್ ಕೃಷ್ಣ, ಸುನೀಲ್ ಬೋಸ್ ಯುವ ಬ್ರಿಗೇಡ್ ಸಂಚಾಲಕ ಕುಮಾರ್ ರಾಮೇಗೌಡ, ಮುಖಂಡರಾದ ಸೋಮಣ್ಣ, ನಾಗರಾಜಮೂರ್ತಿ, ಬನ್ನಹಳ್ಳಿಹುಂಡಿ ಉಮೇಶ್, ಹೊನ್ನಯ್ಯ, ಸುಜ್ಜಲೂರು ಶಿವಯ್ಯ, ಕಿರಗಸೂರು ರಜನಿ, ನವೀನ್, ಪುಟ್ಟರಾಜು, ವಾಟಾಳು ಕೃಷ್ಣ, ನಾಗರಾಜು, ಮನು, ಕರೋಹಟ್ಟಿ ನಾಗೇಶ, ನಾರಾಯಣ್, ರಂಗಸಮುದ್ರ ನಂಜುಂಡ, ಎಂ.ಮಲ್ಲಯ್ಯ, ಅರ್ಜುನ್, ಮಾವಿನಹಳ್ಳಿ ಕುಮಾರ್, ಎಂ.ಬಿ. ಲಿಂಗರಾಜು, ಶಾಂತಕುಮಾರ್, ರಘು, ಬಿಳಿಗೆರೆಹುಂಡಿ ಶಿವಕುಮಾರ್, ಸಿದ್ದರಾಜು, ಮಾದಿಗಹಳ್ಳಿ ರಾಮು, ಬೆನಕನಹಳ್ಳಿ ಅರುಣ್, ಸೋಸಲೆ ದೇವರಾಜು, ಬೆಳ್ಳಿ ರಾಜು, ಕೇತಹಳ್ಳಿ ಹರೀಶ್ ಹಾಗೂ ಇತರರು ಇದ್ದರು.

ಸಹಕಾರಿ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದೆಂದು ಕಾಯ್ದೆ ತಿದ್ದುಪಡಿಗೆ ಪರಿಷತ್‌ನಲ್ಲಿ ತಡೆ

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ

ಮೈಸೂರು, ಸೆ.15(ಜಿಎ)– ಸಹಕಾರಿ ಕ್ಷೇತ್ರದಲ್ಲಿ ಸರ್ಕಾರ ಮತ್ತು ರಾಜಕಾರಣಿಗಳು ಹಸ್ತಕ್ಷೇಪ ಮಾಡಬಾರದು ಎಂಬ ದೃಷ್ಟಿಯಿಂದ ಸಹಕಾರಿ ಕ್ಷೇತ್ರ ನಿಯಮಕ್ಕೆ ತಿದ್ದುಪಡಿ ತಂದಿದ್ದ ಕಾಯ್ದೆಯನ್ನು ವಿಧಾನಪರಿಷತ್ತಿನಲ್ಲಿ ತಡೆಹಿಡಿಯಲಾಗಿತ್ತು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ನಡೆದ 99ನೇ ಸರ್ವ ಸದಸ್ಯರ ವಾರ್ಷಿಕ ಸಭೆ ಮತ್ತು ಸಹಕಾರ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರಿಗಳಲ್ಲಿ ಒಬ್ಬರಿಗೊಬ್ಬರು ತಿಳುವಳಿಕೆಯಿಂದ ಸಹಕಾರ ನೀಡುತ್ತಾ ಹೋದರೆ ಸಹಕಾರ ಕ್ಷೇತ್ರ ದೊಡ್ಡದಾಗಿ ಬೆಳೆಯಲಿದೆ ಎಂದರು.

ಬ್ಯಾಂಕುಗಳಲ್ಲಿ ಷರತ್ತುಗಳನ್ನು ನಿಭಾಯಿಸಿ ಸಾಲ ಪಡೆಯುವ ಕಷ್ಟದ ಸಮಯದಲ್ಲಿ ಸಹಕಾರಿ ಸಂಘಗಳು ನೆರವಾಗಲಿವೆ. ಸಹಕಾರಿ ಸಂಘ–ಸಂಸ್ಥೆಗಳಲ್ಲಿ ಹಣ ಹೂಡಿಕೆ ಮಾಡುವುದು ಮನೆಯಲ್ಲಿಯೇ ಇಟ್ಟಂತೆ. ಸಹಕಾರಿ ಸಂಘಗಳು ಮುನ್ನಡೆಯಲು ಸದಸ್ಯರ ಸಹಕಾರ ಮುಖ್ಯವಾದದ್ದು. ಸಂಸ್ಥೆಯನ್ನು ಪ್ರಾರಂಭಿಸುವುದು ಸುಲಭ. ಆದರೆ, ಯಶಸ್ವಿಯಾಗಿ ಮುನ್ನಡೆಸುವುದು ಸುಲಭವಲ್ಲ. ಇಂತಹ ಸಂದರ್ಭದಲ್ಲಿ ಶ್ರೀ ಕೃಷ್ಣರಾಜೇಂದ್ರ ಸಹಕಾರ ಸಂಘ 99 ವರ್ಷ ಪೂರೈಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪ ಇರಬಾರದು. ರಾಜಕೀಯ ಹಸ್ತಕ್ಷೇಪವಾದರೇ ಸಹಕಾರ ಕ್ಷೇತ್ರದ ಉಳಿವಿಗೆ ಬಹಳ ದೊಡ್ಡ ಹೊಡೆತ ಬೀಳಲಿದೆ. ಸರ್ಕಾರಿ ಹಸ್ತಕ್ಷೇಪ ಇಲ್ಲದೆ ಸ್ವಾಯತ್ತತೆ ಇರಬೇಕು. ಈ ಕುರಿತು ಸದನದಲ್ಲಿ ನಾನು ಮಾತನಾಡಿದ್ದೇನೆ ಎಂದರು.


ಸರ್ಕಾರದ ಹೂಡಿಕೆಯಿಂದ ಸಹಕಾರ ಸಂಘಗಳು ನಡೆಯುತ್ತಿಲ್ಲ. ತಮ್ಮ ಸ್ವಂತ ಹಣದಿಂದ ಸಹಕಾರಿ ಸಂಘಗಳು ಮುನ್ನಡೆಯುತ್ತಿವೆ. ಇತ್ತೀಚೆಗೆ ಸಹಕಾರಿ ಕ್ಷೇತ್ರದಲ್ಲಿ ಬದಲಾವಣೆಗೊಂಡಿವೆ. ವಿಧಾನಸಭಾ, ಲೋಕಸಭಾ ಚುನಾವಣೆಯ ಮಾದರಿಯಲ್ಲಿ ಚುನಾವಣೆಗಳು ನಡೆಯುತ್ತಿವೆ. ಆದರೆ, ಕಳೆದ ಹತ್ತು ವರ್ಷಗಳಿಂದ ಹಿಂದೆ ಸಾಮಾನ್ಯವಾಗಿ ಚುನಾವಣೆಗಳು ನಡೆದು ಪದಾಧಿಕಾರಿಗಳು ಆಯ್ಕೆ ಆಗುತ್ತಿದ್ದರು ಎಂದು ಸ್ಮರಿಸಿದರು.

ಸಹಕಾರ ಸಂಘಗಳ ಸಾಧನೆ ಸರ್ವ ಸದಸ್ಯರ ಭಾಗವಹಿಸುವಿಕೆ ಮತ್ತು ಪ್ರಶ್ನೆ ಮಾಡುವುದು ಮುಖ್ಯ. ಸಹಕಾರಿ ಕ್ಷೇತ್ರದಲ್ಲಿ ಆಡಳಿತ ವ್ಯತ್ಯಾಸ, ಅವ್ಯವಹಾರ ನಡೆದು ಪ್ರಾರಂಭವಾಗಿ ಕೆಲವೇ ವರ್ಷಗಳಲ್ಲಿ ಮುಚ್ಚುವ ಹಂತ ತಲುಪಲಿವೆ. ಆಡಳಿತ ಪಾರದರ್ಶಕವಾಗಿದ್ದರೆ ಮಾತ್ರ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ನಡೆಯಲು ಸಾಧ್ಯ. ಪಾರದರ್ಶಕ ವ್ಯವಹಾರದಿಂದ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ಶತಮಾನೋತ್ಸವದ ಹೊಸ್ತಿಲಿಗೆ ಬರಲು ಕಾರಣವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸರ್ವ ಸದಸ್ಯರ ಸಭೆಗಳಿಂದ ಸಹಕಾರಿ ಸಂಘಗಳು ಯಶಸ್ವಿಯಾಗಿ ನಡೆಯಲು ಸಾಧ್ಯ ಚುನಾವಣೆಗಳು ನಡೆದ ಬಳಿಕ ಮನಸ್ತಾಪಗಳನ್ನು ಬಿಟ್ಟು ಒಂದುಗೂಡಿ ಕೆಲಸ ಮಾಡಬೇಕು. ಆಗ ಸಂಘವು ಮುಂದುವರಿಯಲಿದೆ ಎಂದರು.

ಸಹಕಾರ ರತ್ನ ಪ್ರಶಸ್ತಿ : ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿಗಳಾದ ಕೆ.ವಿ. ನರಸಿಂಹಶೆಟ್ಟಿ, ಬಿ.ಪುಟ್ಟಸ್ವಾಮಿ, ಎಸ್.ಬಿ. ವಿಜಯಕುಮಾರ್, ಎಸ್.ಸದಾನಂದ, ಎಂ.ಕೆ.ಪುಟ್ಟಸ್ವಾಮಿ, ಸಿದ್ದರಾಜು, ಪಿ.ಸಿ.ನಾಗರಾಜನ್, ಕೆ.ಎಲ್.ಅನಂತರಾಮಯ್ಯ, ಎನ್.ನಾಗರಾಜು, ಡಿ.ರಾಮು, ಜಿ.ಕೃಷ್ಣ, ಕೆ.ಚಂದ್ರ ಚನ್ನಯ್ಯ, ಬಾಲಂಬ, ಕಾತ್ಯಾಯಿನಿ, ಎನ್.ಜಯಲಕ್ಷ್ಮಿ, ಕೆಆರ್.ಸೀತಾಲಕ್ಷ್ಮಿ, ಸುಶೀಲಮ್ಮ, ಡಿ.ಆಶಾ ಕುಮಾರಿ, ಕೆ.ಎಸ್.ಸುನಂದ ಅವರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.


ಈ ವೇಳೆ ಶ್ರೀ ಕುಂದೂರು ಮಠದ ಅಧ್ಯಕ್ಷ ಡಾ.ಶ್ರೀ ಶರತ್‌ಚಂದ್ರ ಸ್ವಾಮೀಜಿ, ಶ್ರೀ ಕೃಷ್ಣರಾಜೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್, ಉಪಾಧ್ಯಕ್ಷ ಡಿ.ಬಸವರಾಜು (ಬಸಪ್ಪ), ನಿರ್ದೇಶಕರಾದ ಎಂ.ಡಿ.ಪಾರ್ಥಸಾರಥಿ, ಸರ್ವಮಂಗಳ, ನವೀನ್ ಕುಮಾರ್, ಎಚ್.ವಿ.ಭಾಸ್ಕರ್, ಅರುಣ್ ಸಿದ್ದಪ್ಪ ನಾಗೇಂದ್ರಪ್ರಸಾದ್ ವಾಟಾಳ್, ಬಿ.ನಾಗರಾಜು, ವೃತ್ತಿಪರ ನಿರ್ದೇಶಕ ಎ.ಶ್ರೀನಿವಾಸ ಶೆಟ್ಟಿ, ವಿ.ಎಂ.ನಾಗೇಂದ್ರ ಪ್ರಸಾದ್, ಪ್ರಭಾರ ವ್ಯವಸ್ಥಾಪಕ ಡಿ.ಅನಂತವೀರಪ್ಪ ಉಪಸ್ಥಿತರಿದ್ದರು.



ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ನಡೆದ 99ನೇ ಸರ್ವ ಸದಸ್ಯರ ವಾರ್ಷಿಕ ಸಭೆ ಮತ್ತು ಸಹಕಾರ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಿದರು.

> ಶಾಸಕ ಜಿ.ಟಿ.ದೇವೇಗೌಡ ಮತ್ತು ನಾನು ಆತ್ಮೀಯರು. ಆದರೆ, ಅವರ ಪುತ್ರರ ಬಗ್ಗೆ ತಿಳಿದಿರಲಿಲ್ಲ. ವಿಧಾನಸಭಾ ಚುನಾವಣೆಯಲ್ಲಿ ಆರಿಸಿ ಬಂದ ನಂತರ ತಿಳಿಯಿತು. ಯೋಗ್ಯ ಶಾಸಕರನ್ನು ಆಯ್ಕೆ ಮಾಡಿದ ಹುಣಸೂರು ಜನತೆಗೆ ಕೃತಜ್ಞತೆ ಸಲ್ಲಿಸುತ್ತೇನೆ.
> -ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸಭಾಪತಿ

ಕೇಂದ್ರ ವಿಮಾನಯಾನ ಸಚಿವರ ಭೇಟಿ ಮಾಡಿದ ಸಂಸದ ಯದುವೀರ್



ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಅವರನ್ನು ಭೇಟಿ ಮಾಡಿದ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ ಮತ್ತು ಮೈಸೂರಿಗೆ ಹೆಚ್ಚಿನ ವಿಮಾನಗಳ ಸಂಪರ್ಕ ಕಲ್ಪಿಸುವ ಸಂಬಂಧ ಅವರೊಂದಿಗೆ ಚರ್ಚಿಸಿದರು. ಉತ್ತಮ ವಿಮಾನಯಾನ ಸಂಪರ್ಕ ಹೊಂದುವುದರ ಮಹತ್ವ, ಇದರಿಂದ ವ್ಯಾಪಾರ, ವಾಣಿಜ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಯಾಗಿ ಮೈಸೂರು ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗಲಿದೆ ಎಂದು ಸಂಸದರು ವಿವರಿಸಿದರು. ಅಲ್ಲದೆ, ಕೊಚ್ಚಿ, ಗೋವಾ, ಮುಂಬೈ ಮತ್ತು ಹೈದರಾಬಾದ್‌ಗೆ ಸಹ ವಿಮಾನ ಸಂಪರ್ಕ ಹೆಚ್ಚಿಸಲು ಆದ್ಯತೆ ನೀಡಬೇಕೆಂದು ಸಂಸದರು ಕೋರಿದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, ಕ್ರಮ ವಹಿಸುವ ಭರವಸೆ ನೀಡಿದರು. ಈ ವೇಳೆ ವಿಜಯವಾಡ–ದೆಹಲಿ ಇಂಡಿಗೋ ವಿಮಾನದ ಟಿಕೇಟನ್ನು ಪ್ರದರ್ಶಿಸಲಾಯಿತು.

ಬಾಲ್ಯ ವಿವಾಹ: 12 ಮಂದಿ ವಿರುದ್ಧ ಕೇಸ್

ಮೈಸೂರು, ಸೆ.15– ವರ್ಷದ ಹಿಂದೆ ನಡೆದಿದ್ದ ಬಾಲ್ಯ ವಿವಾಹ ಸಂಬಂಧ 12 ಮಂದಿ ವಿರುದ್ಧ ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೇಟಗಳ್ಳಿ ಠಾಣೆ ವ್ಯಾಪ್ತಿಯ ಗ್ರಾಮವೊಂದರ 16 ವರ್ಷದ ಬಾಲಕಿಗೆ 2023ರ ಜುಲೈ ತಿಂಗಳಲ್ಲಿ ಬಲವಂತವಾಗಿ ವಿವಾಹ ಮಾಡಲಾಗಿತ್ತು. ಸದ್ಯ ಬಾಲಮಂದಿರದಲ್ಲಿರುವ ಆ ಬಾಲಕಿಗೆ ಆಪ್ತ ಸಮಾಲೋಚನೆ ನಡೆಸಿದ ವೇಳೆ ವಿವಾಹದ ಬಗ್ಗೆ ಮಾಹಿತಿ ತಿಳಿದಿದೆ. ಈ ಹಿನ್ನೆಲೆಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಮೇಲ್ವಿಚಾರಕಿಯೊಬ್ಬರು ಮೊನ್ನೆ ನೀಡಿರುವ ದೂರಿನನ್ವಯ ಬಾಲಕಿಯನ್ನು ವಿವಾಹವಾದ ಯುವಕ, ಆತನ ಪೋಷಕರು, ಸಂಬಂಧಿಕರು, ಬಾಲಕಿ ಪೋಷಕರು ಸೇರಿದಂತೆ ಒಟ್ಟು 12 ಮಂದಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹಿಂದೂಗಳ ಮನೆಗೆ ಒಂದೇ ಮಗು ಸಾಕು ಎಂಬುದು ತಪ್ಪು

• ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ ಅಭಿಮತ • ಇದರಿಂದ ಧರ್ಮ ನಶಿಸಿ ಹೋಗುತ್ತದೆ • ಎಲ್ಲರೂ ಎಲ್ಲಾ ಧರ್ಮದವರನ್ನು ಗೌರವಿಸಬೇಕು

ಮೈಸೂರು, ಸೆ.15(ಜಿಎ)–ಹಿಂದೂಗಳ ಮನೆಗೆ ಒಂದು ಮಗು ಸಾಕು ಎಂಬುದು ತಪ್ಪು. ಹಾಗೆ ಮಾಡುತ್ತ ಹೋದರೆ ಧರ್ಮ ಹೊರಟು ಹೋಗುತ್ತದೆ. ಹೆಚ್ಚು ಮಕ್ಕಳು ಯಾಕಾಗಬಾರದು ಎಂದು ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಪ್ರಶ್ನಿಸಿದ್ದಾರೆ.

ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ, ದತ್ತ ಸೇನೆ ಹಾಗೂ ಮೈಸೂರು ನಾಗರಿಕರು ಆಶ್ರಮದ ನಾದಮಂಟಪದಲ್ಲಿ ಭಾನುವಾರ 170ನೇ ವಿಶ್ವಧರ್ಮ ವಿಜಯ ಯಾತ್ರೆ ಪೂರೈಸಿದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗುರುವಂದನೆ ಸ್ವೀಕರಿಸಿ ಮಾತನಾಡಿದ ಅವರು, ನಾವು ನಮ್ಮ ಧರ್ಮವನ್ನು ಉಳಿಸಿಕೊಳ್ಳಬೇಕಾದರೆ ಸಮುದ್ರಾಲೋಂಘನವನ್ನಾದರೂ ಮಾಡಿ ಧರ್ಮ ಪ್ರಚಾರ ನಡೆಸಬೇಕು ಹಾಗೂ ಒಂದೇ ಮಗು ಸಾಕು ಎಂಬುದನ್ನು ಬಿಡಬೇಕು ಎಂದರು.

ಪ್ರತಿಯೊಬ್ಬರೂ ಎಲ್ಲಾ ಧರ್ಮವನ್ನು ಗೌರವಿಸಬೇಕು. ಸತ್ಯ ಮತ್ತು ದಯೆ ಇರಬೇಕು. ಯಾರೋ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಿದರೆ, ಅವರು ಮನೆಯೇ ನಮ್ಮದು ಎಂದಾಗ ಸುಮ್ಮನಿರಬಾರದು. ಇನ್ನೊಬ್ಬರನ್ನು ಒಡೆದು ಬದುಕುವುದನ್ನು ಒಪ್ಪಲಾಗದು ಎಂದು ಶ್ರೀಗಳು ತಿಳಿಸಿದರು.

ದತ್ತ ಜನಾಂಗದವರೆಲ್ಲ ಒಂದಾಗಬೇಕು. ನಾವು ಎಂಟು ಚರ್ಚ್ ಖರೀದಿಸಿ ಆಶ್ರಮ ಕಟ್ಟಿದ್ದೇವೆ. ವಿದೇಶಿಗರು ಅಲ್ಲಿ ಆಶ್ರಮ ಕಟ್ಟಲು 58 ಕೋಟಿ ಕೊಟ್ಟಿದ್ದಾರೆ. ಮನೆ ಕೂಡ ಇಲ್ಲದವರೂ ದೇಣಿಗೆ ನೀಡಿದ್ದಾರೆ. ನಾವು ಉಳಿಸಬೇಕಿರುವುದು ಜನಗಳ ಧರ್ಮವನ್ನು. ಇಲ್ಲವಾದರೆ ನಿಮ್ಮ ಮೊಮ್ಮಕ್ಕಳ ಕಾಲಕ್ಕೆ ಪರಿಣಾಮ ಏನಾಗುತ್ತದೆಯೋ ನೋಡಿ ಎಂದರು.

ತೆನಾಲಿಯಲ್ಲಿ ಆಯೋಜಿಸಿದ್ದ ಭಜನೆ ಕಾರ್ಯಕ್ರಮಕ್ಕೆ ಅಲ್ಲಿನ ಜನ ತಾವು ಬೆಳೆದಿದ್ದ ಬೆಳೆಯನ್ನು ಕಿತ್ತು ಜಮೀನು ಬಿಟ್ಟು ಕೊಟ್ಟರು. ಧರ್ಮಾನುಷ್ಠಾನಕ್ಕೆ ನಾವು ಪ್ರೇರೇಪಿಸಿದರೆ ಜನರಲ್ಲಿ ಎಷ್ಟು ಉತ್ಸಾಹ ಇರುತ್ತದೆ ಎಂಬುದಕ್ಕೆ ಇದು ಸಾಕ್ಷಿ. ನಾವು ಏನನ್ನಾದರೂ ಸಾಧಿಸಬೇಕು ಎಂದು ಹೇಳಿದರು.

ಸಂಕಲ್ಪ ಮಾಡಿಕೊಂಡರೆ ಏನಾದರೂ ಸಾಧಿಸಬಹುದು ಇದರಿಂದ ಪರಮಾತ್ಮ ಒಲಿಯುತ್ತಾನೆ. 1976 ರಿಂದ ವಿದೇಶಕ್ಕೆ ಹೋಗುತ್ತಿದ್ದೇನೆ. ಮೊದಲು ನಾನು ವೆಸ್ಟ್ ಇಂಡಿಸ್‌ನ ಗಯಾನ ಮುಂತಾದ ಕಡೆ ಹೋಗಿದ್ದೆ. ಅಲ್ಲಿ ಹೆಚ್ಚು ಹಿಂದೂಗಳು ಇದ್ದಾರೆ. ಸುಮಾರು 180 ವರ್ಷದಿಂದ ಅಲ್ಲಿಯೇ ಇದ್ದಾರೆ. ಅವರೆಲ್ಲರೂ ಬಡವರು. ಗಯಾನದಲ್ಲಿ ಪ್ರಸಿದ್ಧ ಹಿಂದೂ ದೇವಾಲಯವಿದ್ದು, ಅಲ್ಲಿ ಬಲಿ ನೀಡಲಾಗುತ್ತಿತ್ತು ನಮ್ಮನ್ನು ಆಹ್ವಾನಿಸಿದಾಗ ಬಲಿ ನಿಷೇಧಿಸಿದರೆ ಬರುವುದಾಗಿ ಷರತ್ತು ವಿಧಿಸಿದೆ. ಅದಕ್ಕೆ ಒಪ್ಪಿ ಅಲ್ಲಿ ಬಲಿ ನಿಷೇಧಿಸಿದ್ದಾರೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ರವಿ ಹೆಗಡೆ ಮಾತನಾಡಿ, ಸನ್ಯಾಸಿಗಳು ಸಮುದ್ರಾಲೋಂಘನೆ ಮಾಡುವುದು ಬೇಕೆ, ಬೇಡವೇ ಎಂಬ ಬಗ್ಗೆ ಸಾಕಷ್ಟು ದ್ವಂದ್ವ ಇದೆ. ಆದರೆ ಸ್ವಾಮೀಜಿಗಳು ಎಷ್ಟು ಸಾಧ್ಯವೋ ಅಷ್ಟು ಸಮುದ್ರಾಲೋಂಘನೆ ಮಾಡಬೇಕು. ಭಕ್ತರು, ಹಿಂದು ಪರಂಪರೆ ಪಾಲಿಸುವವರು ಎಲ್ಲಾ ಕಡೆ ಇದ್ದಾರೆ. ಜಾಗತೀಕರಣದ ಪ್ರಭಾವದಿಂದಾಗಿ ಬೇರೆ ಬೇರೆ ಕಡೆ ಇರುವವರಿಗೆ ಗುರುತಿಸಿಕೊಳ್ಳುವಿಕೆ (ಐಡೆಂಟಿಟಿ) ಸಮಸ್ಯೆ ಇದೆ. ಅಂತವರ ಜತೆ ನಿಂತಾಗ ಅವರಿಗೆ ಬೆಂಬಲ ದೊರಕಿದಂತೆ ಆಗುತ್ತದೆ ಎಂದರು.

ಧರ್ಮ ಮರು ಸ್ಥಾಪಿಸುವಾಗ ಇಂತಹ ವಿದೇಶ ಪ್ರಯಾಣಗಳು, ವಿಶ್ವ ಪರ್ಯಟನೆಗಳು ಆಗಬೇಕಾಗುತ್ತದೆ. ಬೌದ್ಧ ಧರ್ಮ ಭಾರತದಲ್ಲಿ ಆರಂಭವಾದರೂ, ಏಷ್ಯಾ ಖಂಡ ದಾಟಿ ಜಪಾನ್, ಶ್ರೀಲಂಕದವರೆಗೆ ವ್ಯಾಪಿಸಿದೆ. ಧರ್ಮದ ಮಹತ್ವ ಅರಿತದ್ದರಿಂದ ಬೇರೆ ಧರ್ಮದವರು ಅಳವಡಿಸಿಕೊಳ್ಳಲು ಸಾಧ್ಯವಾಯಿತು. ಅಂತೆಯೇ ಸನಾತನ ಧರ್ಮ ಎಂಬುದರ ಸಂಸ್ಕೃತಿ, ಜ್ಞಾನ ವಿಸ್ತಾರವಾಗಿದೆ ಅದನ್ನು ತಿಳಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ವಿದ್ವಾಂಸ ಡಾ. ಪಾವಗಡ ಪ್ರಕಾಶರಾವ್ ಅವರು ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಶ್ರೀ ದತ್ತ ವಿಜಯಾನಂದ ಸ್ವಾಮೀಜಿ, ಭಾನುಪ್ರಕಾಶ ಶರ್ಮ, ಶಾಸಕ ಟಿ.ಎಸ್. ಶ್ರೀವತ್ಸ, ಉದ್ಯಮಿ ಮಹೇಶ್ ಶೆಣೈ, ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ನಟರಾಜ ಜೋಯ್ಸ್, ಮುಖಂಡ ರಘುರಾಂ ವಾಜಪೇಯಿ, ದತ್ತಸೇನೆ ಅಧ್ಯಕ್ಷ ಆರ್.ಎನ್. ಸತ್ಯನಾರಾಯಣ, ಕಾರ್ಯದರ್ಶಿ ಮುರಳಿ, ಅರಿವು ಸಂಸ್ಥೆ ಅಧ್ಯಕ್ಷ ಹೆಚ್.ಎನ್. ಶ್ರೀಕಾಂತ್ ಕಶ್ಯಪ್, ಅಮರ ವಿಪ್ರ ಬಳಗ ಅಧ್ಯಕ್ಷ ರಾಜ್‌ಕುಮಾರ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ದತ್ತ ಸೇನೆ ಹಾಗೂ ಮೈಸೂರು ನಾಗರಿಕರು ಆಶ್ರಮದ ನಾದಮಂಟಪದಲ್ಲಿ ಭಾನುವಾರ 170ನೇ ವಿಶ್ವಧರ್ಮ ವಿಜಯ ಯಾತ್ರೆ ಪೂರೈಸಿದ ಹಿನ್ನೆಲೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗೆ ಗುರುವಂದನೆ ಸಲ್ಲಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡಬ್ಬಲ್ ಇಸ್ಮಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾನಿ (ಕ)	4 ಪ್ರದರ್ಶನಗಳು
ರಾಜಕಮಲ್	
ಎಆರ್‌ಎಂ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಕಳಿಂಗ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ವಿಕಾಸಪರ್ವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ಬೆ.10.45ಕ್ಕೆ, ಶಾಲಿವಾಹನ ಶಕೆ (ಕ): ಮ.1.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಸಂ.4ಕ್ಕೆ, ಎಆರ್‌ಎಂ (3ಡಿ) (ಮ): ರಾ.7.05ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ರಾ.9.55ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.11.10ಕ್ಕೆ, ಸ್ತ್ರೀ 2 (ಹಿಂ): ಮ.1.35ಕ್ಕೆ, ಕಲ್ಜಿಗ (ಕ): ಸಂ.4.35ಕ್ಕೆ, ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ರಾ.7.05ಕ್ಕೆ, ಕೊಂಡಲ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ರಾನಿ (ಕ): ಬೆ.10.45ಕ್ಕೆ, ಮ.1.45ಕ್ಕೆ, ಅನ್ನ (ಕ): ಸಂ.4.45ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10ಕ್ಕೆ.
ಸ್ಕ್ರೀನ್ 4	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ, ವಿಕಾಸಪರ್ವ (ಕ): ಮ.1.40ಕ್ಕೆ, ಉತ್ಸವಂ (ತೆ): ಸಂ.4ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.25ಕ್ಕೆ, ರಾ.9.30ಕ್ಕೆ, ರಾನಿ (ಕ): ಮ.1.45ಕ್ಕೆ, ಕಾಲಾಪತ್ಥರ್ (ಕ): ಸಂ.4.35ಕ್ಕೆ, ಮಾತು ವದಲಾರ 2 (ತೆ): ಸಂ.6.50ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.10.20ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.12.35ಕ್ಕೆ, ಸಂ.6.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.40ಕ್ಕೆ, ಎಆರ್‌ಎಂ (3ಡಿ) (ಮ): ರಾ.9.50ಕ್ಕೆ.
ಸ್ಕ್ರೀನ್ 3	ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.45ಕ್ಕೆ, ಎಆರ್‌ಎಂ (3ಡಿ) (ಮ): ಮ.3.20ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕಳಿಂಗ (ತೆ): ರಾ.9.35ಕ್ಕೆ.
ಸ್ಕ್ರೀನ್ 4	ಶಾಲಿವಾಹನ ಶಕೆ (ಕ): ಬೆ.10.40ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1.20ಕ್ಕೆ, ಕಲ್ಜಿಗ (ಕ): ಸಂ.4.25ಕ್ಕೆ, ರಾನಿ (ಕ): ಸಂ.6.40ಕ್ಕೆ, ಉತ್ಸವಂ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಸ್ ಹತ್ತುವಾಗ ಮಾಂಗಲ್ಯ ಸರ ಕಳವು

ಮೈಸೂರು, ಸೆ.15– ಬಸ್ ಹತ್ತುವಾಗ ಮಹಿಳೆಯ ಮಾಂಗಲ್ಯ ಸರ ಕಳುವಾಗಿರುವ ಘಟನೆ ಮೈಸೂರಿನ ಸುಬರ್ಬನ್ ಬಸ್ ನಿಲ್ದಾಣದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಶಿವಮೊಗ್ಗ ಜಿಲ್ಲೆ, ಸೊರಬ ತಾಲೂಕಿನವರಾದ ಶ್ರೀಮತಿ ಹನುಮಂತಿ(52) ಸುಮಾರು 1.15 ಲಕ್ಷ ರೂ. ಮೌಲ್ಯದ 23 ಗ್ರಾಂ ಮಾಂಗಲ್ಯ ಸರ ಕಳೆದುಕೊಂಡಿದ್ದಾರೆ. ಇವರ ಪುತ್ರಿ ಮೈಸೂರು ಜಿಲ್ಲೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿದ್ದು, ಹನುಮಂತಿ ಅವರೂ ಜೊತೆಗಿದ್ದಾರೆ. ಗೌರಿ–ಗಣೇಶ ಹಬ್ಬಕ್ಕೆ ಊರಿಗೆ ಹೋಗಲು ಸೆ.6ರಂದು ಶಿವಮೊಗ್ಗ ಮಾರ್ಗದ ಬಸ್ ಹತ್ತುವಾಗ ರಶ್‌ನಲ್ಲಿ ಖದೀಮರು ಸರ ಕಿತ್ತುಕೊಂಡಿದ್ದಾರೆ ಎಂದು ಊರಿನಿಂದ ವಾಪಸ್ಸಾದ ನಂತರ ಲಷ್ಕರ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಖದೀಮರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ದೇಶ - ವಿದೇಶ

ರಾಜಸ್ಥಾನದಲ್ಲಿ ಭೀಕರ ರಸ್ತೆ ಅಪಘಾತ: 6 ಯಾತ್ರಾರ್ಥಿಗಳು ಸ್ಥಳದಲ್ಲೇ ದುರ್ಮರಣ

ಕೋಟಾ: ವೇಗವಾಗಿ ಬಂದ ಟ್ರಕ್‌ವೊಂದು ವ್ಯಾನ್‌ಗೆ ಡಿಕ್ಕಿ ಹೊಡೆದ ಪರಿಣಾಮ 6 ಮಂದಿ ಯಾತ್ರಾರ್ಥಿಗಳು ಸ್ಥಳದಲ್ಲೇ ದುರ್ಮರಣವನ್ನಪ್ಪಿರುವ ಘಟನೆ ರಾಜಸ್ಥಾನದ ಬುಂಡಿ ಜಿಲ್ಲೆಯಲ್ಲಿ ಭಾನುವಾರ ನಡೆದಿದೆ.



ಮಧ್ಯಪ್ರದೇಶದ ದೇವಾಸ್ ಜಿಲ್ಲೆಯ ಒಂಬತ್ತು ಯಾತ್ರಾರ್ಥಿಗಳು ಸಿಕರ್ ಜಿಲ್ಲೆಯ ಖತು ಶ್ಯಾಮ್ ದೇವಸ್ಥಾನಕ್ಕೆ ತೆರಳುತ್ತಿದ್ದಾಗ ಮುಂಜಾನೆ 5 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ.

ಮೃತರು 16–40 ವರ್ಷ ವಯೋಮಾನದವರಾಗಿದ್ದು, ಮದನ್ ನಾಯಕ್, ಮಂಗಿಲಾಲ್ ನಾಯಕ್, ಮಹೇಶ್ ನಾಯಕ್, ರಾಜೇಶ್ ಮತ್ತು ಪುನಂ ಎಂದು ಗುರುತಿಸಲಾಗಿದೆ. ಓರ್ವ ವ್ಯಕ್ತಿಯ ಗುರುತು ಇನ್ನೂ ಪತ್ತೆಯಾಗಿಲ್ಲ ಎನ್ನಲಾಗಿದೆ. ಇದೀಗ ಡಿಕ್ಕಿ ಹೊಡೆದು ಪರಾರಿಯಾಗಿರುವ ಟ್ರಕ್ ಚಾಲಕನಿಗಾಗಿ ಪೊಲೀಸರು ಹುಡುಕಾಟ ಆರಂಭಿಸಿದ್ದಾರೆ.

ಎರಡೇ ದಿನಗಳಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ; ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಘೋಷಣೆ

ನವದೆಹಲಿ: ಜೈಲಿನಿಂದ ಬಿಡುಗಡೆಯಾದ ನಂತರ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾಡಿದ ಮೊದಲ ಭಾಷಣದಲ್ಲಿ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರು ಇನ್ನೆರಡು ದಿನಗಳಲ್ಲಿ ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಭಾನುವಾರ ಹೇಳಿದ್ದಾರೆ. ತಮ್ಮ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ರೂಪಿಸಿರುವ ಪಿತೂರಿಗಳು ತಮ್ಮ ಬಂಡೆಯಂತಹ ಸಂಕಲ್ಪವನ್ನು ಮುರಿಯಲು ಸಾಧ್ಯವಿಲ್ಲ ಮತ್ತು ದೇಶಕ್ಕಾಗಿ ಹೋರಾಡುವುದನ್ನು ಮುಂದುವರಿಸುವುದಾಗಿ ಹೇಳಿದರು.



ನ್ಯಾಯಾಲಯವು ನಮ್ಮ ಪರವಾಗಿ ಎಲ್ಲವನ್ನೂ ಮಾಡಿದೆ. ನಾವು ನ್ಯಾಯಾಲಯಕ್ಕೆ ತುಂಬಾ ಕೃತಜ್ಞರಾಗಿರುತ್ತೇವೆ. ನ್ಯಾಯಾಲಯ ನನಗೆ ಜಾಮೀನು ನೀಡಿದೆ. ಈಗ ಪ್ರಕರಣ ಮುಂದುವರಿಯಲಿದೆ. ನ್ಯಾಯಾಲಯ ನನ್ನನ್ನು ಖುಲಾಸೆಗೊಳಿಸುವವರೆಗೂ ನಾನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳುವುದು ಬೇಡ ಎಂದು ನನ್ನ ಹೃದಯ ಹೇಳುತ್ತದೆ ಎಂದು ಅವರು ಹೇಳಿದರು.

ಅಧಿಕಾರಕ್ಕೆ ಬಂದ ಒಂದೇ ಗಂಟೆಯಲ್ಲಿ ಮದ್ಯ ನಿಷೇಧ ತೆರವು: ಪ್ರಶಾಂತ್ ಕಿಶೋರ್ ಘೋಷಣೆ

ಪಾಟ್ನಾ: ತಮ್ಮ ಜನ ಸೂರಜ್ ಪಕ್ಷ ಅಧಿಕಾರಕ್ಕೆ ಬಂದ ಒಂದೇ ಗಂಟೆಯಲ್ಲಿ ಮದ್ಯ ನಿಷೇಧ ನೀತಿಯನ್ನು ಅಂತ್ಯಗೊಳಿಸುವುದಾಗಿ ಪಕ್ಷದ ಅಧ್ಯಕ್ಷ ಪ್ರಶಾಂತ್ ಕಿಶೋರ್ ಘೋಷಿಸಿದ್ದಾರೆ.



ಮುಂಬರುವ ಅಕ್ಟೋಬರ್‌ನಲ್ಲಿ ತಮ್ಮ ಜನ ಸೂರಜ್ ಪಕ್ಷಕ್ಕೆ ಅಧಿಕೃತವಾಗಿ ಚಾಲನೆ ನೀಡಲಿರುವ ಪ್ರಶಾಂತ್ ಕಿಶೋರ್ ಇದಕ್ಕೂ ಮೊದಲೇ ರಾಜ್ಯದಲ್ಲಿರುವ ಮದ್ಯ ನಿಷೇಧವನ್ನು ತೆರವುಗೊಳಿಸುವುದಾಗಿ ಘೋಷಣೆ ಮಾಡಿದ್ದು, ಪ್ರಶಾಂತ್ ಕಿಶೋರ್ ಅವರ ಈ ಘೋಷಣೆ ಇದೀಗ ಬಿಹಾರ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ.

ಪ್ರಶಾಂತ್ ಕಿಶೋರ್ ಅಕ್ಟೋಬರ್ 2 ರಂದು ಪಾಟ್ನಾದಲ್ಲಿ ಜನ ಸೂರಜ್ ಅವರ ಪಕ್ಷಕ್ಕೆ ಚಾಲನೆ ನೀಡಲಿದ್ದು, ಇದಕ್ಕಾಗಿ ಪ್ರತ್ಯೇಕ ಸಿದ್ಧತೆ ಮಾಡಿಕೊಳ್ಳುವ ಅಗತ್ಯವಿಲ್ಲ. ಕಳೆದ ಎರಡು ವರ್ಷಗಳಿಂದ ತಯಾರಿ ನಡೆಸುತ್ತಿದ್ದೇವೆ. ಜನ ಸೂರಜ್ ಸರ್ಕಾರ ರಚನೆಯಾದರೆ ಒಂದು ಗಂಟೆಯೊಳಗೆ ಮದ್ಯ ನಿಷೇಧವನ್ನು ಕೊನೆಗೊಳಿಸುತ್ತೇವೆ ಎಂದು ಘೋಷಿಸಿದ್ದಾರೆ. ಏಪ್ರಿಲ್ 1, 2016 ರಲ್ಲಿ ಬಿಹಾರದಲ್ಲಿ ಮದ್ಯಪಾನ ನಿಷೇಧ ಜಾರಿಯಾಗಿತ್ತು.

ಪೆಟ್ರೋಲ್ ತುಂಬಿದ್ದ ಟ್ಯಾಂಕರ್ ಪಲ್ಟಿ, ಭಾರಿ ಸ್ಫೋಟ, 25 ಮಂದಿ ಸಾವು

ಹೈತಿ: ಪೆಟ್ರೋಲ್ ಸಾಗಿಸುತ್ತಿದ್ದ ಟ್ಯಾಂಕರ್ ಪಲ್ಟಿಯಾದ ಪರಿಣಾಮ ಭಾರಿ ಸ್ಫೋಟ ಸಂಭವಿಸಿ 25 ಮಂದಿ ಸಾವನ್ನಪ್ಪಿರುವ ಘಟನೆ ಹೈತಿಯಲ್ಲಿ ನಡೆದಿದೆ 40 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಂಭೀರವಾಗಿ ಸುಟ್ಟ ರೋಗಿಗಳಿಗೆ ಚಿಕಿತ್ಸೆ ನೀಡಲು ಹೈತಿಯ ಆಸ್ಪತ್ರೆಗಳು ಸಾಕಷ್ಟು ಸೌಲಭ್ಯಗಳನ್ನು ಹೊಂದಿಲ್ಲ.

ನಗರದ ಪೂರ್ವ ಅಂಚಿನಲ್ಲಿರುವ ಸನ್ಮಾರಿ ಪ್ರದೇಶದಲ್ಲಿ ಮಧ್ಯರಾತ್ರಿ ಪೆಟ್ರೋಲ್ ಸಾಗಿಸುತ್ತಿದ್ದ ಟ್ರಕ್ ಶನಿವಾರ ಪಲ್ಟಿಯಾದ ನಂತರ ಟ್ಯಾಂಕರ್ ಸ್ಫೋಟಗೊಂಡಿದೆ. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಘಟನೆಯಲ್ಲಿ ಸುಮಾರು 20 ಮನೆಗಳೂ ಸುಟ್ಟು ಕರಕಲಾಗಿದ್ದವು.

ಟ್ಯಾಂಕರ್ ಪಲ್ಟಿಯಾದ ನಂತರ ಕೆಲವರು ರಸ್ತೆಯಲ್ಲಿ ಸುರಿದ ಪೆಟ್ರೋಲ್ ಸಂಗ್ರಹಿಸಲು ಓಡಿದರು. ಈ ಸಂದರ್ಭದಲ್ಲಿ ಇಂಧನ ಟ್ಯಾಂಕರ್‌ನಲ್ಲಿ ಸ್ಫೋಟ ಸಂಭವಿಸಿದೆ. ಬೆಂಕಿ ವೇಗವಾಗಿ ಹರಡಿತು. ಇದರಿಂದಾಗಿ ಜನರು ಸಜೀವ ದಹನವಾದರು.

ಈ ಅಪಘಾತದ ಬಗ್ಗೆ ಸಂತಾಪ ವ್ಯಕ್ತಪಡಿಸಿರುವ ದೇಶದ ಪ್ರಧಾನಿ ಏರಿಯಲ್ ಹೆನ್ರಿ, ಸುಟ್ಟಗಾಯಗಳಿಂದ ಸಾವನ್ನಪ್ಪಿರುವವರ ಗುರುತು ಪತ್ತೆ ಹಚ್ಚುವುದು ಕಷ್ಟದ ವಿಷಯವಾಗಿದೆ ಎಂದು ಹೇಳಿದರು.

ಹವಾಮಾನ ವೈಪರೀತ್ಯದಿಂದ ಹೆಲಿಕಾಪ್ಟರ್ ರದ್ದು; ಜೆಮ್‌ಶೆಡ್‌ಪುರಕ್ಕೆ ರಸ್ತೆ ಮಾರ್ಗವಾಗಿ ಸಾಗಿದ ಪ್ರಧಾನಿ ಮೋದಿ

ನವದೆಹಲಿ: ಕಾರ್ಯಕ್ರಮವೊಂದರ ನಿಮಿತ್ತ ಜೆಮ್ ಶೆಡ್ ಪುರಕ್ಕೆ ತೆರಳಬೇಕಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಹೆಲಿಕಾಪ್ಟರ್ ಹವಾಮಾನ ವೈಪರೀತ್ಯದಿಂದಾಗಿ ಟೇಕ್ ಆಫ್ ಆಗದೇ ಅವರು ರಸ್ತೆ ಮಾರ್ಗವಾಗಿ ತೆರಳಿದ ಘಟನೆ ವರದಿಯಾಗಿದೆ.

ಪ್ರತಿಕೂಲ ಹವಾಮಾನದ ಹಿನ್ನೆಲೆ ಹೆಲಿಕಾಪ್ಟರ್ ಟೇಕಾಫ್ ಆಗದ ಕಾರಣ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ರಾಂಚಿ ವಿಮಾನ ನಿಲ್ದಾಣದಿಂದ ರಸ್ತೆ ಮೂಲಕ ಜೆಮ್‌ಶೆಡ್ ಪುರಕ್ಕೆ ತೆರಳಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಂಚಿಯ ಬಿರ್ಸಾಮುಂಡಾ ವಿಮಾನ ನಿಲ್ದಾಣದಿಂದ ಜೆಮ್‌ಶೆಡ್‌ಪುರದ ಗೋಪಾಲ್ ಮೈದಾನ ಸುಮಾರು 126 ಕಿ.ಮೀ ದೂರವಿದೆ. ಗೋಪಾಲ್ ಮೈದಾನದಲ್ಲಿ ಅವರು ಬಿಜೆಪಿಯ 'ಪರಿವರ್ತನ್ ಮಹಾ ರ್‍ಯಾಲಿ'ಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಈ ವರ್ಷಾಂತ್ಯದಲ್ಲಿ 81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಗೆ ನಡೆಯುವ ಚುನಾವಣೆಯ ದೃಷ್ಟಿಯಿಂದ ಪ್ರಧಾನಿ ಮೋದಿ ಅವರ ಈ ಭೇಟಿ ಮಹತ್ವ ಪಡೆದುಕೊಂಡಿದೆ. ಬುಡಕಟ್ಟು ಪ್ರಾಬಲ್ಯವಿರುವ 9 ಕ್ಷೇತ್ರಗಳು ಸೇರಿದಂತೆ 14 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಕೊಲ್ಹಾನ್ ಪ್ರದೇಶದಕ್ಕೆ ಮೋದಿ ಅವರು ಭೇಟಿ ನೀಡಲಿದ್ದಾರೆ.

ಮೈಸೂರಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ: ಸಾವಿರಾರು ಮಂದಿಯಿಂದ ಪ್ರಜಾಪ್ರಭುತ್ವ ಉಳಿವಿನ ಸಂದೇಶ

●59 ಕಿಮೀ ಉದ್ದದ ಮಾನವ ಸರಪಳಿ ●60 ಸಾವಿರ ಮಂದಿ ಭಾಗಿ ●ದಸರಾ ಗಜಪಡೆಯೂ ಸಾಥ್ ●ಸಂವಿಧಾನದ ಪೀಠಿಕೆ ವಾಚಿಸಿ ಪ್ರತಿಜ್ಞಾವಿಧಿ ಸ್ವೀಕಾರ


ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದ ಅಂಗವಾಗಿ ಮೈಸೂರಲ್ಲಿ ಭಾನುವಾರ ಏರ್ಪಡಿಸಿದ್ದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು

ವಾಹನ ಸವಾರರ ಪರದಾಟ

ಮೈಸೂರಿಂದ ತಿ.ನರಸೀಪುರ ಮೂಲಕ ಚಾಮರಾಜನಗರ ಜಿಲ್ಲಾ ಗಡಿವರೆಗೆ ಮಾನವ ಸರಪಳಿ ರಚಿಸಲಾಗಿದ್ದು, ರಸ್ತೆಯಲ್ಲಿ ಭಾನುವಾರ ಬೆಳಗ್ಗೆ 8 ಗಂಟೆಯಿಂದ ಅಡ್ಡ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿತ್ತು. 9 ಗಂಟೆಯಿಂದ 10.30ರವರೆಗೂ ಮಾನವ ಸರಪಳಿ ರಚನೆಯ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಇದರಿಂದ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಮಾನವ ಸರಪಳಿ ಮುಗಿದ ಕೆಲ ನಂತರ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಯಿತು.

ಮೈಸೂರು,ಸೆ.15(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಭಾನುವಾರ ಬೆಳಗ್ಗೆ 'ಜೈ ಹಿಂದ್' ಘೋಷಣೆ ಮೊಳಗಿಸುತ್ತಿದ್ದ ಸಾವಿರಾರು ವಿದ್ಯಾರ್ಥಿಗಳು, ಯುವ ಜನತೆ ಪ್ರಜಾಪ್ರಭುತ್ವದ ಉಳಿವಿಗಾಗಿ ಶ್ರಮಿಸುವ ಸಂದೇಶದೊಂದಿಗೆ ಮಾನವ ಸರಪಳಿ ರಚಿಸಿ ಸಮಾನತೆಯ ಸಂಕೇತವಾಗಿ ಗಮನ ಸೆಳೆದರು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿ.ಪಂ, ಮೈಸೂರು ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಸರ್ಕಾರೇತರ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ 'ಮಾನವ ಸರಪಳಿ' ಕಾರ್ಯಕ್ರಮದಲ್ಲಿ ಮೈಸೂರು ನಗರ ಹಾಗೂ ತಾಲೂಕಿನ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಎನ್‌ಸಿಸಿ ಕೆಡೆಟ್‌ಗಳು, ವೈದ್ಯಕೀಯ, ನರ್ಸಿಂಗ್ ವಿದ್ಯಾರ್ಥಿಗಳು, ಪೌರಕಾರ್ಮಿಕರು ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿಗಳು ಪಾಲ್ಗೊಂಡು ಪರಸ್ಪರ ಕೈ ಹಿಡಿದು ಮಾನವ ಸರಪಳಿ ರಚಿಸಿ, ನಾವೆಲ್ಲಾ ಒಂದು ಎಂಬ ಸಂದೇಶದೊಂದಿಗೆ ಪ್ರಜಾಪ್ರಭುತ್ವ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಕರ್ತವ್ಯವನ್ನು ನೆನಪಿಸಿದರು.

'ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಕಾಪಾಡುವುದಕ್ಕಾಗಿ ಪ್ರಜಾಪ್ರಭುತ್ವ ಬಲಪಡಿಸುತ್ತೇವೆ' ಸಂದೇಶದೊಂದಿಗೆ ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಸಿದ್ದಲಿಂಗಪುರ ಗ್ರಾಮದ ಬಳಿಯಿಂದ ಆರಂಭವಾದ ಮಾನವ ಸರಪಳಿ ಮಣಿಪಾಲ್ ಆಸ್ಪತ್ರೆ, ಫೌಂಟೇನ್ ವೃತ್ತ, ಗಾಂಧಿ ನಗರದ ಅಂಬೇಡ್ಕರ್ ವೃತ್ತ, ಅಶೋಕರಸ್ತೆ, ಪುರಭವನ, ಕೋಟೆ ಆಂಜನೇಯ ಸ್ವಾಮಿ ದೇವಾಲಯ, ಹಾರ್ಡಿಂಜ್ ಸರ್ಕಲ್, ಮೃಗಾಲಯದ ಎದುರು, ರೇಸ್‌ಕೋರ್ಸ್ ಸರ್ಕಲ್, ಸಂಗೊಳ್ಳಿ ರಾಯಣ್ಣ ಸರ್ಕಲ್, ಕಮಾನ್ ಗೇಟ್, ರಿಂಗ್ ರಸ್ತೆ, ವರುಣ, ವರಕೋಡು ಗೇಟ್, ಕೀಳನಪುರ, ಕೆಂಪಯ್ಯನಹುಂಡಿ, ಇಂಡುವಾಳು, ಗರ್ಗೇಶ್ವರಿ, ತಿ.ನರಸೀಪುರ ಪಟ್ಟಣ, ಗಂಜಾಂ ನರಸಿಂಹಸ್ವಾಮಿ ದೇವಸ್ಥಾನ, ಆಲಗೂಡು, ಕುರುಬೂರು, ಮಾಡ್ರಳ್ಳಿ ಗೇಟ್ ಮೂಲಕ ಸಾಗಿ ಜಿಲ್ಲೆಯ ಗಡಿಯಾದ ಮೂಗೂರು ಗ್ರಾಮದವರೆಗೂ ಮಾನವ ಸರಪಳಿ ಕಾರ್ಯಕ್ರಮ ನಡೆಯಿತು. ಮೈಸೂರು ತಾಲೂಕು ವ್ಯಾಪ್ತಿಯಿಂದ ಆರಂಭವಾದ ಮಾನವ ಸರಪಳಿ ನಗರ ಪ್ರವೇಶಿಸಿ, ನರಸೀಪುರ ತಾಲೂಕು ಮೂಲಕ ಚಾಮರಾಜನಗರ ಜಿಲ್ಲಾ ಗಡಿಯವರೆಗೆ 59 ಕಿ.ಮೀ ಉದ್ದ ಮಾನವ ಸರಪಳಿಯಲ್ಲಿ 60 ಸಾವಿರ ಮಂದಿ ಪಾಲ್ಗೊಂಡು ಗಮನ ಸೆಳೆದರು.

ಕಾರ್ಯಕ್ರಮದಿಂದ ದೂರವುಳಿದ ಬಿಜೆಪಿ–ಜೆಡಿಎಸ್

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರಲ್ಲಿ ಆಯೋಜಿಸಿದ್ದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಬಿಜೆಪಿ–ಜೆಡಿಎಸ್ ಪ್ರತಿನಿಧಿಗಳು, ಶಾಸಕರು ಹಾಗೂ ಮುಖಂಡರು ದೂರವುಳಿದಿದ್ದರು. ಕಾರ್ಯಕ್ರಮದಿಂದ ಅಂತರ ಕಾಯ್ದುಕೊಂಡು ಉಭಯ ಪಕ್ಷಗಳ ಮುಖಂಡರು ಗೈರು ಹಾಜರಾದರು.

ದಸರಾ ಗಜಪಡೆ ಸಾಥ್: ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮಾನವ ಸರಪಳಿಗೆ ಚಾಲನೆ ನೀಡಲು ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ತಾಲೀಮು ಮುಗಿಸಿ ಅರಮನೆಗೆ ಹಿಂದಿರುಗುತ್ತಿದ್ದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಯ 13 ಆನೆಗಳು ಮಾನವ ಸರಪಳಿಗೆ ಸಾಥ್ ನೀಡಿದವು. ಎಲ್ಲಾ ಆನೆಗಳನ್ನು ಸಾಲಾಗಿ ನಿಲ್ಲಿಸಿ ಮಾನವ ಸರಪಳಿ ಕಾರ್ಯಕ್ರಮಕ್ಕೆ ಮೆರಗು ತುಂಬಲಾಯಿತು.

ಮೊಳಗಿದ ಜೈಕಾರ: ಅರಮನೆ ಮುಂಭಾಗ ನಡೆದ ನಾಡಗೀತೆಯೊಂದಿಗೆ ಆರಂಭವಾದ ಸಭಾ ಕಾರ್ಯಕ್ರಮದಲ್ಲಿ ಸಂವಿಧಾನ ಪೀಠಿಕೆ ವಾಚಿಸಿ, ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಬಳಿಕ ಮಾನವ ಸರಪಳಿ ರಚಿಸಿ ಸಾಲಾಗಿ ನಿಂತಿದ್ದ ವಿದ್ಯಾರ್ಥಿಗಳು ಬೆಳಗ್ಗೆ 9.57ರಿಂದ 10.02ರವರೆಗೆ ಪರಸ್ಪರ ಕೈ ಹಿಡಿದು ಎರಡೂ ಕೈಗಳನ್ನು ಮೇಲೆತ್ತಿ 'ಜೈಹಿಂದ್', 'ಜೈ ಕರ್ನಾಟಕ' ಎಂಬ ಘೋಷಣೆ ಕೂಗಿದರು. ಅಧಿಕಾರಿಗಳು, ಬೆಳಿಗ್ಗೆಯ ತಾಲೀಮು ಮುಗಿಸಿ ಅರಮನೆಗೆ ವಾಪಸಾಗುತ್ತಿದ್ದ ದಸರಾ ಮಹೋತ್ಸವದ 13 ಆನೆಗಳನ್ನು ಕೂಡ ಸಾಲಿನಲ್ಲಿ ನಿಲ್ಲಿಸಿದ್ದು ವಿಶೇಷವಾಗಿತ್ತು. ಆನೆಗಳ ಫೋಟೊ ತೆಗೆದುಕೊಳ್ಳಲು ಜನರು ಮುಗಿಬಿದ್ದರು. 'ಜೈಹಿಂದ್' ಹಾಗೂ 'ಜೈ ಕರ್ನಾಟಕ' ಘೋಷಣೆ ಮೊಳಗಿಸಿದರು. ಬಳಿಕ ಮಾನವ ಸರಪಳಿ ಕಾರ್ಯಕ್ರಮ ಅಂತ್ಯಗೊಳಿಸಲಾಯಿತು.

ಸಹಾಯಹಸ್ತ ಚಾಚಬೇಕು: ಮಾನವ ಸರಪಳಿಗೆ ಚಾಲನೆ ನೀಡಿದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಭಾರತ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯುಳ್ಳ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವ ಉಳಿವಿಗಾಗಿ ಶ್ರಮಿಸುವುದು ಎಲ್ಲರ ಕರ್ತವ್ಯವೂ ಆಗಿದೆ. ಪ್ರಜಾಪ್ರಭುತ್ವದ ಉಳಿವಿಗಾಗಿ ರಾಜ್ಯದಾದ್ಯಂತ ಹಮ್ಮಿಕೊಂಡಿರುವ ಮಾನವ ಸರಪಳಿ ಕಾರ್ಯಕ್ರಮ ಇತಿಹಾಸ ನಿರ್ಮಾಣ ಮಾಡಿದೆ. ಕೈಹಿಡಿದು ನಿಲ್ಲುವುದರೊಂದಿಗೆ, ಪರಸ್ಪರ ಸಹಾಯಹಸ್ತ ಚಾಚುವುದನ್ನು ಎಲ್ಲರೂ ಮಾಡಬೇಕು. ಜಾತಿ ಯಾವುದೇ ಇರಬಹುದು. ಇಂತಹ ಜಾತಿ ಅಥವಾ ಧರ್ಮದಲ್ಲೇ ಹುಟ್ಟಬೇಕು ಎಂದು ಯಾರೂ ಅರ್ಜಿ ಹಾಕಿಕೊಂಡು ಹುಟ್ಟುವುದಿಲ್ಲ. ಜಾತಿ ವ್ಯವಸ್ಥೆ ಎನ್ನುವುದು ನಾವು ಮಾಡಿಕೊಂಡಿದ್ದೇವೆ. ನಮ್ಮ ಲೋಪಗಳನ್ನು ಸರಿಪಡಿಸಿಕೊಳ್ಳಬೇಕು. ಮಾನವೀಯ ಸಂಬಂಧವನ್ನು ಎತ್ತಿ ಹಿಡಿಯಬೇಕು ಎಂದು ಸಲಹೆ ನೀಡಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ದೇಶಕ್ಕೆ ಅತ್ಯುತ್ತಮ ಸಂವಿಧಾನವನ್ನು ನೀಡಿದ್ದಾರೆ. ಅದನ್ನು ನಾವೆಲ್ಲರೂ ನಮಗಾಗಿ ಅರ್ಪಿಸಿಕೊಂಡು ಶಾಸನವಾಗಿ ಒಪ್ಪಿಕೊಂಡಿದ್ದೇವೆ. ಸಮಾನತೆ ಎಂದಾಕ್ಷಣ ಆಸ್ತಿ–ಅಂತಸ್ತು ಪಡೆದುಕೊಳ್ಳುವುದು ಎಂದರ್ಥವಲ್ಲ. ಶೈಕ್ಷಣಿಕ, ಸಾಮಾಜಿಕ ಹಾಗೂ ಸಮಾನತೆ ಎಲ್ಲರಿಗೂ ದೊರೆಯಬೇಕು. ಆದರೆ, ಸ್ವಾತಂತ್ರ್ಯ ಬಂದು 75 ವರ್ಷಗಳೇ ಕಳೆದಿದ್ದರೂ ಸಮಾನತೆ ಸಾಧಿಸಲು ಸಾಧ್ಯವಾಗಿಲ್ಲ. ಎಲ್ಲರೂ ನಮ್ಮಂತೆಯೇ ಎಂದು ಎಲ್ಲರೂ ಭಾವಿಸಬೇಕು. ನಾವು ಪ್ರಾಣಿ–ಪಕ್ಷಿಗಳನ್ನು ಬಹಳ ಮಮತೆಯಿಂದ ನೋಡುತ್ತೇವೆ. ಆದರೆ, ಮನುಷ್ಯ– ಮನುಷ್ಯನ ನಡುವಿನ ಬಾಂಧವ್ಯ ಹೇಗಿದೆ ಎಂಬುದನ್ನು ನೋಡಿದಾಗ ಶೋಚನೀಯ ಪರಿಸ್ಥಿತಿ ಕಾಣಿಸುತ್ತಿದೆ. ಇದು ದೂರಾಗಬೇಕಾದರೆ, ಇತರರೂ ನಮ್ಮಂತೆಯೇ ಎಂದು ತಿಳಿದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ, 'ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮಾನತೆಯನ್ನು ಸಂವಿಧಾನ ನೀಡಿದೆ. ಎಲ್ಲರನ್ನೂ ಒಂದೆಂದು ಕಾಣಬೇಕು. ಎಲ್ಲರ ಹಿತವನ್ನೂ ಕಾಪಾಡಲು ನಾವೆಲ್ಲ ಮುಂದಾಗಬೇಕು' ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರವೀಂದ್ರ ಹೆಗಡೆ, ಸದಸ್ಯ ಕಾರ್ಯದರ್ಶಿ ಬಿ.ಜಿ. ದಿನೇಶ್, ಶಾಸಕರಾದ ಕೆ.ಹರೀಶ್ ಗೌಡ, ಡಿ.ರವಿಶಂಕರ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ.ಸಿಇಒ ಕೆ.ಎಂ. ಗಾಯಿತ್ರಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್ಪಿ ವಿಷ್ಣುವರ್ಧನ್, ಎಡಿಸಿ ಪಿ.ಶಿವರಾಜು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್, ಮಾಜಿ ಮೇಯರ್ ನಾರಾಯಣ ಪಾಲ್ಗೊಂಡಿದ್ದರು.

ಬಿಜೆಪಿ ನಾಯಕರಿಗೆ ಎರಡು ನಾಲಿಗೆ

ಮುನಿರತ್ನ ಪ್ರಕರಣ ಸಂಬಂಧ ಹೇಳಿಕೆಗೆ ಆಕ್ಷೇಪ


ಬಿ.ಸುಬ್ರಹ್ಮಣ್ಯ

ಮೈಸೂರು, ಸೆ.15(ಎಸ್‌ಬಿಡಿ)– ಬಿಜೆಪಿ ನಾಯಕರಿಗೆ ಎರಡು ನಾಲಿಗೆ ಎನ್ನುವುದು ಈಗ ಮತ್ತೆ ಸಾಬೀತಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಹೇಳಿದ್ದಾರೆ. ಶಾಸಕ ಮುನಿರತ್ನ ಅವರ ಬಂಧನದ ಬಗ್ಗೆ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ರಾಜ್ಯ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ಗುತ್ತಿಗೆದಾರ ಬಿಡುಗಡೆ ಮಾಡಿರುವ ಆಡಿಯೋ ಮುನಿರತ್ನ ಅವರದ್ದೇ ಎನ್ನುವುದನ್ನು ಖಾತ್ರಿ ಮಾಡಿಕೊಳ್ಳಬೇಕಿತ್ತು. ಅದನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಬೇಕಿತ್ತು ಎಂದಿದ್ದಾರೆ. ಆದರೆ ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿಗಳ ವಿರುದ್ಧ ಆರೋಪಿಸಿ, ಅದನ್ನು ನಿಜವೆಂಬಂತೆ ಬಿಂಬಿಸುವ ಪ್ರಯತ್ನ ನಡೆಸಿದ್ದಾರೆ. ಇದು ಬಿಜೆಪಿ ನಾಯಕರ ಇಬ್ಬಗೆತನಕ್ಕೆ ಸಾಕ್ಷಿ ಎಂದು ಸುಬ್ರಹ್ಮಣ್ಯ ವಾಗ್ದಾಳಿ ನಡೆಸಿದ್ದಾರೆ.

ಮುನಿರತ್ನ ಪ್ರಕರಣದಲ್ಲಿ ದ್ವೇಷದ ರಾಜಕಾರಣ ಮಾಡುವ ಅವಶ್ಯಕತೆ ಏನಿದೆ?. ಕಿರುಕುಳ ಅನುಭವಿಸಿರುವ ಗುತ್ತಿಗೆದಾರ ನೇರವಾಗಿ ಆರೋಪ ಮಾಡಿ, ದೂರು ನೀಡಿದ್ದಾರೆ. ಅದರ ಆಧಾರದಲ್ಲಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಇದಕ್ಕೆ ಮುಖ್ಯಮಂತ್ರಿಗಳ ವಿರುದ್ಧ ಮಾತನಾಡುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ.

ರಾಜಕೀಯಗೊಳಿಸಬೇಡಿ: ನಾಗಮಂಗಲದಲ್ಲಿ ಗಣೇಶ ಮೂರ್ತಿಯನ್ನು ಪೊಲೀಸ್ ವ್ಯಾನ್‌ನಲ್ಲಿ ತೆಗೆದುಕೊಂಡು ಹೋಗಿದ್ದರ ಬಗ್ಗೆ ಪ್ರಧಾನಿ ಮೋದಿ ಅವರು ಪ್ರತಿಕ್ರಿಯಿಸುವ ಮೂಲಕ ಕೋಮುಭಾವನೆ ಕೆರಳಿಸುವ ಪ್ರಯತ್ನ ನಡೆಸಿದ್ದಾರೆ. ಈ ಘಟನೆಯನ್ನು ರಾಜಕೀಯವಾಗಿ ಬಳಸಿಕೊಳ್ಳಲು ಮುಂದಾಗಿದ್ದಾರೆ. ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಪೊಲೀಸರ ಪ್ರಾಮಾಣಿಕ ತನಿಖೆಗೆ ಅಂದಿನ ಬಿಜೆಪಿ ಸರ್ಕಾರವೇ ಅವಕಾಶ ನೀಡಲಿಲ್ಲ ಎಂದು ಬಿಜೆಪಿಯ ಮಾಜಿ ಸಂಸದ ಪ್ರತಾಪ್ ಸಿಂಹ ಅವರೇ ಹೇಳಿದ್ದಾರೆ. ಹೀಗಿರುವಾಗ ರಾಜ್ಯ ಸರ್ಕಾರದ ಆಡಳಿತದ ಬಗ್ಗೆ ಮಾತನಾಡಲು ಬಿಜೆಪಿಯವರಿಗೆ ಯಾವ ನೈತಿಕತೆಯಿದೆ ಎಂದು ಕಿಡಿಕಾರಿದ್ದಾರೆ.

ಮೈಸೂರಿನ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪವಿತ್ರೋತ್ಸವ ಆರಂಭ


ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ವಿಜೃಂಭಣೆಯ ಪವಿತ್ರೋತ್ಸವ ವಿಶೇಷ ಪೂಜಾ ಮಹೋತ್ಸವ ನಡೆಸಲಾಯಿತು.

ಮೈಸೂರು, ಸೆ.15–ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದಲ್ಲಿ ಪವಿತ್ರೋತ್ಸವ ವಿಶೇಷ ಪೂಜಾ ಮಹೋತ್ಸವ ಆರಂಭವಾಗಿದೆ. ದೇವಾಲಯದ ಸಂಸ್ಥಾಪಕರಾದ ಶ್ರೀ ಪ್ರೊ.ಡಾ.ಭಾಷ್ಯಂ ಸ್ವಾಮೀಜಿ ಅವರ ನೇತೃತ್ವದಲ್ಲಿ ಪವಿತ್ರೋತ್ಸವದ ಪೂಜಾ ಕೈಂಕರ್ಯಗಳು ನಡೆದು, ಆಗಮಿಸಿದ್ದ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.

ಈ ಕುರಿತು ಮಾಹಿತಿ ನೀಡಿದ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಪ್ರಸ್ತುತ ಭಾದ್ರಪದ, ಶುಕ್ಲ ಏಕಾದಶಿಯಿಂದ ಆರಂಬಿಸಿ, ಕೃಷ್ಣ ದ್ವಿತೀಯವರೆಗೂ ಪವಿತ್ರೋತ್ಸವ ಸ್ವಾಮಿಯ ಸನ್ನಿಧಾನದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಲಿದೆ. ಪವಿತ್ರ ಎಂದರೇ ಶುದ್ಧವಾಗಿರುವುದು, ಉತ್ಸವ ಎಂದರೆ ಹಬ್ಬ, ಜಾತ್ರೆಯೆಂದೇ ಅರ್ಥ. ಹೆಸರಲ್ಲೇ ತಿಳಿಸಿರುವಂತೆ ಲೋಕದಲ್ಲಿ ಇರುವಂತಹ ದುಷ್ಟಶಕ್ತಿ ಗಳು ಸಂಹಾರವಾಗಲಿವೆ. ಯಾವುದಾದರೂ ಅನಾಹುತಗಳು ಜರುಗಿದ್ದಲ್ಲಿ ಈ ಉತ್ಸವ ಆಚರಣೆಯಿಂದಾಗಿ ನಿವಾರಣೆಯಾಗುತ್ತದೆ ಎನ್ನುವ ನಂಬಿಕೆ ಇದೆ ಎಂದರು.

ಈ ಉತ್ಸವದ ಕುರಿತ ಉಲ್ಲೇಖ ನಮಗೆ ಅಗ್ನಿಪುರಾಣ ಹಾಗೂ ಗರುಡ ಪುರಾಣಗಳಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ. ಪಂಚಾರಾತ್ರಗಮದಲ್ಲಿ ಪ್ರಸಿದ್ಧ ಸಂಹಿತೆಯಾದ ಜಯಕ್ಯ ಸಂಹಿತೆಯಲ್ಲಿ ಸರ್ವದೋಶ ನಿವಾರಣೆ ಈ ಉತ್ಸವದದಲ್ಲಿ ಪ್ರಮುಖ ಅಂಶವಾಗಿದೆ ಎಂದು ಅವರು ವಿವರಿಸಿದರು.

ಎಲ್ಲರಿಗೂ ಶಾಂತಿ, ಸಂತೋಷ, ಕಲ್ಯಾಣ ಎಲ್ಲವೂ ಲಭಿಸಲಿ ಎಂಬ ಉದ್ದೇಶದಿಂದ ಸುದರ್ಶನ ನಾರಸಿಂಹ ಕ್ಷೇತ್ರಗಳಲ್ಲಿ ಅಂಕನಾರ್ಪಣದಿಂದ ತೊಡಗಿ ಯಾಗ ಶಾಲ ಮಂಡಲರಾಧನೆಯೊಂದಿಗೆ ಭಗವಂತನಿಗೆ ಶುದ್ಧವಾದ ರೇಷ್ಮೆಯಿಂದ ಮಾಡಲ್ಪಟ್ಟ ಮಾಲೆಗಳನ್ನು ಪವಿತ್ರೀಕರಿಸಿ (ಶುದ್ಧೀಕರಿಸಿ) ಧರಿಸಲಾಗುವುದು. ಇದರಿಂದಾಗಿ ಜಗತ್ತಿಗೆ ಕ್ಷೇಮ ಉಂಟಾಗುತ್ತದೆ ಎಂಬ ನಂಬಿಕೆ ಇದೆ ಎಂದು ಅವರು ಹೇಳಿದರು.

ಸರ್ವದೋಷ ನಿವಾರಣೆ, ಸರ್ವಯಜ್ಞ ಫಲಪ್ರದ, ಸರ್ವದೋಷ ಉಪಶಮನ, ಸರ್ವ ಸುಷ್ಟಿಕರ, ಸರ್ವ ಕಾಮಪ್ರದ ಮತ್ತು ಸರ್ವ ಲೋಕಶಾಂತಿ ಈ ಪವಿತ್ರೋತ್ಸವದಿಂದ ಲಭಿಸಲಿದ್ದು, ಭಕ್ತಾದಿಗಳು ಆಗಮಿಸಿ, ಈ ಉತ್ಸವದಲ್ಲಿ ಪಾಲ್ಗೊಂಡು ಯೋಗಾ ನರಸಿಂಹ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದರು.

ಪೊಲೀಸ್ ಅಧಿಕಾರಿಯ ನವ ವಿವಾಹಿತ ಮಗಳು ಡೆತ್ ನೋಟ್ ಬರೆದಿಟ್ಟು ನಾಪತ್ತೆ


ಅನುಷಾ

ಮಂಡ್ಯ, ಸೆ.15– ಮಂಡ್ಯ ಜಿಲ್ಲೆಯ ಪೊಲೀಸ್ ಅಧಿಕಾರಿಯ ನವ ವಿವಾಹಿತ ಮಗಳು ಡೆತ್ ನೋಟ್ ಬರೆದಿಟ್ಟು ನಾಪತ್ತೆಯಾಗಿದ್ದಾರೆ.

ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಮಂಡ್ಯ ಮಹಿಳಾ ಠಾಣೆ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಮಗಳು ಡೆತ್‌ನೋಟ್ ಬರೆದಿಟ್ಟು ನಾಪತ್ತೆಯಾಗಿದ್ದಾರೆ. ನಾಪತ್ತೆ ಆಗಿರುವ ಗೃಹಿಣಿಯನ್ನು ಅನುಷಾ (24) ಎಂದು ಹೇಳಲಾಗಿದೆ. ಇವರನ್ನು ಕಳೆದ ನಾಲ್ಕು ತಿಂಗಳ ಹಿಂದಷ್ಟೇ ಬೆಂಗಳೂರಿನ ಬಿದರಹಳ್ಳಿ ನಿವಾಸ್ ದಿನೇಶ್ ಕುಮಾರ್ ಜೊತೆ ವಿವಾಹ ಮಾಡಿಕೊಡಲಾಗಿತ್ತು ಗಂಡನ ಮನೆಯವರ ಕಿರುಕುಳಕ್ಕೆ ಬೇಸತ್ತಿದ್ದ ಅನುಷಾ ಇದೀಗ, ಗಂಡ ದಿನೇಶ್, ನಾದಿನಿ ರಂಜಿನಿ, ಭಾವ ರಾಜೇಶ್ ಹಾಗೂ ಅತ್ತೆ ಕಾಂತಮ್ಮ ನನ್ನ ಸಾವಿಗೆ ಕಾರಣರೆಂದು ಡೆತ್‌ನೋಟ್ ಬರೆದಿಟ್ಟಿದ್ದಾರೆ. ಇನ್ನು ಡೆತ್ ನೋಟ್ ಪಕ್ಕದಲ್ಲಿ ತಾನು ಬಳಸುತ್ತಿದ್ದ ಮೊಬೈಲ್ ಹಾಗೂ ಗಂಡ ಕಟ್ಟಿದ್ದ ತಾಳಿಯನ್ನು ಬಿಚ್ಚಿಟ್ಟು ಮನೆಯಿಂದ ನಾಪತ್ತೆ ಆಗಿದ್ದಾರೆ.

ಡೆತ್‌ನೋಟ್‌ನಲ್ಲಿ ನಾನು ಒಂದು ಹೆಣ್ಣಾಗಿ ಇಷ್ಟೊಂದು ಅವಮಾನ ಸಹಿಸಲಾಗಲಿಲ್ಲ ಅದರಲ್ಲಿಯೂ ನಾನೊಬ್ಬ ಪೊಲೀಸ್ ಅಧಿಕಾರಿ ಮಗಳಾಗಿ ನನಗೆ ನ್ಯಾಯ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ನನಗಾದ ಮೋಸ ಯಾರಿಗೂ ಆಗಬಾರದು. ಅಪ್ಪ ನೀವು ಅವರಿಗೆಲ್ಲಾ ಶಿಕ್ಷೆ ಕೊಡಿಸಿ. ನನ್ನನ್ನು ಯಾರೂ ಹುಡುಕಬೇಡಿ. ಅಪ್ಪ, ಅಮ್ಮಾ ಸಾರಿ. ಉಳಿದ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಬರೆದಿದ್ದಾಳೆ. ಇಂದು ಬೆಳಗ್ಗೆ ವೇಳೆ ಈ ಡೆತ್ ನೋಟ್ ಪತ್ತೆಯಾಗಿದ್ದು, ಅನುಷಾಗಾಗಿ ಕುಟುಂಬಸ್ಥರು ಎಲ್ಲೆಡೆ ಹುಡುಕಾಟ ಆರಂಭಿಸಿದ್ದಾರೆ. ಈ ಬಗ್ಗೆ ಮಂಡ್ಯ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಲ್ಲಿ ಇಂಜಿನಿಯರ್ಸ್ ದಿನಾಚರಣೆ



57ನೇ ಇಂಜಿನಿಯರ್ಸ್‌ಗಳ ದಿನಾಚರಣೆ ಮತ್ತು 163ನೇ ಎಸ್.ಎಂ.ವಿಶ್ವೇಶ್ವರಯ್ಯ ಜಯಂತಿ ಪ್ರಯುಕ್ತ ಸಾಧಕ ಇಂಜಿನಿಯರ್‌ಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ.15(ಎಸ್‌ಪಿಎನ್)– ಇಂಜಿನಿಯರ್‌ಗಳ ಸೇವೆ ಸಮಾಜದಲ್ಲಿನ ಪ್ರತಿಯೊಬ್ಬರ ಜೀವನದಲ್ಲಿ 'ವೇ ಆಫ್ ಲೈಫ್ ಇದ್ದಂತೆ' ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್(ಇಂಡಿಯಾ) ಮೈಸೂರು ಘಟಕದ ವತಿಯಿಂದ 57ನೇ ಇಂಜಿನಿಯರ್ಸ್‌ಗಳ ದಿನಾಚರಣೆ ಮತ್ತು 163ನೇ ಎಸ್.ಎಂ.ವಿಶ್ವೇಶ್ವರಯ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

ನೂರು ವರ್ಷಗಳ ಹಿಂದೆ ಮೈಸೂರು ರಾಜಪ್ರಭುತ್ವದ ಆಡಳಿತಕ್ಕೆ ಒಳಪಟ್ಟಿತ್ತು. ಆಗ ಮೈಸೂರು ಚಿಕ್ಕದಾಗಿದ್ದರೂ ಸರ್.ಎಂ.ವಿಶ್ವೇಶ್ವರಯ್ಯ ಹಾಗೂ ಮೈಸೂರು ರಾಜರ ದೂರದೃಷ್ಟಿ ಫಲವಾಗಿ 'ಮೈಸೂರನ್ನು ಸುಂದರವಾಗಿ ಅಭಿವೃದ್ಧಿಪಡಿಸಿದ್ದರು. ಇದರಲ್ಲಿ ಇಂಜಿನಿಯರ್ ಮತ್ತು ಅರಮನೆ ಆಡಳಿತಗಾರರ ಕೊಡುಗೆ ಇದೆ. ಅದೇ ರೀತಿ ಕಳೆದ 30 ವರ್ಷಗಳಿಂದ ಐಟಿ–ಬಿಟಿಯಲ್ಲಿ ಇಂಜಿನಿಯರ್ ವಿದ್ಯಾರ್ಥಿಗಳ ಕೊಡುಗೆ ಅಪಾರ. ಇದು ದೇಶ ಅಭಿವೃದ್ಧಿಪಥದತ್ತ ಸಾಗಿ, ದೇಶದ ಆರ್ಥಿಕತೆಯ ದಿಕ್ಕನ್ನೇ ಬದಲಿಸಿದೆ ಎಂದರು.

2010ರಲ್ಲಿ ನಾನು ಇಂಜಿನಿಯರ್ ವಿದ್ಯಾಭ್ಯಾಸ ಮುಗಿಸಿದ ನಂತರ ಎಂಬಿಎ ಪದವಿ ಮುಗಿಸಿದೆ. ನಂತರ ಐಎಎಸ್ ಪರೀಕ್ಷೆ ತೆಗೆದುಕೊಂಡು ತೇರ್ಗಡೆಯಾದೆ. ಆದರೆ, ಈಗಲೂ ನಾನು ವಿದ್ಯಾಭ್ಯಾಸ ವಿಷಯದಲ್ಲಿ ಇಂಜಿನಿಯರ್ ವಿದ್ಯಾರ್ಥಿ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸಿದೆ. ಹಾಗಾಗಿ ಇಂಜಿನಿಯರ್‌ಗಳು ದೇಶ ಕಟ್ಟುವಲ್ಲಿ ಅಪಾರ ಕೊಡುಗೆ ನೀಡಿದ್ದು, ಇದರಿಂದ ದೇಶದ ಜಿಡಿಪಿ ಅಭಿವೃದ್ಧಿ ಗೊಳ್ಳಲು ತಮ್ಮ ಕೊಡುಗೆಯನ್ನು ದಾಖಲಿಸಿದ್ದಾರೆ ಎಂದರು.

ಸನ್ಮಾನ: ಈ ವೇಳೆ ವಿವಿಧ ಇಲಾಖೆಯಲ್ಲಿ ಸೇವೆಸಲ್ಲಿಸುತ್ತಿರುವ ಹಾಗೂ ಸೇವೆಯಿಂದ ನಿವೃತ್ತರಾದ ಡಾ.ರಾಘವೇಂದ್ರ ಪ್ರಸಾದ್, ಕಿಶೋರ್ ಚಂದ್ರ, ಡಾ.ಬಿ.ಎನ್.ಶೋಭ, ಅನಿಲ್‌ಕುಮಾರ್ ನಾಡಿಗ, ಎಂ.ಟಿ.ಮಂಜುನಾಥ್, ಡಾ.ಮಹೇಶ್ ರಾವ್, ಡಾ.ಟಿ.ಎಲ್.ಪದ್ಮನಾಭ, ನಿತಿನ್, ಕೆ.ಎಸ್.ಮಂಜುನಾಥ್, ಡಾ.ಜಿ.ಎಲ್.ಈಶ್ವರ್ ಪ್ರಸಾದ್ ದಂಪತಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ನಿವೃತ್ತ ಪ್ರಾಂಶುಪಾಲ ಡಾ.ಕೆ.ಎನ್. ವೆಂಕಟಕೃಷ್ಣ ರಾವ್, ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್(ಇಂಡಿಯಾ) ಮೈಸೂರು ಘಟಕದ ಅಧ್ಯಕ್ಷ ಡಾ.ಆರ್.ದೀಪು, ಕಾರ್ಯದರ್ಶಿ ಡಾ.ಎಸ್.ಎ.ಮೋಹನ ಕೃಷ್ಣ, ಎ.ಎಸ್.ಸತೀಶ್, ಬಿ.ಎಸ್.ಪ್ರಭಾಕರ, ಭಾಸ್ಕರ್, ಸುರೇಶ್‌ಬಾಬು, ಚಿನ್ನಸ್ವಾಮಿ, ಅನಂತ ಪದ್ಮನಾಭ ಸೇರಿದಂತೆ ಇತರರಿದ್ದರು.